# ಕನ್ನಡ

# ಬಾಲಭಾರತಿ

## ಏಳನೆಯ ತರಗತಿ



# ಭಾರತದ ಸಂವಿಧಾನ

## ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು- ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕಮನೋಭಾವನೆ, ಮಾನವೀಯತೆಮತ್ತು ಜಿಜ್ಞಾಸುಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

ಸರಕಾರ ನಿರ್ಣಯ ಕ್ರಮಾಂಕ: ಅಭ್ಯಾಸ - 2116/(ಪ್ರ.ಕ. 43/16) ಎಸ್‌ಡಿ-4 ದಿನಾಂಕ 25.4.2016 ಅನ್ವಯ ಸ್ಥಾಪಿಸಲಾದ ಸಮನ್ವಯ ಸಮಿತಿಯ ದಿ. 3.3.2017ರಂದು ನಡೆದ ಸಭೆಯಲ್ಲಿ ಈ ಪಠ್ಯಪುಸ್ತಕವನ್ನು ನಿರ್ಧಾರಿತ ಗೊಳಿಸಲಾಗಿದೆ.

## ಕನ್ನಡ

# ಬಾಲಭಾರತಿ

## ಏಳನೆಯ ತರಗತಿ



**ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 411004.**

BAVBH7

ತಮ್ಮ ಸ್ಮಾರ್ಟಫೋನದ ಮೇಲೆ DIKSHA App ಮೂಲಕ ಪಠ್ಯಪುಸ್ತಕದ ಮೊದಲನೆಯ ಪುಟದ ಮೇಲಿರುವ Q.R.Codeದ ಮೂಲಕ ಡಿಜಿಟಲ್ ಪಠ್ಯಪುಸ್ತಕ ಅದರಂತೆ ಪಠ್ಯಪುಸ್ತಕದಲ್ಲಿಯ ಆಶಯಕ್ಕನುಗುಣವಾಗಿ ಕೊಟ್ಟಿರುವ ಬೇರೆ Q.R.Codeದ ಮೂಲಕ ಅಧ್ಯಯನ-ಅಧ್ಯಾಪನದ ಸಲುವಾಗಿ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧವಾಗುವುದು.

ಪ್ರಥಮಾವೃತ್ತಿ : 2017
ಪುನರ್ಮುದ್ರಣ : 2022

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ – 4

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.


| | |
|---|---|
| ಕನ್ನಡ ಭಾಷಾ ಸಮಿತಿ : | ಡಾ. ಕೆ.ಕೆ. ಪತ್ತಾರ, ಅಧ್ಯಕ್ಷರು<br>ಶ್ರೀ. ಶಿವಬಾಳ ಕೆ. ಗೋಲಿ, ಸದಸ್ಯರು<br>ಶ್ರೀ. ಬಿ.ಎಸ್. ಕಾಪಸೆ, ಸದಸ್ಯರು<br>ಶ್ರೀ. ಹಣಮಂತ ಎಮ್. ಕುಂಭಾರ, ಸದಸ್ಯರು<br>ಶ್ರೀಮತಿ. ಜಯದೇವಿ ಆಯ್. ಉಕ್ಕಲಿ, ಸದಸ್ಯೆಯರು<br>ಡಾ. ಸದಾನಂದ ಎಂ. ಬಿಳ್ಳೂರ, ಸದಸ್ಯ– ಸಚಿವರು. |
| ಕನ್ನಡ ಅಭ್ಯಾಸಗಟ ಸದಸ್ಯರು : | ಶ್ರೀ. ಜಿ.ಡಿ. ಮೋರೆ<br>ಶ್ರೀ. ಟಿ.ವ್ಹಿ. ಸದಾನಂದ<br>ಶ್ರೀ. ಶ್ರೀಶೈಲ ಜಿ. ಅವಟಿ |
| ಸಂಯೋಜನ ಪ್ರಮುಖರು : | ಡಾ. ಸದಾನಂದ ಎಂ ಬಿಳ್ಳೂರ, ವಿಶೇಷಾಧಿಕಾರಿಗಳು ಕನ್ನಡ, ಪಾಠ್ಯಪುಸ್ತಕ ಮಂಡಳ, 'ಬಾಲಭಾರತಿ', ಪುಣೆ–4<br>ಶ್ರೀ. ಆರ್. ಎಮ್. ಗಣಾಚಾರಿ, ವಿಷಯ ಸಹಾಯಕರು ಕನ್ನಡ |
| ಚಿತ್ರಕಾರ :<br>ಮುಖಪುಟ : | ಶ್ರೀ. ರಾಜೇಂದ್ರ ಗಿರಧಾರಿ.<br>ಶ್ರೀ. ಆಭಾ ಭಾಗವತ. |
| ಅಕ್ಷರ ಜೋಡಣೆ : | ಕೇಸನ್ ಲ್ಯಾಂಗ್ವೇಜ್ ಬ್ಯೂರೋ |
| ನಿರ್ಮಿತಿ : | ಶ್ರೀ. ಸಚ್ಚಿತಾನಂದ ಆಫಳೆ. ಮುಖ್ಯ ನಿರ್ಮಿತಿ ಅಧಿಕಾರಿ<br>ಶ್ರೀ. ಸಚಿನ ಮೆಹತಾ, ನಿರ್ಮಿತಿ ಅಧಿಕಾರಿ<br>ಶ್ರೀ. ನಿತಿನ ವಾಣಿ, ಸಹಾಯಕ ನಿರ್ಮಿತಿ ಅಧಿಕಾರಿ |
| ಕಾಗದ : | 70 ಜಿ.ಎಸ್.ಎಮ್. ಕ್ರೀಮ್‌ವೋವ್ವ್ |
| ಮುದ್ರಣಾದೇಶ : | N/PB/2022-23/2,500 |
| ಮುದ್ರಕರು : | M/S. SHARP INDUSTRIES, RAIGAD |
| ಪ್ರಕಾಶಕರು : | ಶ್ರೀ. ವಿವೇಕ ಗೋಸಾವಿ, ನಿಯಂತ್ರಕ<br>ಪಾಠ್ಯಪುಸ್ತಕ ನಿರ್ಮಿತಿ ಮಂಡಳ, ಪ್ರಭಾದೇವಿ, ಮುಂಬಯಿ – 25 |

# ಭಾರತದ ಸಂವಿಧಾನ

ಪೀಠಿಕೆ

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**

ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ

ಮತ್ತು ಉಪಾಸನಾ **ಸ್ವಾತಂತ್ರ್ಯ;**

ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**

ನಿಶ್ಚಿತವಾಗಿ ದೊರೆಯುವಂತೆ ಮಾಡಲು

ಮತ್ತು ವ್ಯಕ್ತಿಗೌರವವನ್ನು

ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು

ಆಶ್ವಾಸನೆ ನೀಡುವ **ಬಂಧುತ್ವವನ್ನು**

ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;

**ನಮ್ಮ ಸಂವಿಧಾನ ಸಭೆಯಲ್ಲಿ**

ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# ಪ್ರಸ್ತಾವನೆ

ಪ್ರಿಯ ವಿದ್ಯಾರ್ಥಿ ಗೆಳೆಯರೆ,

ಏಳನೆಯ ಇಯತ್ತೆಯಲ್ಲಿ ನಿಮ್ಮೆಲ್ಲರಿಗೂ ಸ್ವಾಗತ. ನೀವೆಲ್ಲರೂ ಆರನೆಯ ಕನ್ನಡ ಬಾಲಭಾರತಿ ಪಠ್ಯಪುಸ್ತಕವನ್ನು ಅಭ್ಯಸಿಸಿದ್ದೀರಿ. ಈಗ ಹೊಸ ಪಠ್ಯಪುಸ್ತಕ ನೋಡಲು ಬಹಳಷ್ಟು ಆತುರರಾಗಿದ್ದೀರಿ. ಏಳನೆಯ ಇಯತ್ತೆಯ ಈ ಹೊಸ ಪಠ್ಯಪುಸ್ತಕವನ್ನು ನಿಮ್ಮ ಕೈಯಲ್ಲಿಡಲು ನಮಗೆ ಅತ್ಯಂತ ಆನಂದವೆನಿಸುತ್ತದೆ.

ಪಠ್ಯಪುಸ್ತಕಗಳು ನಿಮ್ಮ ಗೆಳೆಯರು. ಈ ಪಠ್ಯಪುಸ್ತಕದಲ್ಲಿ ಹೊಸ ಹೊಸ ಕಥೆ, ಕವಿತೆಗಳಿವೆ. ಏಳನೆಯ ಇಯತ್ತೆಯ ಪಠ್ಯಪುಸ್ತಕದಲ್ಲಿ ಗದ್ಯ, ಪದ್ಯ ಹಾಗೂ ವ್ಯಾಕರಣ ಇವುಗಳನ್ನು ಸ್ವತಂತ್ರವಾಗಿ ಕೊಡಲಾಗಿದೆ. ಆನಂದದಾಯಕ ಶಿಕ್ಷಣಕ್ಕಾಗಿ ನೀತಿಬೋಧಕಥೆ, ಹಾಡು, ವೈಜ್ಞಾನಿಕ ಮತ್ತು ದೇಶಭಕ್ತಿ ಗೀತೆಗಳನ್ನು ಅಳವಡಿಸಲಾಗಿದೆ. ಭಾಷಾ ಕೌಶಲ್ಯಗಳ ವಿಕಾಸಕ್ಕಾಗಿ ನಾವೀನ್ಯಪೂರ್ಣ ಅಭ್ಯಾಸ, ಉಪಕ್ರಮ ಇವುಗಳನ್ನು ಅಂತರ್ಭಾವಗೊಳಿಸಲಾಗಿದೆ. ಅದರಂತೆ ಮಹಾರಾಷ್ಟ್ರದ ವರ್ಣನೆಯ ಗೀತೆಯನ್ನು ಕೊಡಲಾಗಿದೆ. ಚಿತ್ರಗಳ ನಿರೀಕ್ಷಣೆ, ಚರ್ಚೆ, ವಿಚಾರ ಹಾಗೂ ಆ ವಿಷಯಗಳ ಕುರಿತು ಸ್ವಂತದ ಅನುಭವ-ಕಥನ ಮಾಡಿದುದರಿಂದ ನಿಮಗೆ ಸ್ವತಃ ಕಲ್ಪನೆ ಮಾಡಿ ಬರೆಯಲು ಬರುವುದು; ಅದರಂತೆ ವಿಚಾರವನ್ನು ವ್ಯಕ್ತಪಡಿಸಲು ಬರುವುದು. ಕವಿತೆ ಹಾಡಲು, ಸಂಭಾಷಣೆ ಓದಿ ತಿಳಿದುಕೊಂಡು ವರ್ಗದಲ್ಲಿ ಸಾದರ ಪಡಿಸುವುದು. ಕಥೆಗಳನ್ನು ಓದಿ ಕಲ್ಪನೆಯ ಲೋಕದಲ್ಲಿ ವಿಹರಿಸುವುದು; ಹಾಸ್ಯ ಕಥೆಗಳನ್ನು ಹೇಳಿ ನಗಿಸುವುದು ನಿಮಗೆ ಹಿಡಿಸುತ್ತದೆ. ಹಾಡಿನ ಸ್ಪರ್ಧೆ, ಅಂತ್ಯಾಕ್ಷರಿ ಸ್ಪರ್ಧೆಯಲ್ಲಿ ಭಾಗವಹಿಸಲು ನಿಮಗೆ ತುಂಬಾ ಇಷ್ಟ. ಈ ಎಲ್ಲ ಸಂಗತಿಗಳು ಈ ಪುಸ್ತಕದಲ್ಲಿ ಸಮಾವೇಶಗೊಂಡಿವೆ.

ಕನ್ನಡವು ನಮ್ಮ ಮಾತೃಭಾಷೆಯಾಗಿದೆ. ಮಾತೃಭಾಷೆಯಲ್ಲಿ ನಮ್ಮ ವಿಚಾರ, ಭಾವನೆಗಳನ್ನು ವ್ಯಕ್ತಪಡಿಸಲು, ಭಾಷೆ ಸಮೃದ್ಧಗೊಳ್ಳಲು ನಿಮಗೆ ಕನ್ನಡ ಭಾಷೆಯಲ್ಲಿ ಉತ್ತಮ ರೀತಿಯಾಗಿ ಸಂವಾದ ಸಾಧಿಸಲು ಬರುವಂತೆ ಆತ್ಮ ವಿಶ್ವಾಸದಿಂದ ಸ್ಪಷ್ಟವಾಗಿ ಉಚ್ಚರಿಸಲು ಯೋಗ್ಯ ಏರಿಳಿತದಿಂದ ಮಾತನಾಡಲು, ಪತ್ರ ವ್ಯವಹಾರ ಮಾಡಲು ಇತ್ಯಾದಿ ದೈನಂದಿನ ಜೀವನದಲ್ಲಿ ಅವಶ್ಯವಾದ ವಿಷಯಗಳನ್ನು ಬರೆಯಲು, ಓದಲು ಬರಬೇಕೆಂಬ ಅಪೇಕ್ಷೆ ಇದೆ. ವ್ಯಾಕರಣದ ಮೇಲೆ ಆಧಾರಿತ ಸರಳ ಪ್ರಶ್ನೆಗಳನ್ನು ಕೊಡಲಾಗಿದೆ. ಅದರಿಂದಾಗಿ ನೀವು ನಿಶ್ಚಿತವಾಗಿ ವ್ಯಾಕರಣವನ್ನು ಕಲಿಯುವಿರಿ.

ಏಳನೆಯ ಕನ್ನಡ ಬಾಲಭಾರತಿ ಈ ಪಠ್ಯಪುಸ್ತಕವು ನಿಮ್ಮೆಲರಿಗೂ ಅವಶ್ಯವಾಗಿ ಮೆಚ್ಚುಗೆಯಾಗುವುದು ಎಂದು ಆಶಿಸುತ್ತೇನೆ.

(ಡಾ. ಸುನಿಲ ಮಗರ)
ಸಂಚಾಲಕ
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ
ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ

ಪುಣೆ
ದಿನಾಂಕ: 28 ಮಾರ್ಚ್ 2017 ಯುಗಾದಿ
ಭಾರತೀಯ ಸೌರ : 7 ಚೈತ್ರ 1939.

## ಕನ್ನಡ ಏಳನೆಯ ಇಯತ್ತೆ : ಅಧ್ಯಯನ ನಿಷ್ಪತ್ತಿಗಳು

| ಸೂಚಿಸಿದ ಶೈಕ್ಷಣಿಕ ಪ್ರಕ್ರಿಯೆ | ಅಧ್ಯಯನ ನಿಷ್ಪತ್ತಿ |
| --- | --- |
| **ಎಲ್ಲ ವಿದ್ಯಾರ್ಥಿಗಳಿಗೆ (ಬೇರೆ ರೂಪದಲ್ಲಿಯ ಸಕ್ಷಮ ವಿದ್ಯಾರ್ಥಿ ಸಹಿತ) ವೈಯಕ್ತಿಕ, ಗುಂಪಿನಲ್ಲಿ ಕಾರ್ಯ ಮಾಡುವ ಅವಕಾಶ ಮತ್ತು ಪ್ರೋತ್ಸಾಹನೆ ಸಿಗುವ ಸಲುವಾಗಿ–**<br><br>• ತಮ್ಮ ಭಾಷೆಯಲ್ಲಿ ಮಾತನಾಡುವ ಮತ್ತು ಚರ್ಚೆ ಮಾಡುವ ಸಲುವಾಗಿ ಅವಕಾಶ ಕೊಡುವದು.<br><br>• ಉಪಯೋಗಿಸುವ ಭಾಷೆಯ ಸೂಕ್ಷ್ಮತೆಗಳ ಮೇಲೆ ಚರ್ಚೆ ಮಾಡುವ ಅವಕಾಶ ಕೊಡುವದು.<br><br>• ಗುಂಪಿನಲ್ಲಿ ಕಾರ್ಯ ಮಾಡುವ ಮತ್ತು ಒಬ್ಬರಿಗೊಬ್ಬರ ಕೆಲಸಗಳ ಬಗ್ಗೆ ಚರ್ಚೆ ಮಾಡುವದು, ವಿಚಾರಗಳ ಕೊಡುಕೊಳ್ಳುವಿಕೆ ಪ್ರಶ್ನೆಕೇಳುವದು ಇವುಗಳಿಗೆ ಸ್ವಾತಂತ್ರ್ಯಕೊಡಬೇಕು.<br><br>• ಕನ್ನಡದೊಂದಿಗೆ ತಮ್ಮ ಭಾಷೆಯಲ್ಲಿಯ ಸಾಹಿತ್ಯ ಓದುವ ಹಾಗೆಯೇ ಬರೆಯುವ ಅವಕಾಶ ಮತ್ತು ಅದರ ಮೇಲೆ ಚರ್ಚೆ ಮಾಡುವ ಸ್ವಾತಂತ್ರ್ಯ ಕೊಡಬೇಕು.<br><br>• ತಮ್ಮ ಪರಿಸರ, ಕಾಲ ಮತ್ತು ಸಮಾಜ ಇವುಗಳಿಗೆ ಸಂಬಂಧಿಸಿದ ವಿವಿಧ ಸಾಹಿತ್ಯಗಳ ವಾಚನ ಮತ್ತು ಅದರ ಮೇಲೆ ಚರ್ಚಿಸುವ ಅವಕಾಶ ಮಾಡಿಕೊಡಬೇಕು.<br><br>• ತಮ್ಮ ಭಾಷೆಯ ರಚನೆ ಮಾಡುತ್ತಿರುವಾಗ ಬರೆಯುವ ಸಂದರ್ಭಗಳ ಉಪಕ್ರಮಗಳನ್ನು ಆಯೋಜಿಸಬೇಕು. ಉದಾ. ಶಬ್ದಗಳ ಆಟ, ಅನೌಪಚಾರಿಕಪತ್ರ, ಸಂಸ್ಮರಣ ಇತ್ಯಾದಿ.<br><br>• ಸಕ್ರಿಯತೆ ಮತ್ತು ಜಾಗರೂಕತೆ ತರುವ ಸಾಹಿತ್ಯಗಳು (ಉದಾ: ವರ್ತಮಾನ ಪತ್ರಗಳು, ಪತ್ರಿಕೆಗಳು, ಚಲನ ಚಿತ್ರ ಮತ್ತು ದೃಕ್ ಶ್ರಾವ್ಯ ಸಾಧನೆಗಳು ಇತ್ಯಾದಿ) ನೋಡುವ ಕೇಳುವ, ಓದುವ ಬರೆಯುವ ಮತ್ತು ಚರ್ಚೆ ಮಾಡುವ ಅವಕಾಶ ಕೊಡಬೇಕು. | **ಅಧ್ಯಯನಾರ್ಥಿಗಳು –**<br>07.06.01 ವಿವಿಧ ಪ್ರಕಾರದ ಸಾಹಿತ್ಯ ಓದಿ ಗುಂಪಿನಲ್ಲಿ ಚರ್ಚೆ ಮಾಡುವನು.<br>07.06.02 ವಿವಿಧ ಲೇಖನದ ಪ್ರಕಾರಗಳಲ್ಲಿ ಲೇಖಕರು ಮಂಡಿಸಿದ ವಿಚಾರ/ಆಶಯ ತಿಳಿದುಕೊಳ್ಳುವನು. ಆಶಯಕ್ಕೆ ಸಂಬಂಧಿಸಿದ ಸ್ವಂತದ ಅನುಭವಗಳ ಆಧಾರದಿಂದ ಸಾಮ್ಯತೆ ಅಸಹಮತ ಹಾಗೂ ಸಹಮತ ಇವುಗಳನ್ನು ವ್ಯಕ್ತಪಡಿಸುವನು.<br>07.06.03 ಯಾವುದೇ ಚಿತ್ರ /ಘಟನೆ / ಪ್ರಸಂಗ ನೋಡಿ ಅದರ ಸ್ವಂತದ ಪದ್ಧತಿಯಿಂದ ಮೌಖಿಕ ಮತ್ತು ಲೇಖಿ ಸ್ವರೂಪದಲ್ಲಿ ವರ್ಣನೆ ಮಾಡುವನು.<br>07.06.04 ತಮ್ಮ ಪರಿಸರದಲ್ಲಿಯ ಆಡು ಭಾಷೆಯಲ್ಲಿಯ ಜಾನಪದ ಕಥೆಗಳು, ಜಾನಪದ ಗೀತೆಗಳು, ಇವುಗಳ ಆಸ್ವಾದ ತೆಗೆದುಕೊಂಡು ಚರ್ಚೆ ಮಾಡುವನು.<br>07.06.05 ವಿವಿಧ ಕಲೆಗಳಲ್ಲಿ (ಉದಾ. ಹಸ್ತಕಲೆ, ವಾಸ್ತುಕಲೆ, ಕೃಷಿ ಕಲೆ, ನೃತ್ಯಕಲೆ, ಚಿತ್ರಕಲೆ) ಭಾಷೆಯಸಲುವಾಗಿ ಉಪಯೋಗಿಸಲು ಜಿಜ್ಞಾಸೆ ವ್ಯಕ್ತಪಡಿಸುವನು ಅದನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುವನು.<br>07.06.06 ಬೇರೆ ಬೇರೆ ಸ್ಥಾನಿಕ, ಸಾಮಾಜಿಕ ಮತ್ತು ಭೌಗೋಲಿಕ ಘಟನೆಗಳ ಮೇಲೆ ತರ್ಕಶುದ್ಧ ಪ್ರತಿಭೆ ನೀಡುವನು. ಉದಾ. ಮಳೆಗಾಲದ ದೃಶ್ಯದ ಬಗ್ಗೆ ಚರ್ಚೆ ಮಾಡುವನು.<br>07.06.07 ವಿವಿಧ ಸಂವೇದನಶೀಲ ಅಂಶಗಳ ವಿಷಯವಾಗಿ (ಉದಾ. ಜಾತಿ, ಧರ್ಮ, ಪಂಥ, ಲಿಂಗ ನಡುವಳಿಕೆ ಇವುಗಳ ಬಗ್ಗೆ) ಸ್ವತದ ತಾರ್ಕಿಕ ವಿಚಾರ ಮೌಖಿಕ, ಲೇಖಿ ಸ್ವರೂಪದಲ್ಲಿ ವ್ಯಕ್ತ ಮಾಡುವನು.<br>07.06.08 ಕೆಲವೊಂದು ವಿಷಯದ ಸೂಕ್ಷ್ಮ ನಿರೀಕ್ಷಣೆ ಮಾಡಿ. ಕೆಲವೊಂದು ವಿಶಿಷ್ಠ ಅಂಶಗಳ ಶೋಧ ಮಾಡುವನು.<br>07.06.09 ವಿವಿಧ ಅಧ್ಯಯನ ಸಾಹಿತ್ಯದಲ್ಲಿಯ ಶಬ್ದ, ವಾಕ್ ಪ್ರಚಾರ ಪಡೆನುಡಿ ಇವುಗಳ ಅರ್ಥ ತಿಳಿದುಕೊಂಡು ಹೊಗಳುವನು.<br>07.06.10 ಓದಿದ ವಿಷಯದ ಮೇಲೆ ವಿಚಾರ ಮಾಡುವನು ಅಧಿಕ ಆಕಲನವಾಗುವ ಸಲುವಾಗಿ ಅದರ ಮೇಲೆ ಪ್ರಶ್ನೆ ಕೇಳುವನು.<br>07.06.11 ಪ್ರತ್ಯೇಕ ಕವಿತೆಗಳನ್ನು ಓದಿ ಅವುಗಳ ವಿವಿಧ ಪ್ರಕಾರ ಮತ್ತು ಶೈಲಿಯನ್ನು ಗುರುತಿಸುವನು. (ಉದಾ: ವರ್ಣನಾತ್ಮಕ, ಭಾವಾತ್ಮಕ ಮತ್ತು ನಿಸರ್ಗ ಚಿತ್ರ) |

| ಸೂಚಿಸಿದ ಶೈಕ್ಷಣಿಕ ಪ್ರಕ್ರಿಯೆ | ಅಧ್ಯಯನ ನಿಷ್ಪತ್ತಿ |
|---|---|
| • ಕನ್ನಡ ಭಾಷೆಯಲ್ಲಿಯ ಸಂದರ್ಭಕ್ಕೆನುಸರಿಸಿ ಭಾಷೆಯ ವಿಶ್ಲೇಷಣೆ (ವ್ಯಾಕರಣ, ವಾಕ್ಯರಚನೆ, ವಿರಾಮ ಚಿನ್ಹೆಗಳು) ಮಾಡುವ ಅವಕಾಶ ಮಾಡಿಕೊಡಬೇಕು.<br><br>• ಕಲ್ಪನಾಶಕ್ತಿ ಮತ್ತು ಸೃಜನಶೀಲತೆಯ ವಿಕಾಸ ಮಾಡುವ ಉಪಕ್ರಮಗಳ ಉದಾ: ಅಭಿನಯ, ಮೂಕ ಅಭಿನಯ, ಕವಿತೆಗಳು, ಪಾಠ, ಸೃಜನಾತ್ಮಕ ಲೇಖನಗಳು ಇತ್ಯಾದಿಗಳ ಆಯೋಜನೆ ಮಾಡಬೇಕು. ಮತ್ತು ಅದಕ್ಕೆ ಸಂಬಂಧಿಸಿದ ಹಸ್ತಲಿಖಿತ ಮತ್ತು ವರದಿ ಲೇಖನದ ಅವಕಾಶ ಮಾಡಿಕೊಡುವದು.<br><br>• ಶಾಲೆ/ವಿಭಾಗ/ಇಯತ್ತೆ ಇವುಗಳ ಪತ್ರಿಕೆಗಳು ಭಿತ್ತಿ ಪತ್ರಿಕೆಗಳನ್ನು ತಯಾರಿಸಲು ಪ್ರೋತ್ಸಾಹನೆ ಮಾಡಿಕೊಡಬೇಕು. | 07.06.12 ಕೆಲವೊಂದು ವಿಷಯ ಓದುವಾಗ ಅದನ್ನು ತಿಳಿದುಕೊಳ್ಳುವ ಸಲುವಾಗಿ ಅವಶ್ಯಕತೆಗಳಿಗನುಸಾರ ತಮ್ಮ ಸಹಪಾಠಿಗಳ/ ಶಿಕ್ಷಕರ ಸಹಾಯದಿಂದ ಉಪಯುಕ್ತ ಸಂದರ್ಭ ಸಾಹಿತ್ಯ (ಉದಾ.ಶಬ್ದಕೋಶ, ಇಂಟರನೆಟ್ ಇತರ ಸಂದರ್ಭ ಸಾಹಿತ್ಯ) ಅಥವಾ ಇತರ ಪುಸ್ತಕಗಳ ಸಹಾಯ ತೆಗೆದುಕೊಳ್ಳುವನು.<br>07.06.13 ವಿವಿಧ ಕಲೆಗಳಲ್ಲಿ (ಉದಾ: ಹಸ್ತಕಲೆ, ವಾಸ್ತುಕಲೆ, ಕೃಷಿಕಲೆ, ನೃತ್ಯಕಲೆ ಮತ್ತು ಚಿತ್ರಕಲೆ) ಉಪಯೋಗಿಸಲಾಗುವ ಭಾಷೆಯ ಸಲುವಾಗಿ ಜಿಜ್ಞಾಸೆಯನ್ನು ವ್ಯಕ್ತಪಡಿಸುವನು. ಮತ್ತು ಅದನ್ನು ಹೊಗಳುವನು.<br>07.06.14 ಭಾಷೆಯಲ್ಲಿಯ ಸೂಕ್ಷ್ಮತೆ/ ಲೇಖನ ನಿಯಮಗಳ ವ್ಯವಸ್ಥೆ ಹಾಗೆ ಹೊಸ ಶಬ್ದಗಳ ಉಪಯೋಗ ಮಾಡುವನು. (ಉದಾ: ಕೆಲವೊಂದು ಕವಿತೆಯಲ್ಲಿಯ ವಿಶೇಷ ಶಬ್ದ ರಚನೆ, ವಾಕ್ಯಾಂಶದ ಉಪಯೋಗ)<br>07.06.15 ವಿವಿಧ ಪ್ರಸಂಗಗಳಲ್ಲಿ / ಸಂದರ್ಭದಲ್ಲಿ ಹೇಳಲಾಗುವ ಬೇರೆಯವರ ವಿಚಾರ ಹರಟೆ ಸ್ವಂತದ ಶೈಲಿಯಲ್ಲಿ ಬರೆಯುವನು. (ಉದಾ:ತಮ್ಮ ಊರಲ್ಲಿಯ ಚಾವಡಿಯಲ್ಲಿಯ ಹರಟೆ ಅಥವಾ ತಮ್ಮ ಪರಿಸರದಲ್ಲಿಯ ಬೇರೆ ಬೇರೆ ಕೆಲಸ ಮಾಡುವ ಜನರ ವಿಷಯವಾಗಿ ಹರಟೆ ಹೊಡೆಯುವನು.<br>07.06.16 ಕನ್ನಡ ಭಾಷೆಯಲ್ಲಿಯ ಬೇರೆ ಬೇರೆ ಪ್ರಕಾರದ ಸಾಹಿತ್ಯ/ ವಿಷಯ(ಉದಾ: ವಾರ್ತಾಪತ್ರಿಕೆ ಕಥೆ, ಮಾಹಿತಿಯ ಸಾಹಿತ್ಯ ಇಂಟರನೆಟ್ ಮೇಲೆ ಪ್ರಸಾರವಾಗುವ ವಿವಿಧ ಸಾಹಿತ್ಯ ಇತ್ಯಾದಿ) ತಿಳಿದುಕೊಂಡು ಓದುವನು ಮತ್ತು ಅದರ ಬಗ್ಗೆ ತಮ್ಮ ಆಯ್ಕೆ, ಸ್ವಂತದ ವಿಚಾರ ತರ್ಕಶುದ್ಧ ರೀತಿಯಲ್ಲಿ ಬರೆಯುವನು.<br>07.06.17 ಸ್ವತಃದ ಅನುಭವ ಸ್ವತಃದ ಭಾಷಾ ಶೈಲಿಯಲ್ಲಿ ಬರೆಯುವನು.<br>07.06.18 ವಿವಿಧ ವಿಷಯ ಮತ್ತು ಉದ್ದೇಶದ ಸಲುವಾಗಿ ಬರೆಯುವಾಗ ಉಪಯುಕ್ತ ಶಬ್ದ, ಶಬ್ದ ಸಮೂಹ, ವಾಕ್ಯ ಪ್ರಚಾರ, ಪಡೆನುಡಿಗಳು, ವಿರಾಮ ಚಿನ್ಹೆಗಳು ಮತ್ತು ಇತರ ವ್ಯಾಕರಣದ ಘಟಕಗಳ ಉಪಯೋಗ ಮಾಡುವನು.<br>07.06.19 ಭಿತ್ತಿಪತ್ರಿಕೆ/ ಪತ್ರಿಕೆ ತಯಾರಿಸುವ ಸಲುವಾಗಿ ವಿವಿಧ ಪ್ರಕಾರದ ಸಾಹಿತ್ಯಗಳನ್ನು ಸಂಗ್ರಹಿಸುವನು, ಬರೆಯುವನು ಮತ್ತು ಅವುಗಳ ಸಂಪಾದನೆ ಮಾಡುವನು.<br>07.06.20 ವಿವಿಧ ಕ್ಷೇತ್ರದಲ್ಲಿಯ ವ್ಯಕ್ತಿಗಳ ಮಾಹಿತಿ ದೊರಕಿಸಿ ಕೊಳ್ಳುವ ಸಲುವಾಗಿ ಪ್ರಶ್ನೆಯನ್ನು ತಯಾರಿಸುವನು. ಉದಾ: ಸಂದರ್ಶನ ತೆಗೆದುಕೊಳ್ಳುವದು. |

# ಪರಿವಿಡಿ

## ಗದ್ಯ ವಿಭಾಗ


| ಅ. ನಂ | ಪಾಠಗಳು | ಲೇಖಕರು | ಪುಟ |
|---|---|---|---|
| 1. | ಅನಾಥ ರಕ್ಷಕ | ಎಚ್.ವ್ಹಿ. ಸಾವಿತ್ರಮ್ಮ | 1 |
| 2. | ವಚನ ಪಿತಾಮಹ | ಬಿ.ಎಂ. ಪಾಟೀಲ | 5 |
| 3. | ಆದರ್ಶ ಗ್ರಾಮ | – | 10 |
| 4. | ಸಿಂಧೂತಾಯಿ ಸಪಕಾಳ | – | 14 |
| 5. | ನಗೆಯ ಬಗೆ | ಎಸ್.ವ್ಹಿ. ರಾವ | 20 |
| 6. | ಇರುವುದನ್ನು ಇಷ್ಟಪಡು (ಚಿತ್ರಕಥೆ) | – | 24 |
| 7. | ಪರಿಸರ ಮಾಲಿನ್ಯ | ಎನ್.ಜಿ. ಹೆಗಡೆ | 30 |
| 8. | ಕ್ರಿಸ್‌ಮಸ್ | – | 35 |
| 9. | ಪೋಸ್ಟಮನ್ ಬರೆದ ಪತ್ರ | – | 39 |
| 10. | ಯೋಗಾಸನ-ಪ್ರಾಣಾಯಾಮ | – | 44 |
| 11. | ಕೌಂತೇಯ | ವಿ.ವಾ. ಶಿರವಾಡಕರ | 49 |
| 12. | ನರಿಯುಂ ಬಿಲನುಂ | ದುರ್ಗಸಿಂಹ | 56 |


## ಪದ್ಯ ವಿಭಾಗ


| ಅ. ನಂ | ಪದ್ಯಗಳು | ಕವಿ | ಪುಟ |
|---|---|---|---|
| 1. | ನೇಗಿಲಯೋಗಿ | ಕುವೆಂಪು | 59 |
| 2. | ಜಯವೆನ್ನಿ ಭಾರತಾಂಬೆಗೆ | ಸುನಿತಾ ಎಂ. ಶೆಟ್ಟಿ | 62 |
| 3. | ನೇತ್ರದಾನ | ಗೌರಾ. ಸಿ. ತಾಳಿಕೋಟಿಮಠ | 66 |
| 4. | ಕುಹೂ ಕುಹು | ಎಚ್.ಎಸ್. ವೆಂಕಟೇಶಮೂರ್ತಿ | 69 |
| 5. | ಎಳೆಯ ಕಂದನ ಕೂಗು | ಜಯದೇವಿತಾಯಿ ಲಿಗಾಡೆ | 72 |
| 6. | ಕೆಲಸ ಮಾಡು | ಬಾ.ಇ. ಕುಮಠೆ | 76 |
| 7. | ನೇಸರು ನಗುತಾನೆ | ದೊಡ್ಡರಂಗೇಗೌಡ | 80 |
| 8. | ಮಹಾರಾಷ್ಟ್ರ ಗೀತೆ | ಅ.ಬಾ. ಚಿಕ್ಕಮಣೂರ | 84 |
| 9. | ಸರ್ವೋದಯ ಗೀತೆ | | 89 |


## ವ್ಯಾಕರಣ ವಿಭಾಗ


| | | | |
|---|---|---|---|
| ★ | ವಾಕ್ಯ ಪ್ರಕಾರಗಳು | | 92 |
| ★ | ಸಂಧಿ | | 96 |
| ★ | ಸಮಾಸ | | 97 |
| ★ | ಕ್ರಿಯಾಪದ | | 99 |

# 1. ಅನಾಥ ರಕ್ಷಕ

**ಲೇಖಕರ ಪರಿಚಯ :** ಎಚ್. ವ್ಹಿ. ಸಾವಿತ್ರಮ್ಮ ಇವರು ಕನ್ನಡದಲ್ಲಿ ಸಣ್ಣ ಕತೆ, ಕಾದಂಬರಿ, ಜೀವನ ಚರಿತ್ರೆ, ಮಕ್ಕಳ ಸಾಹಿತ್ಯ - ಹೀಗೆ ವಿಪುಲವಾದ ಸಾಹಿತ್ಯ ರಚನೆ ಮಾಡಿದ್ದಾರೆ. ರವೀಂದ್ರನಾಥ ಠಾಕೂರರ ಕೆಲವು ಕೃತಿಗಳನ್ನು ಅನುವಾದ ಮಾಡಿದ್ದಾರೆ. ಇವರು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನೂ,ಇಂಡೊ-ಸೋವಿಯತ್ ಪ್ರಶಸ್ತಿಯನ್ನೂಪಡೆದಿದ್ದಾರೆ.



ಕೋಸಲ ದೇಶದಲ್ಲಿ ಒಬ್ಬ ರಾಜನಿದ್ದನು. ಆತನು ಬಡವರ ಬಂಧು, ಅನಾಥ ರಕ್ಷಕ ಎಂದು ಪ್ರಸಿದ್ಧನಾಗಿದ್ದನು. ಇದರಿಂದ ಕಾಶಿಯ ರಾಜನಿಗೆ ಅಸೂಯೆ ಉಂಟಾಯಿತು. ''ನನಗಿಂತಲೂ ಕೋಸಲ ರಾಜನೇ ಶ್ರೇಷ್ಠನೆಂದು ಪ್ರಜೆಗಳು ಭಾವಿಸುತ್ತಾರಲ್ಲ! ಔದಾರ್ಯದ ನಟನೆಯಿಂದ ನನ್ನ ಜನರ ಹೃದಯಗಳನ್ನುಸೆರೆಹಿಡಿಯಲು ಆತ ಆಟ ಹೂಡಿದ್ದಾನೆ! ಎಂಥ ಧೈರ್ಯ? ಸೈನಿಕರೇ, ಯುದ್ಧಕ್ಕೆ ಸಿದ್ಧರಾಗಿರಿ; ನನ್ನ ಕತ್ತಿಯೇ ಈ ಶ್ರೇಷ್ಠತೆಯ ಪರೀಕ್ಷೆ ಮಾಡಲಿ,'' ಎಂದು ಸಿಟ್ಟಿನಿಂದ ನುಡಿದನು.

ಹೀಗಾಗಿ ಕಾಶಿಯ ರಾಜನಿಗೂ ಕೋಸಲದ ರಾಜನಿಗೂ ಯುದ್ಧ ನಡೆಯಿತು. ಅನಿರೀಕ್ಷಿತವಾದ ಈ ಯುದ್ಧದಿಂದ ಕೋಸಲ ರಾಜನು ಸೋತು ಕಾಡನ್ನು ಸೇರಬೇಕಾಯಿತು. ವಿಜಯಿಯಾದ ಕಾಶಿಯ ರಾಜನು ಹೆಮ್ಮೆಯಿಂದ ಬೀಗುತ್ತ, ''ನೋಡಿದಿರಾ! ಆಯುಧಗಳ ಬಲ ಇದ್ದವನಿಗೆ ಮಾತ್ರ ಔದಾರ್ಯ ಒಪ್ಪುವುದು,'' ಎಂದು ನುಡಿದನು.

ಇತ್ತ ದೇಶವೆಲ್ಲ ದುಃಖದಲ್ಲಿ ಮುಳುಗಿತು. 'ಸತ್ಪುರುಷರಿಗೆ ಹಾನಿಯುಂಟಾದುದರಿಂದ ಪ್ರಳಯ ಸಮೀಪಿಸಿತು,' ಎಂದು ಜನರು ದುಃಖದಿಂದ ಮಾತನಾಡತೊಡಗಿದರು.

ಕಾಶಿಯ ರಾಜನು ಸಿಟ್ಟಿನಿಂದ ಹುಚ್ಚನಂತಾದನು. ''ಜನರು ಅವನಿಗಾಗಿ ಏಕೆ ದುಃಖಿಸುತ್ತಾರೆ? ಇದೇನು ಫಿತೂರಿ? ಸೋಲಿನ ದವಡೆಯಿಂದ ನನ್ನ ಜಯವನ್ನು ಸೆಳೆಯಲು ಪ್ರಯತ್ನಿಸುತ್ತಿದ್ದಾನೆಯೆ? ದೂತರೇ ಕೇಳಿ; ಕೋಸಲದ ರಾಜನನ್ನು ಹಿಡಿದು ಕೊಟ್ಟವರಿಗೆ ನೂರು ಚಿನ್ನದ ನಾಣ್ಯಗಳನ್ನು ಕೊಡುವೆನೆಂದು ರಾಜ್ಯದಲ್ಲೆಲ್ಲ ಡಂಗುರ ಸಾರಿರಿ'' ಎಂದು ಅಪ್ಪಣೆ ಇತ್ತನು.

ದೂತರು ಡಂಗುರ ಸಾರಿ ಅರಸನ ಅಪ್ಪಣೆಯನ್ನು ಎಲ್ಲಡೆಗೂ ತಿಳಿಸಿದರು. ಆದರೆ ಜನರು ಮಾತ್ರ ಆ ಮಾತು ಕೇಳಲಾರದೆ ಕಿವಿ ಮುಚ್ಚಿಕೊಂಡರು.

ಇತ್ತ ನಿರಾಶ್ರಿತನಾದ ಕೋಸಲದ ರಾಜನು ಕಾಡಿನಲ್ಲಿ ಒಂಟಿಯಾಗಿ ಸನ್ಯಾಸಿಯಂತೆ ಅಲೆಯುತ್ತಿದ್ದನು. ಒಂದು ದಿನ ಒಬ್ಬ ಪ್ರಯಾಣಿಕನು ಅವನನ್ನು ಕಂಡು ''ಎಲೈ, ಸನ್ಯಾಸಿಯೇ, ಕೋಸಲ ರಾಜ್ಯಕ್ಕೆ ಹೋಗುವ ದಾರಿ ಯಾವುದು ?'' ಎಂದು ಕೇಳಿದನು.

''ಆ ರಾಜ್ಯಕ್ಕೆ ನೀನು ಹೋಗಲು ಕಾರಣವೇನಪ್ಪ ?''ಎಂದು ರಾಜನು ಕೇಳಿದನು.

ಆಗ ಪ್ರಯಾಣಿಕನು, ''ನಾನೊಬ್ಬ ವರ್ತಕ; ಬಿರುಗಾಳಿಯಿಂದಾಗಿ ನನ್ನ ಹಡಗು ಮುಳುಗಿ ನಾನು ನಿರ್ಗತಿಕನಾದೆನು; ಕೋಸಲ ರಾಜನು ಅನಾಥರ ರಕ್ಷಕನೆಂದು ಕೇಳಿದ್ದೇನೆ. ಅವನ ಸಹಾಯವನ್ನು ಯಾಚಿಸಿ ಅಲ್ಲಿಗೆ ಹೊರಟಿದ್ದೇನೆ,'' ಎಂದನು.

ಸನ್ಯಾಸಿಯ ವೇಷದಲ್ಲಿದ್ದ ರಾಜನು ಮನಸ್ಸಿನಲ್ಲಿ ದುಃಖ ಪಟ್ಟನು. 'ತಾನು ಈ ವರ್ತಕನಿಗೆ ಸಹಾಯ ಮಾಡುವ ಸ್ಥಿತಿಯಲ್ಲಿ ಇಲ್ಲವಲ್ಲಾ,' ಎಂದು ಚಿಂತಿಸಿದನು. ಸ್ವಲ್ಪ ಯೋಚಿಸಿ ಹೇಳಿದನು,

''ಹೀಗೋ ನನ್ನೊಡನೆ ಬಾ; ನಿನ್ನ ಇಷ್ಟಾರ್ಥವನ್ನು ನೆರವೇರಿಸುವವನ ಬಳಿಗೆ ನಿನ್ನನ್ನು ಕರೆದುಕೊಂಡು ಹೋಗುತ್ತೇನೆ.''

ಹೀಗೆ ಹೇಳಿ ಸನ್ಯಾಸಿಯು ಆ ವರ್ತಕನೊಂದಿಗೆ ಕಾಶಿಯ ರಾಜನ ದರ್ಬಾರಕ್ಕೆ ಹೋಗಿ ಆ ರಾಜನಿಗೆ ನುಡಿದನು,

''ಅರಸನೇ, ಕೋಸಲ ದೇಶದ ರಾಜನನ್ನು ಸೆರೆಹಿಡಿದು ತಂದವರಿಗೆ ನೂರು ಚಿನ್ನದ ನಾಣ್ಯಗಳನ್ನು ಕೊಡುವುದಾಗಿ ಸಾರಿದ್ದೆಯಲ್ಲವೆ ? ನಾನೇ ಆ ರಾಜ. ಈಗ ನನ್ನನ್ನು ಬಂಧಿಸಿ ಆ ಬಹುಮಾನವನ್ನು ನನ್ನ ಸಂಗಡಿಗನಿಗೆ ಕೊಟ್ಟು ನಿನ್ನ ಮಾತನ್ನು ನಡೆಸಿಕೊಡು.''

ಸಭಿಕರು ನಿಃಶಬ್ದರಾಗಿ ನೋಡುತ್ತಿದ್ದರು. ಸೈನಿಕರು ಕೂಡ ಹೃದಯ ತುಂಬಿ ಬಂದ ಉದ್ವೇಗವನ್ನು ತಡೆಗಟ್ಟಲು ಕಷ್ಟಪಡುತ್ತಿದ್ದರು. ಕಾಶಿಯ ರಾಜನು ಆ ಸನ್ಯಾಸಿಯನ್ನು ಬಹಳ ಹೊತ್ತು ನೋಡುತ್ತ ಎದ್ದು ನಿಂತನು. ಸೋಲಿನಲ್ಲಿಯೂ ಗೆಲುವನ್ನು ಸಾಧಿಸಿದ ಕೋಸಲದ ರಾಜನ ಉದಾರತೆಗೆ ಆತನು ಬೆರಗಾದನು. ಕ್ಷಣಕಾಲ ಏನು ಹೇಳಬೇಕೆಂಬುದು ಹೊಳೆಯದೆ ಚಡಪಡಿಸಿದನು. ಕೊನೆಗೆ ಕಾಶಿಯ ರಾಜನು ಸನ್ಯಾಸಿಯೆಡೆಗೆ ಬಂದನು. ಅವನನ್ನು ಆಲಂಗಿಸಿ, ''ರಾಜನೇ, ನಿನ್ನ ಕೋಸಲ ರಾಜ್ಯವನ್ನು ಹಿಂದಕ್ಕೆ ತೆಗೆದುಕೋ; ಅದರೊಂದಿಗೆ ನನ್ನ ಗೆಳೆತನವನ್ನೂ ಸ್ವೀಕರಿಸು,'' ಎಂದು ಪ್ರೀತ್ಯಾದರಗಳಿಂದ ನುಡಿದನು. ಸನ್ಯಾಸಿಯ ಕೈ ಹಿಡಿದು ಸಿಂಹಾಸನದಲ್ಲಿ ಕುಳ್ಳಿರಿಸಿ ಆತನ ಧೂಳು ತುಂಬಿದ ತಲೆಯ ಮೇಲೆ ರತ್ನಾಲಂಕೃತವಾದ ಕಿರೀಟವನ್ನಿಟ್ಟನು. ಅದನ್ನು ಕಂಡು ಸಭಿಕರೆಲ್ಲ ಜಯಘೋಷ ಮಾಡಿದರು.

## ಶಬ್ದಗಳ ಅರ್ಥ

ಔದಾರ್ಯ – ಉದಾರತನ; ಅನಿರೀಕ್ಷಿತ – ನಿರೀಕ್ಷಿಸದೆ ಇದ್ದ ; ಪ್ರಳಯ – ಅಳಿವು;

ಫಿತೂರಿ – ಒಳಸಂಚು; ರತ್ನಾಲಂಕೃತ – ರತ್ನದಿಂದ ಸಿಂಗರಿಸಿದ

**ಪಡೆನುಡಿ :** ಆಟಹೂಡು – ಮೋಸದ ಉಪಾಯ ಮಾಡು, ಕಿವಿಮುಚ್ಚಿಕೊಳ್ಳು – ಸಹಿಸದೆ ಇರು.

★ **ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.**

ಅನಾಥ – ................ ; ನಿರಾಶ್ರಿತ – ................ ; ಅಲೆದಾಡು – ................ ;

ಉದ್ವೇಗ – ............... ; ವರ್ತಕ – ................

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಯಾವ ದೇಶದ ರಾಜನು ಬಡವರ ಬಂಧು ಎಂದು ಪ್ರಸಿದ್ಧನಾಗಿದ್ದನು ?

ಉತ್ತರ ........................................................................................

ಆ) ಕಾಶಿಯ ರಾಜನು ಏನೆಂದು ಡಂಗುರ ಸಾರಿದನು ?

ಉತ್ತರ ........................................................................................

ಇ) ವರ್ತಕನು ಸನ್ಯಾಸಿಗೆ ಏನೆಂದು ಕೇಳಿದನು ?

ಉತ್ತರ ..................................................................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

ಅ) ..................................................................................................

ಉತ್ತರ ..................................................................................................

ಆ) ..................................................................................................

ಉತ್ತರ ..................................................................................................

**ಪ್ರಶ್ನೆ 3) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಕಾಶಿಯ ರಾಜನ ವಿಜಯದ ನಂತರ ಕೋಸಲ ದೇಶದಲ್ಲಿ ಯಾವ ಸನ್ನಿವೇಶ ಕೂಡುಬಂದಿತು ?

ಉತ್ತರ ..................................................................................................

..................................................................................................

..................................................................................................

ಆ) ಸನ್ಯಾಸಿಯು ಕಾಶಿಯ ರಾಜನ ಬಳಿಗೆ ಹೋಗಿ ಏನು ಹೇಳಿದನು ?

ಉತ್ತರ ..................................................................................................

..................................................................................................

..................................................................................................

ಇ) ಕಾಶಿಯ ರಾಜನು ಸನ್ಯಾಸಿಯನ್ನು ಯಾವ ರೀತಿ ಸನ್ಮಾನಿಸಿದನು ?

ಉತ್ತರ ..................................................................................................

..................................................................................................

..................................................................................................

**ಪ್ರಶ್ನೆ 4) ಯೋಚಿಸಿ ಕೆಳಗಿನ ವಿಧಾನಗಳನ್ನು ಪೂರ್ತಿಗೊಳಿಸಿರಿ.**

ಅ) ಸೈನಿಕರು ಕೈಯಲ್ಲಿ ಗನ್ ಹಿಡಿದು ದೇಶದ ರಕ್ಷಣೆ ಮಾಡುತ್ತಾರೆ. ಹಾಗಾದರೆ ಪತ್ರಕರ್ತರು ಪೆನ್ ಹಿಡಿದು ದೇಶವಾಸಿಗಳಲ್ಲಿ .................. ಮೂಡಿಸುತ್ತಾರೆ.

ಆ) ವಸ್ತುಗಳನ್ನು ಕೊಂಡುಕೊಳ್ಳಲು ಹಣ ಬೇಕು. ಹಾಗಾದರೆ ಇನ್ನೊಬ್ಬರ ಮನಸ್ಸನ್ನು ಗೆದ್ದುಕೊಳ್ಳಲು ........................ ಬೇಕು.

ಇ) ವ್ಯಾಪಾರವನ್ನು ಮಾಡುವವರು ವರ್ತಕರು. ಹಾಗಾದರೆ ಪಾಠವನ್ನು ಬೋಧಿಸುವವರು..............

**ಪ್ರಶ್ನೆ 5) ಉದಾಹರಣೆಯಲ್ಲಿ ತೋರಿಸಿದಂತೆ ಶಬ್ದಗೋಪುರ ತಯಾರಿಸಿರಿ.**

**ಉದಾ :** ಮನೆ
ಇದು ಮನೆ
ಇದು ನನ್ನ ಮನೆ
ಈ ನನ್ನ ಮನೆ ದೊಡ್ಡದು
ಈ ನನ್ನ ಮನೆ ಬಹಳ ದೊಡ್ಡದು

ಅ) ರಾಜ

……………
…………………
…………………………
……………………………………
………………………………………………

ಆ) ರುಚಿ

……………
…………………
…………………………
……………………………………
………………………………………………

**ಪ್ರಶ್ನೆ 6) ಕೆಳಗಿನ ವಾಕ್ಯಗಳನ್ನು ಓದಿ ಕ್ರಮಬದ್ಧವಾಗಿ ಬರೆಯಿರಿ.**

★ ನೂರು ಚಿನ್ನದ ನಾಣ್ಯಗಳನ್ನು ಕೊಡುತ್ತೇವೆ.
★ ರತ್ನಾಲಂಕೃತವಾದ ಕಿರೀಟವನ್ನಿಟ್ಟನು.
★ ಸನ್ಯಾಸಿಯಂತೆ ಅಲೆಯುತ್ತಿದ್ದನು.
★ ನಾನೇ ಆ ರಾಜ.
★ ಸೈನಿಕರೆ, ಯುದ್ದಕ್ಕೆ ಸಿದ್ಧರಾಗಿರಿ.
★ ನಿನ್ನ ರಾಜ್ಯವನ್ನು ಹಿಂದಕ್ಕೆ ತೆಗೆದುಕೊ.

……………………………………………………………
……………………………………………………………
……………………………………………………………
……………………………………………………………
……………………………………………………………
……………………………………………………………

**ಉಪಕ್ರಮ : ರಾಜಾರಾಮಮೋಹನರಾಯರ ಸಾಮಾಜಿಕ ಕಾರ್ಯಗಳನ್ನು ಕುರಿತು ಬರೆಯಿರಿ.**

8B57IU

**ಶಸ್ತ್ರಕ್ಕೆ ಬಾಗಲಾರದವ ಶಾಸ್ತ್ರಕ್ಕೆ ಬಾಗುತ್ತಾನೆ**

**ಯೋಚಿಸಿ ಉತ್ತರಿಸಿರಿ .**


★ ಗುಂಪಿಗೆ ಸೇರದ ಪದವನ್ನು ಗುರುತಿಸಿರಿ.

1) ಹಸು 2) ಕತ್ತೆ 3) ಖಡ್ಗಮೃಗ 4) ಆಡು

1) ಕೋಳಿ 2) ಬಾತುಕೋಳಿ 3) ಪಾರಿವಾಳ 4) ನವಿಲು

# 2. ವಚನ ಪಿತಾಮಹ

**ಲೇಖಕರ ಪರಿಚಯ :** ಬಾಗಲಕೋಟ ಜಿಲ್ಲೆಯ ಮಹಾಲಿಂಗಪೂರದ ಮಹಾವಿದ್ಯಾಲಯದಲ್ಲಿ ಪ್ರಾಚಾರ್ಯರಾಗಿರುವ ಡಾ.ಬಿ.ಎಂ. ಪಾಟೀಲರು ಉತ್ತಮ ಬರಹಗಾರರು. ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಇವರ ಕುರಿತು ಪಿ.ಎಚ್.ಡಿ. ಮಹಾಪ್ರಬಂಧವನ್ನು ರಚಿಸಿದ್ದಾರೆ. 'ಶರಣಲೋಕ' ಎಂಬ ಮಾಸಪತ್ರಿಕೆಯನ್ನು ನಡೆಸುತ್ತಿದ್ದಾರೆ.



ಭವ್ಯ ಪರಂಪರೆ, ಅನುಪಮ ಸಂಸ್ಕೃತಿಯನ್ನು ಹೊಂದಿದ ನಮ್ಮ ನಾಡಿನ ಕೀರ್ತಿ ಅನೇಕ ಮಹನೀಯರಿಂದ ಉಜ್ವಲಗೊಂಡಿದೆ. ಅವರಲ್ಲಿ 'ವಚನಸಾಹಿತ್ಯ' ಎಂಬ ಅಮೃತವನ್ನು ನಮಗೆಲ್ಲ ಉಣಬಡಿಸಿದ ವಚನ ಪಿತಾಮಹರೆಂದೇ ಪ್ರಸಿದ್ಧಿ ಪಡೆದ ಡಾ. ಫ. ಗು. ಹಳಕಟ್ಟಿ ಅವರ ಹೆಸರು ಸ್ಮರಣೀಯ. ತಮ್ಮ ತ್ಯಾಗ, ಅಭಿಮಾನ, ಪರಿಶ್ರಮದಿಂದ ಹೊಸ ಇತಿಹಾಸ ಬರೆದರು. ಮನುಕುಲದ ಏಳ್ಗೆಗಾಗಿ ಸಂಕಲ್ಪತೊಟ್ಟು ಬದುಕಿದ ವಿರಳ ವ್ಯಕ್ತಿಗಳವರು. ಡಾ. ಫ. ಗು. ಹಳಕಟ್ಟಿಯವರು ಅಂದು ಮನಸ್ಸು ಮಾಡಿ ಕಾರ್ಯಪ್ರವೃತ್ತರಾಗಿರದಿದ್ದರೆ ಬಸವಾದಿ ಶಿವಶರಣರ ಚರಿತ್ರೆ, ವಚನಸಾಹಿತ್ಯ, ನಾಡಿನ ಸಂಸ್ಕೃತಿ ಭೂಗತವಾಗುತ್ತಿತ್ತು. ಶಿಕ್ಷಣ, ಧರ್ಮ, ಸಮಾಜ, ಪತ್ರಿಕೋದ್ಯಮ, ಸಹಕಾರ – ಹೀಗೆ ಹತ್ತಾರು ಕ್ಷೇತ್ರಗಳಲ್ಲಿ ಏಕವ್ಯಕ್ತಿಯಾಗಿ ದುಡಿದರು. ಅನೇಕ ಸಂಘ-ಸಂಸ್ಥೆಗಳನ್ನು ಸ್ಥಾಪಿಸಿದರು. ಅವು ಸಾವಿರಾರು ಕುಟುಂಬಗಳಿಗೆ ಆಶ್ರಯ, ಲಕ್ಷಾಂತರ ವಿದ್ಯಾರ್ಥಿಗಳ ಜ್ಞಾನದಾಹ ತಣಿಸುವಲ್ಲಿ ಇಂದಿಗೂ ಫಲಕಾರಿಯಾಗಿವೆ.

ಫ. ಗು. ಹಳಕಟ್ಟಿ ಅವರ ವ್ಯಕ್ತಿತ್ವ ಬಹುಮುಖವಾದದ್ದು, ಕಾರ್ಯಕ್ಷೇತ್ರ ತುಂಬ ವಿಸ್ತಾರವಾದದ್ದು. ಅವರು ಯೋಚಿಸದ, ಸಾಧಿಸದ ಸಾರ್ವಜನಿಕ ಕಾರ್ಯಗಳಿಲ್ಲ. ಶಿಕ್ಷಣ, ಸಾಹಿತ್ಯ, ಧರ್ಮ, ಸಮಾಜ, ನಾಡು-ನುಡಿ, ಸಂಸ್ಕೃತಿ, ಆರ್ಥಿಕ, ರಾಜಕೀಯ, ಔದ್ಯೋಗಿಕ, ಪತ್ರಿಕೋದ್ಯಮ – ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಅವರು ದುಡಿದಿದ್ದಾರೆ. ಅವರು ಹುಟ್ಟುಹಾಕಿದ ಹಲವಾರು ಸಂಘ-ಸಂಸ್ಥೆಗಳು ಇಂದಿಗೂ ರಾಜ್ಯ – ರಾಷ್ಟ್ರಮಟ್ಟದಲ್ಲಿ ಪ್ರತಿಷ್ಠೆ ಗಳಿಸಿರುವುದು ಹೆಮ್ಮೆಯ ಸಂಗತಿ. ಫ. ಗು. ಹಳಕಟ್ಟಿಯವರು ಸಾರ್ವಜನಿಕ ಕ್ಷೇತ್ರಗಳಲ್ಲಿ ಅಂದು ದುಡಿದ ಶ್ರಮ, ಮಾಡಿದ ತ್ಯಾಗ, ಸಾಧಿಸಿದ ಸಿದ್ಧಿ ಇಂದಿಗೂ ಸ್ಮರಣೀಯ ಮತ್ತು ಪೂಜ್ಯನೀಯ.

ದಿನಾಂಕ 2-7-1880 ರಂದು ಧಾರವಾಡದಲ್ಲಿ ಗುರುಬಸಪ್ಪ ಮತ್ತು ದಾನಮ್ಮ ಶರಣ ದಂಪತಿಗಳ ಮಗನಾಗಿ ಫ. ಗು. ಹಳಕಟ್ಟಿಯವರು ಜನಿಸಿದರು. ಹೆಸರು ಫಕೀರಪ್ಪ. ಇದು ಅವರ ಅಜ್ಜನ ಸ್ಮರಣೆಗಾಗಿ

ಇಟ್ಟಿದ್ದು. ಮೂರು ವರ್ಷದ ಬಾಲಕನಾಗಿದ್ದಾಗಲೇ ತಾಯಿ ದಾನಮ್ಮ ತೀರಿಕೊಡಳು. ಅಜ್ಜಿ ಬಸಮ್ಮ, ತಂದೆ ಗುರುಬಸಪ್ಪ ಇವರ ಆರೈಕೆಯಲ್ಲಿ ಫಕೀರಪ್ಪ ಬೆಳೆದು ದೊಡ್ಡವನಾದ.

ತಂದೆ ಗುರುಬಸಪ್ಪ ಶಾಲಾ ಶಿಕ್ಷಕರಿದ್ದರು. ಅವರು ಸಾಹಿತ್ಯ ಆರಾಧಕರಾಗಿದ್ದು ಹತ್ತೆಂಟು ಗ್ರಂಥಗಳನ್ನು ರಚಿಸಿದ್ದರು. ಬಾಲಕ ಫಕೀರಪ್ಪ ಸಂಪೂರ್ಣ ವ್ಯಕ್ತಿಯಾಗಿ ಬೆಳೆಯಬೇಕೆಂಬ ಹಂಬಲ ಹೊಂದಿದ್ದರು. ಫಕೀರಪ್ಪ ಬಿ.ಎ. ಮತ್ತು ಎಲ್.ಎಲ್.ಬಿ. ಪದವಿಯನ್ನು ಪಡೆದುಕೊಂಡರು.

ಫ. ಗು. ಹಳಕಟ್ಟಿಯವರು ವಿದ್ಯಾರ್ಥಿಯಾಗಿದ್ದಾಗಲೇ ಭಾಗೀರಥಿದೇವಿ ಜೊತೆ ವಿವಾಹವಾಗಿದ್ದರು. ಸುಸಂಸ್ಕೃತ ಮನೆತನದ ಭಾಗೀರಥಿದೇವಿ ಪತಿಗೆ ತಕ್ಕ ಹೆಂಡತಿಯಾಗಿದ್ದರು. ದಂಪತಿಗಳಿಬ್ಬರೂ ಬದುಕಿನ ಸಿಹಿ-ಕಹಿಗಳನ್ನು ಹಂಚಿಕೊಂಡು ಅನ್ಯೋನ್ಯವಾಗಿ ಬಾಳಿದರು.

ವಕೀಲಿವೃತ್ತಿ ಪ್ರಾರಂಭಿಸಲು ಫ. ಗು. ಹಳಕಟ್ಟಿಯವರು ಧಾರವಾಡದಿಂದ ವಿಜಾಪುರಕ್ಕೆ (ವಿಜಯಪುರ) ಬಂದು ನೆಲೆಸಿದರು. ಅಂದಿನ ಬ್ರಿಟಿಷ್ ಸರಕಾರ ಇವರ ನ್ಯಾಯನಿಷ್ಠುರತೆ, ಪ್ರಾಮಾಣಿಕತೆ ಮೆಚ್ಚಿ ಕ್ರಿ. ಶ. 1925ರಲ್ಲಿ ಪ್ರಾಸಿಕ್ಯೂಟರ್ ಎಂದು ನೇಮಿಸಿತು. ಫ. ಗು. ಹಳಕಟ್ಟಿಯವರು ವಕೀಲಿ ವೃತ್ತಿಯಲ್ಲಿ ಮುಂದುವರಿದಿದ್ದಾದರೆ ಜನಪ್ರಿಯ ವಕೀಲರಾಗಿ ಸಾಕಷ್ಟು ಹಣ ಗಳಿಸಿ ಶ್ರೀಮಂತಿಕೆಯ ಸುಪ್ಪತ್ತಿಗೆಯಲ್ಲಿ ಜೀವನ ನಡೆಸಬಹುದಾಗಿತ್ತು. ಆದರೆ ಹಾಗಾಗಲಿಲ್ಲ. ಆವಾಗಲೇ ವಚನ ಸಾಹಿತ್ಯ ಅವರ ಮನಸ್ಸನ್ನು ಆಕರ್ಷಿಸಿತ್ತು. ಹೀಗಾಗಿ ಧರ್ಮ, ಸಾಹಿತ್ಯ , ಸಂಸ್ಕೃತಿ, ಸಮಾಜಸೇವಾ ಕಾರ್ಯಗಳಿಗೆ ವಕೀಲಿವೃತ್ತಿ ತೊಡಕಾಗಬಾರದೆಂದು ಅದೇ ವರ್ಷ ಸ್ವಯಂ ನಿವೃತ್ತಿ ಹೊಂದಿದರು. ಇಡೀ ತಮ್ಮ ಬದುಕನ್ನು ಜನಪರ ಸೇವಾಕಾರ್ಯಗಳಿಗೆ ಮೀಸಲಿಟ್ಟರು.

'ವಚನಸಾಹಿತ್ಯ'ದ ಪುನರುಜ್ಜೀವನಕ್ಕೆ ಹಳಕಟ್ಟಿಯವರು ದುಡಿದ ಶ್ರಮ ವಿಶ್ವಮಾನ್ಯವಾದದ್ದು. ಕಾಲಗರ್ಭದಲ್ಲಿ ನಾಶವಾದ, ಹುಳು ಹುಪ್ಪಡಿಗಳಿಗೆ ಆಹಾರವಾಗಿ ಅಳಿದುಳಿದ ವಚನಸಾಹಿತ್ಯವನ್ನು ರಕ್ಷಿಸಲು ಅವರು ಮನೆ, ಮಠ, ಊರು ಹೀಗೆ ಎಲ್ಲೆಲ್ಲೂಸುತ್ತಿದರು. ಬಸವಾದಿ ಶರಣರ ವಚನಗಳನ್ನು ಸಂಶೋಧಿಸಿ, ಪರಿಷ್ಕರಿಸಿ, ಪ್ರಕಟಿಸಿ ಜನಸಾಮಾನ್ಯರ ಮನೆ-ಮನಗಳಿಗೆ ವ್ಯವಸ್ಥಿತವಾಗಿ ಮುಟ್ಟಿಸುವ ಕಾರ್ಯಕ್ಕೈಗೊಂಡವರಲ್ಲಿ ಹಳಕಟ್ಟಿಯವರೇ ಪ್ರಥಮರು. ಸುಮಾರು 300 ಜನ ಶಿವಶರಣರು ಆಗಿ ಹೋದದ್ದು, ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ವಚನರಾಶಿ ಇದ್ದದ್ದು ಯಾರಿಗೂ ಗೊತ್ತಿರಲಿಲ್ಲ. ಇದನೆಲ್ಲ ಗೊತ್ತು ಮಾಡಿಕೊಟ್ಟವರೇ ಹಳಕಟ್ಟಿಯವರು.

ವಚನಗಳ ಅನುವಾದ ಕಾರ್ಯಕ್ಕೆ ಶ್ರೀಕಾರ ಹಾಕಿದವರಲ್ಲಿ ಹಳಕಟ್ಟಿಯವರೇ ಅಗ್ರಮಾನ್ಯರೆಂಬುದು ಮುಖ್ಯ ಸಂಗತಿ. ಅನುವಾದದ ಮೂಲಕ ವಚನವಾಙ್ಮಯದ ಹಿರಿಮೆಯನ್ನು ಕನ್ನಡೇತರರಿಗೆ ಪರಿಚಯಿಸಿಕೊಟ್ಟ ಹಳಕಟ್ಟಿಯವರ ಕಾರ್ಯ ಅಭಿನಂದನೀಯವಾಗಿದೆ.

ಫ. ಗು. ಹಳಕಟ್ಟಿಯವರು ಸಂಪಾದಿಸಿಕೊಟ್ಟ 'ವಚನಶಾಸ್ತ್ರಸಾರ' ಎಂಬ ಮೂರು ಬೃಹತ್ತ ಸಂಪುಟಗಳು ವಚನಸಾಹಿತ್ಯದ ಇತಿಹಾಸದಲ್ಲಿ ಮೈಲುಗಲ್ಲುಗಳಾಗಿ ನಿಂತ ಮೇರುಕೃತಿಗಳಾಗಿವೆ. 'ಶೂನ್ಯಸಂಪಾದನೆ' 'ಏಕೋತ್ತರ ಶತಸ್ಥಲ' ಮುಂತಾದ ಹಲವಾರು ಮಹತ್ವದ ಮೌಲಿಕ ಗ್ರಂಥಗಳು ಹಳಕಟ್ಟಿಯವರ ಗಮನಾರ್ಹ ಕೊಡುಗೆಗಳಾಗಿವೆ.

ಶಿವಾನುಭವ ಮಾಸಪತ್ರಿಕೆ ಮತ್ತು ನವಕರ್ನಾಟಕ ವಾರಪತ್ರಿಕೆಗಳನ್ನು ಪ್ರಾರಂಭಿಸಿದರು. ಈ ಎರಡೂ ಪತ್ರಿಕೆಗಳ ಮೂಲಕ ಫ. ಗು. ಹಳಕಟ್ಟಿಯವರು ಜನಸಾಮಾನ್ಯರಲ್ಲಿ ಧಾರ್ಮಿಕ, ರಾಜಕೀಯ, ಔದ್ಯೋಗಿಕ, ಸಾಹಿತ್ಯ-ಸಾಂಸ್ಕೃತಿಕ ಪ್ರಜ್ಞೆ ಬೆಳೆಸುವ ಮುಖ್ಯ ಉದ್ದೇಶ ಹೊಂದಿದ್ದರು.

ಶಿಕ್ಷಣ ಹಾಗೂ ಜ್ಞಾನದ ದೃಷ್ಟಿಯಿಂದ ಮುಂಬಯಿ ಪ್ರಾಂತದಲ್ಲಿ ವಿಜಾಪುರವು (ವಿಜಯಪುರ) ಅತ್ಯಂತ ಹಿಂದುಳಿದ ಪ್ರದೇಶವಾಗಿತ್ತು. ಆದ್ದರಿಂದ ಈ ಪರಿಸ್ಥಿತಿಯನ್ನು ಸುಧಾರಿಸಲು ಅವರು ಎಲ್ಲ ಪ್ರಯತ್ನಗಳನ್ನು ಮಾಡಿದರು.

ಫ. ಗು. ಹಳಕಟ್ಟಿಯವರು ಒಬ್ಬ ಶಿಕ್ಷಣ ತಜ್ಞರಾಗಿದ್ದಂತೆ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರೂ ಆಗಿದ್ದುಂಟು. ಕ್ರಿ. ಶ. 1910ರಲ್ಲಿ ಬಿ.ಎಲ್.ಡಿ.ಇ. ಸಂಸ್ಥೆ, 1917ರಲ್ಲಿ ಶ್ರೀ ಸಿದ್ಧೇಶ್ವರ ಪ್ರೌಢಶಾಲೆ ಪ್ರಾರಂಭಿಸಿದರು.

ಇಂದು ವಿಜಾಪುರ (ವಿಜಯಪುರ) ಜಿಲ್ಲೆ ವಿದ್ಯಾಕೇಂದ್ರವಾಗಿ ಹತ್ತಾರು ಮುಖಗಳಿಂದ ಬೆಳೆಯುತ್ತಿರುವುದಕ್ಕೆ ಹಳಕಟ್ಟಿಯವರ ಅಂದಿನ ಶೈಕ್ಷಣಿಕ ಮುಂದಾಲೋಚನೆ, ಶ್ರಮ, ಕಾಳಜಿ ಮುಖ್ಯ ಕಾರಣವಾಗಿದೆ.

ಆರ್ಥಿಕ ಕ್ಷೇತ್ರದಲ್ಲಿಯೂಫ. ಗು. ಹಳಕಟ್ಟಿಯವರು ವಿಶೇಷವಾಗಿ ದುಡಿದಿದ್ದಾರೆ. 'ದಿ ವಿಜಾಪುರ ಶ್ರೀ ಸಿದ್ಧೇಶ್ವರ

ಸಹಕಾರಿ ಬ್ಯಾಂಕ್', 'ದಿ ವಿಲ್ಸನ್ ಆ್ಯಂಡಿಫ್ಯಾಮಿನ್ ಇನಸ್ಟಿಟ್ಯೂಟ್', ಒಕ್ಕಲಿಗರ ಸಹಕಾರಿ ಸಂಘ, ಭೂತನಾಳ ಕೆರೆ ನಿರ್ಮಾಣ ಯೋಜನೆ - ಇವೆಲ್ಲವುಗಳ ಮೂಲಕ ವಿಜಾಪುರದ ಜನತೆಗೆ ಆರ್ಥಿಕ ಭದ್ರತೆ ಒದಗಿಸಿದ್ದಾರೆ. ಇಂದು ಸಿದ್ದೇಶ್ವರ ಬ್ಯಾಂಕ್ ರಾಜ್ಯದಲ್ಲಿಯೇ ಪ್ರತಿಷ್ಠಿತ ಸಹಕಾರಿ ಬ್ಯಾಂಕೆಂದು ಹೆಸರು ಗಳಿಸಿದೆ.

ಫ.ಗು. ಹಳಕಟ್ಟಿಯವರು ವಿವಿಧ ಕ್ಷೇತ್ರಗಳಲ್ಲಿ ಮಾಡಿದ ಅಪಾರ ಸಾಧನೆಗಳನ್ನು ಸರಕಾರ, ಸಮಾಜ ಮತ್ತು ಜನತೆ ಮೆಚ್ಚಿ ಅಭಿಮಾನಪರವಾಗಿ ಗೌರವ, ಪ್ರಶಸ್ತಿ, ಸನ್ಮಾನ ನೀಡಿ ಕೃತಜ್ಞತೆ ವ್ಯಕ್ತಪಡಿಸಿದ್ದುಂಟು. ಹಳಕಟ್ಟಿಯವರ ವ್ಯಕ್ತಿತ್ವಸಾಧನೆಯ ಕುರುಹುಗಳಾಗಿರುವ ಅವುಗಳಲ್ಲಿ ಕೆಲವನ್ನು ಉಲ್ಲೇಖಿಸುವುದಾದರೆ 'ವಚನಪಿತಾಮಹ' 'ರಾವ್ ಸಾಹೇಬ' 'ಕರ್ನಾಟಕದ ಮ್ಯಾಕ್ಸಮುಲ್ಲರ್' 'ಡಾಕ್ಟರ್ ಆಫ್ ಲಿಟ್ರೇಚರ್' 'ಇಳೆಗಿಳಿದ ಶರಣ' 'ಅಭಿನವ ಬಸವಣ್ಣ' ಮೊದಲಾಗಿ ಕರೆದು ಅವರ ಅಗಣಿತ ಸೇವೆಯನ್ನು ಬಾಯಿತುಂಬ ಹೊಗಳಿದ್ದಾರೆ.

ಇದಲ್ಲದೆ ಹಳಕಟ್ಟಿಯವರ ಕ್ರಿಯಾಶೀಲ ಸಾಧನೆಗಳನ್ನು ಮನ್ನಿಸಿ ಜನತೆ ಅವರನ್ನು ನೂರಾರು ಕಡೆಗಳಲ್ಲಿ ಸನ್ಮಾನಿಸಿ ಗೌರವಿಸಿದ್ದುಂಟು. ನಾಡಿನಾದ್ಯಂತ ವರ್ಧಂತ್ಯುತ್ಸವ ಆಚರಿಸಲಾಗಿದೆ. ಹಳಕಟ್ಟಿಯವರು ದಿನಾಂಕ 29-7-1964ರಂದು ಲಿಂಗೈಕ್ಯರಾದ ತರುವಾಯ ಅವರ ಸ್ಮರಣಾರ್ಥ ಹಲವಾರು ಸಂಘ-ಸಂಸ್ಥೆಗಳು, ಅಭಿಮಾನಿಗಳು ರಚನಾತ್ಮಕ ಕಾರ್ಯಗಳನ್ನು ಹಮ್ಮಿಕೊಂಡದ್ದುಂಟು. ಕರ್ನಾಟಕ ಘನಸರಕಾರ ಶತಮಾನೋತ್ಸವವನ್ನು ಅತ್ಯಂತ ಅರ್ಥಪೂರ್ಣವಾಗಿ ನಾಡಿನಾದ್ಯಂತ ಆಚರಿಸಿ ಅವರಿಗೆ ಗೌರವ ಸಲ್ಲಿಸಿದೆ.

ಫ. ಗು. ಹಳಕಟ್ಟಿ ಅವರದು ಪರಿಶುದ್ಧ ಚಾರಿತ್ರ್ಯ. ಬಡತನ ಅವರ ಜೀವನದ ಸಂಗಾತಿಯಾಗಿತ್ತು. ಆದರೆ ಯಾರಲ್ಲಿಯೂ ಕೈಯೊಡ್ಡಿ ಬೇಡದ ಸ್ವಾಭಿಮಾನ ಅವರಲ್ಲಿತ್ತು. ಹೊಗಳಿಕೆಗಳನ್ನು ಇಷ್ಟಪಡುತ್ತಿರಲಿಲ್ಲ. ಬತ್ತದ ಉತ್ಸಾಹ ಅವರ ಎಲ್ಲ ಕಾರ್ಯಗಳಲ್ಲಿ ಎದ್ದು ತೋರುತ್ತಿತ್ತು.

ಕಾಯಕವನ್ನು ಪೂಜೆ ಎಂದು ಪ್ರಾಮಾಣಿಕವಾಗಿ ದುಡಿದ ಅವರ ಶ್ರಮ ಸಂಸ್ಕೃತಿ ಇತರರಿಗೆ ಆದರ್ಶ ಮತ್ತು ಸ್ಫೂರ್ತಿದಾಯಕವಾದುದು.

## ಶಬ್ದಗಳ ಅರ್ಥ

ಉಜ್ವಲ - ಪ್ರಕಾಶಮಾನವಾದ ; ಏಳ್ಗೆ - ಉನ್ನತಿ ; ವಿರಳ - ಅಪರೂಪ ; ಭೂಗತ - ಅಡಗಿಸಿಕೊಂಡ ; ವಿಸ್ತಾರ - ಹರವು ; ವಾಙ್ಮಯ-ಸಾಹಿತ್ಯ

★ ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಜ್ಞಾನದಾಹ - ................ ; ಸುಪ್ಪತ್ತಿಗೆ - ............. ;ಕುರುಹು - ............... ;

ವರ್ಧಂತ್ಯುತ್ಸವ - .................

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) 'ವಚನಸಾಹಿತ್ಯ' ಎಂಬ ಅಮೃತವನ್ನು ನಮಗೆ ಯಾರು ಉಣಬಡಿಸಿದ್ದಾರೆ ?

ಉತ್ತರ ...........................................................................................

ಆ) ಡಾ. ಫ. ಗು. ಹಳಕಟ್ಟಿಯವರು ಧಾರವಾಡದಿಂದ ವಿಜಾಪುರಕ್ಕೆ ಬಂದು ಏಕೆ ನೆಲೆಸಿದರು ?

ಉತ್ತರ ...........................................................................................

ಇ) ಡಾ. ಫ. ಗು. ಹಳಕಟ್ಟಿಯವರು ಪ್ರಾರಂಭಿಸಿದ ಪತ್ರಿಕೆಗಳು ಯಾವವು ?

ಉತ್ತರ ...........................................................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತು ಬರೆಯಿರಿ.**

ಅ) ..........................................................................................

ಉತ್ತರ ..........................................................................................

ಆ) ..........................................................................................

ಉತ್ತರ ..........................................................................................

**ಪ್ರಶ್ನೆ 3) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಡಾ. ಫ. ಗು. ಹಳಕಟ್ಟಿಯವರು ಯಾವ-ಯಾವ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ ?

ಉತ್ತರ ..........................................................................................

..........................................................................................

ಆ) 'ವಚನಸಾಹಿತ್ಯ'ದ ಪುನರುಜ್ಜೀವನಕ್ಕಾಗಿ ಹಳಕಟ್ಟಿಯವರು ಮಾಡಿದ ಕಾರ್ಯಗಳಾವವು?

ಉತ್ತರ ..........................................................................................

..........................................................................................

**ಪ್ರಶ್ನೆ 4) ಹೊಂದಿಸಿ ಬರೆಯಿರಿ.**

| | | |
|---|---|---|
| 1) ಬಸವಣ್ಣ | | ಅ) ಚೆನ್ನಮಲ್ಲಿಕಾರ್ಜುನ |
| 2) ಅಲ್ಲಮಪ್ರಭು | | ಆ) ರಾಮನಾಥಾ |
| 3) ಅಕ್ಕಮಹಾದೇವಿ | | ಇ) ಕೂಡಲ ಸಂಗಮದೇವ |
| 4) ಜೇಡರ ದಾಸಿಮಯ್ಯ | | ಈ) ಗುಹೇಶ್ವರಾ |

**ಪ್ರಶ್ನೆ 5) ಕೆಳಗಿನ ಗದ್ಯಖಂಡವನ್ನು ಓದಿರಿ. ಎರಡು ಪ್ರಶ್ನೆಗಳನ್ನು ಢಚಿಸಿ ಉತ್ತರ ಬರೆಯಿರಿ.**

ಉತ್ತಂಗಿ ಚೆನ್ನಪ್ಪ ಕಾಲ : ಕ್ರಿ. ಶ. 1881 - 1962

ಕ್ರೈಸ್ತಧರ್ಮದುಪದೇಶಕರಾಗಿದ್ದ ಇವರ ಪೂರ್ಣ ಹೆಸರು ರೆವರೆಂಡ ಚೆನ್ನಪ್ಪದಾನಿಯೇಲಪ್ಪ ಉತ್ತಂಗಿ. ಇವರ ಕಾವ್ಯನಾಮ 'ತಿರುಳ್ಗನ್ನಡತಿರುಕ '. ಧಾರವಾಡದಲ್ಲಿ ಕ್ರಿ. ಶ. 1881 ಡಿಸೆಂಬರ ತಿಂಗಳ ಒಂಬತ್ತನೆಯ ತಾರೀಖಿನಂದು ಜನಿಸಿದರು. ಅಸ್ತವ್ಯಸ್ತಗೊಂಡಿದ್ದಸರ್ವಜ್ಞನ ವಚನಗಳನ್ನು ಶಾಸ್ತ್ರೀಯವಾಗಿ ಅಣಿಗೊಳಿಸಿ ಸರ್ವಜ್ಞನ ವಾಣಿಯನ್ನು ಮನೆ ಮನೆಗೆ ತಲುಪಿಸುವ ಮೂಲಕ ಸರ್ವಜ್ಞನ ಸಮಗ್ರ ದರ್ಶನವನ್ನು ಮಾಡಿಸಿದರು. ಕ್ರಿ. ಶ. 1915ರಲ್ಲಿ ಬರವಣಿಗೆಯನ್ನು ಆರಂಭಿಸಿದ ಇವರು ಒಟ್ಟು 18 ಕೃತಿಗಳನ್ನು ರಚಿಸಿದ್ದಾರೆ. ಚೆನ್ನಪ್ಪನವರಿಗೆ ಶಾಶ್ವತವಾಗಿ ಸಾಹಿತ್ಯರಂಗದಲ್ಲಿ ಕೀರ್ತಿಯನ್ನು ತಂದುಕೊಟ್ಟಿದ್ದು ಅವರ ಸಂಪಾದಿತ ಗ್ರಂಥ ''ಸರ್ವಜ್ಞನ ವಚನಗಳು''. ಇದರಲ್ಲಿ ಸುಮಾರು 2000 ವಚನಗಳನ್ನು ಪರಿಷ್ಕರಿಸಿದ್ದಾರೆ. ಇವರ ಸಂಪಾದಿತ ಕೃತಿ ''ಸಿದ್ಧರಾಮ ಸಾಹಿತ್ಯ ಸಂಗ್ರಹ''ಕ್ಕೆ ದೇವರಾಜ ಬಹದ್ದೂರ ದತ್ತಿ ಬಹುಮಾನ ಲಭಿಸಿದೆ.

1) ..............................................................................................

ಉತ್ತರ ..............................................................................................

2) ..............................................................................................

ಉತ್ತರ ..............................................................................................

**ಉಪಕ್ರಮ :** ನಮ್ಮ ರಾಜ್ಯದಲ್ಲಿ ಆಗಿಹೋದ ಸಂತರ ಭಾವಚಿತ್ರಗಳನ್ನು ಸಂಗ್ರಹಿಸಿ ಮಾಹಿತಿ ಬರೆದು ಅಲ್ಬಂ ತಯಾರಿಸಿರಿ.

8BE3KH

## ಕಾಯಕವೇ ಕೈಲಾಸ

- **ಯೋಚಿಸಿ ಉತ್ತರಿಸಿರಿ.**

ಅ) ಆಲದ ಮರದಲ್ಲಿ ಮಂಗಗಳು ಕುಳಿತಿದ್ದವು. ಗೆರೆ ಹೊಡೆದ ಪದದ ಲಿಂಗ ಗುರುತಿಸಿರಿ.

1) ಸ್ತ್ರೀಲಿಂಗ 2) ಪುಲ್ಲಿಂಗ 3) ನಪುಂಸಕಲಿಂಗ 4) ಯಾವುದು ಅಲ್ಲ

ಆ) ಕೇಶವನು ಕಿತ್ತಳೆ ಹಣ್ಣಿನ ಸಿಪ್ಪೆ ಸುಲಿದು ಸುಹಾಸಿತವಾದ ಹಣ್ಣಿನ ರುಚಿ ನೋಡಿದನು. ಇದರಲ್ಲಿ ಬಳಕೆಯಾಗದ ಇಂದ್ರಿಯ ಯಾವುದು ?

1) ಕಿವಿ 2) ಕಣ್ಣು 3) ಮೂಗು 4) ನಾಲಿಗೆ



# 3. ಆದರ್ಶ ಗ್ರಾಮ



ಗೋವಿಂದಪುರ ಎಂಬ ಒಂದು ಊರು. ಆ ಊರಿನಲ್ಲಿ ಸುಜಾತಾ-ವಿಶಾಲ ಎಂಬ ದಂಪತಿಗಳಿದ್ದರು. ಇವರು ಕೃಷಿಮಾಡಿ ಜೀವನ ಸಾಗಿಸುತ್ತಿದ್ದರು. ಇವರಿಗೆ ವಿಜಯ ಮತ್ತು ಲಕ್ಷ್ಮೀ ಎಂಬ ಇಬ್ಬರು ಮಕ್ಕಳು ಇದ್ದರು. ಅವರದು ಸುಖಿ ಕುಟುಂಬವಾಗಿತ್ತು.

ಮಗಳು ಲಕ್ಷ್ಮೀ ಹನ್ನೆರಡನೆಯ ತರಗತಿಯಲ್ಲಿ ಓದುತ್ತಿದ್ದಳು. ಮಗ ವಿಜಯ ಬಿ.ಎ. ಪದವೀಧರ. ನೌಕರಿ ಮಾಡುವ ಗೋಜಿಗೆ ಹೋಗಲಿಲ್ಲ. ದಿನಾಲು ತೋಟದಲ್ಲಿ ಕೆಲಸ ಮಾಡುತ್ತಿದ್ದನು. ಹೊಸ ಹೊಸ ತಳಿಯ ಬೀಜಗೊಬ್ಬರಗಳನ್ನು ಉಪಯೋಗಿಸಿ ಆಧುನಿಕ ಪದ್ಧತಿಯ ತಂತ್ರಜ್ಞಾನವನ್ನು ಬಳಸಿಕೊಂಡು ಕೃಷಿಯನ್ನು ಮಾಡತೊಡಗಿದನು. ವಿಪುಲವಾಗಿ ಬೆಳೆ ಬೆಳೆದು ಧನಿಕನಾದನು.

ಕೃಷಿಯ ಜೊತೆಗೆ ಸಮಾಜಸೇವೆ ಮಾಡಬೇಕೆಂಬ ಹಂಬಲ ವಿಜಯನಲ್ಲಿ ಮೂಡಿತು. ಸಂಜೆ ಹೊತ್ತಿನಲ್ಲಿ ಸಹಜವಾಗಿ ಜನಕೂಡುವ ಸ್ಥಳಕ್ಕೆ ಹೋಗಿ ಅವರೊಂದಿಗೆ ಬೆರೆಯುತ್ತಿದ್ದನು. ಸುಖದುಃಖಗಳ ಬಗ್ಗೆ ಚರ್ಚೆ ಮಾಡುತ್ತಿದ್ದನು. ದೇಶದ ಆಗುಹೋಗುಗಳ ಬಗ್ಗೆ ಮತ್ತು ಸ್ವಾತಂತ್ರ್ಯಪ್ರಾಪ್ತಿಯ ಇತಿಹಾಸದ ಬಗ್ಗೆ ಒಬ್ಬರಿಗೊಬ್ಬರು ವಿಚಾರವಿನಿಮಯ ಮಾಡಿಕೊಳ್ಳುತ್ತಿದ್ದರು.

ಗ್ರಾಮವನ್ನು ಬಯಲು ಶೌಚಮುಕ್ತ ಗ್ರಾಮವನ್ನಾಗಿ ಮಾಡುವ ಉದ್ದೇಶದಿಂದ ಪ್ರತಿ ಮನೆ ಮನೆಗೂ ಹೋಗಿ ಆರೋಗ್ಯ, ಅನಾರೋಗ್ಯ ಇವುಗಳ ಬಗ್ಗೆ ವಿವರಿಸುತ್ತಿದ್ದನು. ಪ್ರತಿಯೊಬ್ಬರು ಶೌಚಾಲಯ ಕಟ್ಟಿ ನಿಯಮಿತವಾಗಿ ಉಪಯೋಗಿಸುವಂತೆ ಪ್ರೇರಣೆ ನೀಡುತ್ತಿದ್ದನು. ಇದನ್ನು ಅರಿತ ಜನರು ಸ್ವಯಂಪ್ರೇರಣೆಯಿಂದ ಶೌಚಾಲಯಗಳನ್ನು ಕಟ್ಟಿಸಿದರು.

ತನ್ನ ಗ್ರಾಮದಲ್ಲಿ ಶೈಕ್ಷಣಿಕ ಪ್ರಗತಿ ಇನ್ನಷ್ಟು ಹೆಚ್ಚಿಸಲು ಪ್ರಯತ್ನಿಸತೊಡಗಿದನು. ಗ್ರಾಮಸ್ಥರಿಂದ ದೇಣಿಗೆ ಸಂಗ್ರಹಿಸಿ ಶಾಲೆಗಳಿಗೆ ಆಧುನಿಕ ಪಾಠೋಪಕರಣಗಳನ್ನು ಒದಗಿಸಿದನು. ಇದರಿಂದ ಮಕ್ಕಳಲ್ಲಿ ಸಂಗಣಕ ಹಾಗೂ ತಂತ್ರಜ್ಞಾನ ಕಲಿಯುವ ಹವ್ಯಾಸ ಹೆಚ್ಚಾಯಿತು. ಶೇ. 50ರಷ್ಟು ಮಕ್ಕಳು ತಂತ್ರಜ್ಞಾನದಲ್ಲಿ ಪರಿಣಿತರಾದರು. ಊರಲ್ಲಿ ಮಾಧ್ಯಮಿಕ ಶಾಲೆ ಇಲ್ಲದ್ದರಿಂದ ಹುಡುಗಿಯರ

ಶಿಕ್ಷಣ ಪ್ರಾಥಮಿಕ ಹಂತದಲ್ಲೇ ನಿಂತು ಹೋಗುತ್ತಿತ್ತು. ಇದನ್ನು ತಪ್ಪಿಸಲು ಗ್ರಾಮಸ್ಥರ ಸಹಕಾರದೊಂದಿಗೆ ಮಾಧ್ಯಮಿಕ ಶಾಲೆಯನ್ನು ಪ್ರಾರಂಭಿಸಿದನು. ಕನ್ಯಾಶ್ರೀ ಉಪಕ್ರಮದ ಪ್ರಕಾರ ಹುಡುಗಿಯರು ಕಲಿಯಬೇಕು, ಹೆಚ್ಚಿನ ಶಿಕ್ಷಣ ಪಡೆಯಬೇಕು ಎಂದು ಎಲ್ಲ ವ್ಯವಸ್ಥೆಯನ್ನು ಮಾಡಿದನು. ಚುನಾವಣೆಯ ಸಂದರ್ಭದಲ್ಲಿ ನಿಷ್ಠಾವಂತ ಮತ್ತು ಪ್ರಾಮಾಣಿಕ ವ್ಯಕ್ತಿಗಳನ್ನು ಗುರುತಿಸಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲು ಸಹಕರಿಸುತ್ತಿದ್ದನು. ಅವರ ಮುಖಾಂತರ ಗ್ರಾಮದ ಸರ್ವಾಂಗೀಣ ವಿಕಾಸ ಮಾಡಿದನು. ತಾನು ಮಾತ್ರ ಯಾವುದನ್ನೂ ಅಪೇಕ್ಷಿಸದೆ ನಿಸ್ವಾರ್ಥತನದಿಂದ ಕೆಲಸ ಮಾಡುತ್ತಿದ್ದನು.

ಸರಕಾರದವರು ''ಬೇಟಿ ಬಚಾವೋ ಬೇಟಿ ಪಢಾವೊ'' ಎಂಬ ಆಂದೋಲನವನ್ನು ಹಮ್ಮಿಕೊಂಡರು. ಅದರ ಅಂಗವಾಗಿ ತಜ್ಞ ಮಾರ್ಗದರ್ಶಕರನ್ನು, ಮಹಿಳಾ ವೈದ್ಯರನ್ನು ಊರಿಗೆ ಕರೆಯಿಸಿ ಅವರ ಮುಖಾಂತರ ಸಮಾಜಪ್ರಬೋಧನ ಕಾರ್ಯವನ್ನು ಕೈಕೊಂಡನು, ಇದರಿಂದ ಗ್ರಾಮದಲ್ಲಿ ಎಲ್ಲರಿಗೂ ವಿಜಯನ ಬಗ್ಗೆ ಆದರ ಮೂಡಿತು.

ಪ್ರತಿ ವರ್ಷ ಗ್ರಾಮದಲ್ಲಿ ಜಾತ್ರೆಗಳು ನಡೆಯುತ್ತಿದ್ದವು. ಅಂತಹ ಸಂದರ್ಭದಲ್ಲಿ ನಡೆಯುವ ಮೂಢನಂಬಿಕೆ ಹಾಗೂ ಬಲಿ ವಿಧಾನಗಳನ್ನು ವಿರೋಧಿಸಿದನು. ಚಾಣಾಕ್ಷತನದಿಂದ ಜನರ ಮನವೊಲಿಸಿ ಅಂಥ ಸಂಪ್ರದಾಯಗಳನ್ನು ನಿಲ್ಲಿಸಲು ಪ್ರಯತ್ನಿಸಿದನು. ಸಂತ ಮಹಾತ್ಮರನ್ನು ಕರೆಯಿಸಿ ಅಧ್ಯಾತ್ಮಪ್ರವಚನಗಳ ಕಾರ್ಯಕ್ರಮವನ್ನು ನಡೆಯಿಸಿದನು. ಇದರಿಂದ ಜನರ ಮನಸ್ಸು ಅಂಧಶ್ರದ್ಧೆಯಿಂದ ಬದಿಗೆ ಸರಿದು ವೈಜ್ಞಾನಿಕ ತತ್ವದ ಕಡೆಗೆ ವಾಲತೊಡಗಿತು. ಗ್ರಾಮದ ಪ್ರತಿಯೊಬ್ಬರಿಗೂ ತನ್ನ ಊರಿನ ಬಗ್ಗೆ ಅಭಿಮಾನ ಮೂಡತೊಡಗಿತು. ಗ್ರಾಮದ ಎಲ್ಲರೂ ಸಹೋದರತ್ವದಿಂದ ಬಾಳತೊಡಗಿದರು. ಅವರು ತಮ್ಮ ಶ್ರಮದಾನದ ಮುಖಾಂತರ ಊರಲ್ಲಿ ಗಿಡಮರಗಳನ್ನು ಬೆಳೆಸಿದರು. ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಿದರು. ತಮ್ಮ ತಮ್ಮ ಹೊಲಗಳಲ್ಲಿ ಹರಿಯುವ ನೀರಿಗೆ ಅಡ್ಡವಾಗಿ ಒಡ್ಡುಗಳನ್ನು ಕಟ್ಟಿ ಮಳೆಯ ನೀರನ್ನು ನೆಲದಲ್ಲಿ ಇಂಗುವಂತೆ ವ್ಯವಸ್ಥೆ ಮಾಡಿದರು.

ಒಬ್ಬ ಸುಶಿಕ್ಷಿತ ತರುಣನ ಪ್ರಯತ್ನದಿಂದ ಇಡೀ ಊರಿನ ಸರ್ವಾಂಗೀಣ ವಿಕಾಸವಾಯಿತು. ಎಲ್ಲರೂ ವಿಜಯನನ್ನು ಕೊಂಡಾಡತೊಡಗಿದರು.

## ಶಬ್ದಗಳ ಅರ್ಥ

ಧನಿಕ – ಶ್ರೀಮಂತ ; ಹಂಬಲ – ತೀವ್ರವಾದ ಆಸೆ ; ವಾಲು – ಬಾಗು ; ಒಡ್ಡು – ಅಡ್ಡಗಟ್ಟು.

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಬರೆಯಿರಿ.

ಹವ್ಯಾಸ – ................ ; ಆಂದೋಲನ – .............

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

ಅ) ಗೋವಿಂದಪುರ ದಂಪತಿಗಳ ಕುಟುಂಬ ಸುಖಿ ಕುಟುಂಬವಾಗಿತ್ತು ಏಕೆ ?

ಉತ್ತರ ..................................................................................

ಆ) ಶೈಕ್ಷಣಿಕ ಪ್ರಗತಿಯನ್ನು ಇನ್ನಷ್ಟು ಹೆಚ್ಚಿಸಲು ವಿಜಯನು ಏನುಮಾಡಿದನು?

ಉತ್ತರ ..................................................................................

ಇ) ಒಬ್ಬ ಸುಶಿಕ್ಷಿತ ತರುಣನ ಪ್ರಯತ್ನದ ಫಲವೇನು?

ಉತ್ತರ ..................................................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತು ಬರೆಯಿರಿ.**

ಅ) ..........................................................................................

ಉತ್ತರ ..........................................................................................

ಆ) ..........................................................................................

ಉತ್ತರ ..........................................................................................

**ಪ್ರಶ್ನೆ 3) ವಿರುದ್ಧಾರ್ಥಕ ಶಬ್ದಗಳನ್ನು ಬರೆಯಿರಿ.**

1) ಸುಖ X ........................ 2) ಆರೋಗ್ಯ X ......................

3) ಸ್ವಾರ್ಥ X ........................ 4) ಶುದ್ಧ X ......................

**ಪ್ರಶ್ನೆ 4) ಕೆಳಗಿನ ಗದ್ಯ ಖಂಡವನ್ನು ಓದಿ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಮಳೆಗಾಲ ಪ್ರಾರಂಭವಾಗಿತ್ತು. ಧಾರಾಕಾರವಾಗಿ ಮಳೆ ಸುರಿಯುತ್ತಿತ್ತು. ನದಿಗೆ ಮಹಾಪೂರ ಬರುವ ಲಕ್ಷಣಗಳು ಕಂಡು ಬರತೊಡಗಿದವು. ನದಿತೀರದ ಜನರು ಗ್ರಾಮಗಳನ್ನು ತೊರೆದು ಸುರಕ್ಷಿತ ಸ್ಥಳಗಳಿಗೆ ಹೋಗಬೇಕೆಂದು ಡಂಗುರ ಸಾರಿದರು. ಮೇಲೆ ಸುರಿಯುವ ಮಳೆ, ಕೆಳಗೆ ಹರಿಯುವ ಹೊಳೆ. ಎಲ್ಲಿಗೆ ಹೋಗಬೇಕೆಂದು ತೋಚದಂತಾಯಿತು. ಜನರು ದಿಗ್ಭ್ರಾಂತರಾದರು.ಮರುದಿನ ಅಧಿಕಾರಿಗಳು – ಪದಾಧಿಕಾರಿಗಳು ಪ್ರತಿ ಹಳ್ಳಿಗೂ ಭೇಟಿ ನೀಡಿ ಮಹಾಪೂರ ಪರಿಸ್ಥಿತಿಯನ್ನು ನಿರೀಕ್ಷಿಸಿದರು. ಜನರ ಸುರಕ್ಷಿತತೆಗಾಗಿ ಸೂಕ್ತ ವ್ಯವಸ್ಥೆಯನ್ನು ಮಾಡಿದರು.

1) ಮಳೆಯು ಹೇಗೆ ಸುರಿಯುತ್ತಿತ್ತು ?

ಉತ್ತರ ..........................................................................................

2) ಏನೆಂದು ಡಂಗುರ ಸಾರಿದರು ?

ಉತ್ತರ ..........................................................................................

3) ಜನರು ಏಕೆ ದಿಗ್ಭ್ರಾಂತರಾದರು ?

ಉತ್ತರ ..........................................................................................

4) ಜನರಿಗೆ ಸೂಕ್ತ ವ್ಯವಸ್ಥೆಯನ್ನು ಯಾರು ಮಾಡಿದರು ?

ಉತ್ತರ ..........................................................................................

**ಉಪಕ್ರಮ :** ಶೌಚಾಲಯದ ಅವಶ್ಯಕತೆ ಕುರಿತು ಹತ್ತು ಸಾಲು ಬರೆಯಿರಿ.

..............................................................................

..............................................................................

..............................................................................

..............................................................................

..............................................................................

..............................................................................

.......................................................................

.......................................................................

.......................................................................

.......................................................................

## ಅವಶ್ಯಕತೆಯೇ ಅನ್ವೇಷಣೆಯ ಜನನಿ

• **ಯೋಚಿಸಿ ಉತ್ತರಿಸಿರಿ.**

ಅ) ಕೆಳಗಿನ ಪದಗಳಲ್ಲಿ ಬದಲಾವಣೆಯಾಗದ ಪದವನ್ನು ಗುರುತಿಸಿರಿ.

1) ಮತ್ತು 2) ನಾನು 3) ಒಂದು 4) ಹುಲಿ

ಆ) ಹಳೆಗನ್ನಡ ಕಾವ್ಯಗಳೆಂದರೆ ನನಗೆ ತುಂಬಾ ಇಷ್ಟ.

ಗೆರೆ ಹೊಡೆದ ಪದದ ಸಂಧಿಯನ್ನು ಗುರುತಿಸಿರಿ.

1) ಸವರ್ಣದೀರ್ಘ 2) ಲೋಪ 3) ಆಗಮ 4) ಆದೇಶ



# 4. ಸಿಂಧೂತಾಯಿ ಸಪಕಾಳ



ಚಿಕ್ಕ ವಯಸ್ಸಿನಲ್ಲಿಯೇ ಮದುವೆ. ಮದುವೆಯಾದ ಕೆಲ ವರ್ಷಗಳಲ್ಲಿ ಗಂಡ ಈಕೆಯನ್ನು ಮನೆಯಿಂದ ಹೊರಹಾಕಿದ. ತವರಿಗೆ ಹೋದರೆ, ಅಲ್ಲಿದ್ದವರು ರಪ್ಪನೆ ಬಾಗಿಲು ಹಾಕಿಬಿಟ್ಟರು. 'ಶನೀ, ನೀನು ರೈಲಿಗೆ ಸಿಕ್ಕಿ ಸಾಯಬಾರದೇನೇ...' ಅಂದರು. ಹೀಗೆಲ್ಲ ಅನ್ನಿಸಿಕೊಂಡ ಸಿಂಧೂತಾಯಿ, ಅನಂತರದಲ್ಲಿ ಮಹಾನ್ ಸಾಧಕಿಯಾಗಿ ಬೆಳೆದುನಿಂತಳಲ್ಲ; ಅದೇ ಒಂದು ಸ್ವಾರಸ್ಯಕರ ಕಥೆ. ಅದನ್ನು ಕೇಳಿದರೆ ಸಂತೋಷವಾಗುತ್ತದೆ. ಅದರಂತೆ ದುಃಖವೂ ಆಗುತ್ತದೆ. ಇದ್ದಕ್ಕಿದ್ದಂತೆ ಕಣ್ತುಂಬಿಕೊಳ್ಳುತ್ತದೆ. ಅಮ್ಮಾ, ನಿನ್ನ ಸಾಧನೆಗೆ ಶರಣು ಎಂದು ಮನಸ್ಸು ಸಂಭ್ರಮದಿಂದ ಪಿಸುಗುಡುತ್ತದೆ. ಯಾಕೆ ಗೊತ್ತೆ ? ಗಂಡನಿಗೂ, ತವರುಮನೆಯವರಿಗೂ ಬೇಡವಾಗಿ ಅನಾಥೆಯಂತೆ ಬೀದಿಗೆ ಬಂದ ಸಿಂಧೂತಾಯಿ ಈಗ ಸಾವಿರ ಮಕ್ಕಳ ತಾಯಿ ! ಇವರು ದಿಕ್ಕಿಲ್ಲದವರ ಪಾಲಿನ ಆಧಾರಸ್ತಂಭ. ಅನಾಥರ ಅಮ್ಮ ಎಂದೇ ಇವರನ್ನು ಗುರುತಿಸಲಾಗುತ್ತದೆ. 'ಮಹಿಳೆಯೊಬ್ಬಳು ಮನಸ್ಸು ಮಾಡಿದರೆ ಏನೆಲ್ಲಾ ಸಾಧಿಸಬಹುದು' ಎಂಬ ಮಾತಿಗೆ ಉದಾಹರಣೆಯಂತಿರುವ ಸಿಂಧೂತಾಯಿ, ತಮ್ಮ ಹೋರಾಟದ ಬದುಕಿನ ಮೊದಲ ಪುಟಗಳನ್ನು ಹೀಗೆ ತೆರೆದಿಡುತ್ತಾರೆ.

ಮಹಾರಾಷ್ಟ್ರದ ವಿದರ್ಭ ಪ್ರಾಂತ್ಯದಲ್ಲಿನ ಪಿಂಪರಿಮೆಘೆ ಎಂಬ ಒಂದು ಹಳ್ಳಿ ನನ್ನ ಹುಟ್ಟೂರು. ನನ್ನ ಹೆತ್ತವರಿಗೆ ಮೊದಲು ಮೂರು ಜನ ಗಂಡುಮಕ್ಕಳಿದ್ದರು. ನಾಲ್ಕನೇಯ ಮಗುವೂ ಗಂಡು ಮಗುವಾಗಬೇಕೆಂಬ ಹಂಬಲ ಇತ್ತಂತೆ. ಆದರೆ, ನಾಲ್ಕನೆಯ ಮಗುವಾಗಿ, ನಾನು ಹುಟ್ಟಿದ್ದೆ! ಹೆಣ್ಣುಮಗು ಎಂಬ ಸುದ್ದಿ ಕೇಳಿದ ತಕ್ಷಣ, ಯಾಕಾದ್ರೂ ಹುಟ್ಟಿತೋ ಅನಿಷ್ಟ ಎಂದು ಎಲ್ಲರೂ ಮೂಗು ಮುರಿದರಂತೆ. ಅನಂತರದಲ್ಲಿ ನನಗೆ ಸಿಂಧೂತಾಯಿ ಎಂದು ನಾಮಕರಣವಾಯಿತು ನಿಜ. ಆದರೆ, ಮನೆಮಂದಿಯೆಲ್ಲ ನನಗೆ ಚಿಂದಿ ಎಂದು ಕರೆಯತೊಡಗಿದರು. (ಚಿಂದಿ ಅಂದರೆ ಮರಾಠಿಯಲ್ಲಿ ಬೇಡವಾದ ವಸ್ತು, ಹರಿದುಹೋದ ಸೀರೆಯ ತುಂಡು ಎಂದು ಅರ್ಥವಿದೆ.) ತುತ್ತು ಅನ್ನಕ್ಕೂ ತತ್ವಾರ ಎಂಬಂಥ ಬಡತನ ನನ್ನ ಕುಟುಂಬಕ್ಕಿತ್ತು. ಈ ಬಡತನದ ಮಧ್ಯೆಯೂ ಶಾಲೆಗೆ ಹೋದೆ. ಸ್ಲೇಟ್ ಖರೀದಿಸುವ ಶಕ್ತಿಯೂ ನನ್ನ ತಂದೆಗೆ ಇರಲಿಲ್ಲ. ಶಾಲೆಯ ಎದುರಿಗಿದ್ದ ಆಲದ ಮರದ ಎಲೆಯನ್ನು ತೆಗೆದುಕೊಂಡು ಹೋಗಿ ಅದರ ಮೇಲೆ ಚೂಪಾದ ಕಡ್ಡಿಯಿಂದ ಬರೆಯುತ್ತಾ ಅಕ್ಷರ ಕಲಿತೆ. ಮುಂದೆ ಶ್ರೀಹರಿ ಸಪಕಾಳ ಅವರ ಜೊತೆಗೆ ನನ್ನ ವಿವಾಹವಾಯಿತು.

ನನ್ನ ಗಂಡನ ಮನೆ ಇದ್ದುದ್ದು ವರ್ಧಾ ಜಿಲ್ಲೆಯ ನವರಗಾಂವದಲ್ಲಿ. ಅದೇನು ಕಾರಣವೋ ಕಾಣೆ : ಅತ್ತೆ-ಮಾವಂದಿರಿಗೂ ನನಗೂ ಹೊಂದಾಣಿಕೆಯೇ ಆಗಲಿಲ್ಲ. ಅವರು ಹೆಜ್ಜೆಗೊಂದು ತಪ್ಪು ಹುಡುಕುತ್ತಿದ್ದರು. ಸಂಜೆ ನನ್ನ ಗಂಡ ಮನೆಗೆ ಬಂದರೆ ಸಾಕು; ಚಾಡಿ ಹೇಳುತ್ತಿದ್ದರು. ಪರಿಣಾಮ, ಮಾಡದ ತಪ್ಪಿಗೆ ಹೊಡೆತ ತಿನ್ನುವುದು ನನ್ನ ಪಾಲಿಗೆ ದಿನಚರಿಯೇ ಆಗಿಹೋಯಿತು. ಈ ಮಧ್ಯೆ ನಮ್ಮ ದಾಂಪತ್ಯಕ್ಕೆ ಹನ್ನೆರಡು ವರ್ಷಗಳು ತುಂಬಿದ್ದವು.

ಇದು 1972ರ ಮಾತು. ಆವತ್ತಿನ ಸಂದರ್ಭದಲ್ಲಿ ಅರಣ್ಯ ಇಲಾಖೆಯವರು ಹಳ್ಳಿಯ ಜನರಿಂದ ಹಸುವಿನ ಸೆಗಣಿಯನ್ನು ಖರೀದಿಸುತ್ತಿದ್ದರು. ಹಳ್ಳಿಯ ಎಲ್ಲರಿಂದ ಸೆಗಣಿ ಸಂಗ್ರಹಿಸಿ ಅದನ್ನು ಮಾರುವ ಜವಾಬ್ದಾರಿ ಊರ ಮುಖಂಡನದ್ದಾಗಿತ್ತು. ಅನಂತರ, ಸೆಗಣಿ ನೀಡಿದ ಎಲ್ಲರಿಗೂ ಆತ ಹಣವನ್ನು ಹಂಚಬೇಕಿತ್ತು. ನಮ್ಮ ಊರಲ್ಲಿದ್ದ ಮುಖಂಡನ ಹೆಸರು ದಂಡಾಜಿ ಸತ್ಕಾರ್. ಅವನು ಹಳ್ಳಿ ಜನರಿಗೆ ನಯಾಪೈಸೆಯನ್ನೂ ಕೊಡದೆ ವಂಚಿಸುತ್ತಿದ್ದ. ಯಾರಾದರೂ ತಿರುಗಿ ಪ್ರಶ್ನಿಸಿದರೆ ಅವರಿಗೆ ಕಿರುಕುಳ ಕೊಡುತ್ತಿದ್ದ. ಅಂಥವನ ಎದುರು ನಿಂತು ನಾನು ಪಾಲು ಕೇಳಿದೆ. ನನಗೆ ಬರಬೇಕಿದ್ದ ಹಣ ಪಡೆಯುವಲ್ಲಿ ಕಡೆಗೂ ಯಶಸ್ವಿಯಾದೆ. ಆದರೆ, ಮುಂದಿನ ಪರಿಣಾಮ ಬಹಳ ಕೆಟ್ಟದಿತ್ತು. ಈ ಹೆಂಗಸಿಗೆ ಬುದ್ದಿ ಕಲಿಸಲೇಬೇಕು ಎಂದು ನಿರ್ಧರಿಸಿದ ಆ ಶ್ರೀಮಂತ ನೇರವಾಗಿ ನನ್ನ ಗಂಡನ ಬಳಿಗೇ ಹೋದ. ನಿನ್ನ ಹೆಂಡತಿಯ ನಡತೆ ಸರಿಯಿಲ್ಲ ಕಣೋ, ಅವಳನ್ನು ಮೊದಲು ಮನೆಯಿಂದ ಹೊರಹಾಕು' ಎಂದೆಲ್ಲಾ ಹೇಳಿಕೊಟ್ಟ.

ಅನುಮಾನದ ಪಿಶಾಚಿ ಗಂಡಸಿನ ತಲೆಹೊಕ್ಕಿತು ಅಂದಮೇಲೆ ಕೇಳುವುದೇನಿದೆ ? ನನ್ನ ಗಂಡ ಮೇಲಿಂದ ಮೇಲೆ ಜಗಳಕ್ಕೆ ಬಂದ. ನಾನಾಗ ಗರ್ಭಿಣಿ. ಅದೊಂದು ರಾತ್ರಿ, ಯಥಾಪ್ರಕಾರ ಜಗಳ ತೆಗೆದ ಗಂಡ, ಅನಂತರ ಮನಬಂದಂತೆ ಥಳಿಸಿದ. ಅಷ್ಟಕ್ಕೆ ಸುಮ್ಮನಾಗದೆ, ನನ್ನನ್ನು ದರದರನೆ ಕೊಟ್ಟಿಗೆಗೆ ಎಳೆದೊಯ್ದು ಹಸು, ಕರುಗಳ ಮಧ್ಯೆ ನೂಕಿ ಹೋಗಿಬಿಟ್ಟ. ಆವತ್ತೇ ರಾತ್ರಿ ಕೊಟ್ಟಿಗೆಯಲ್ಲಿಯೇ ಹೆರಿಗೆಯಾಯಿತು. ಅದೆಷ್ಟೇ ಚೀರಾಡಿದರೂ ಸಹಾಯಕ್ಕೆ ಒಬ್ಬರೂ ಬರಲಿಲ್ಲ. ಆದರೆ ಹಸುವೊಂದು ಕೊಟ್ಟಿಗೆಯಲ್ಲಿದ್ದ ಎಲ್ಲ ರಾಸುಗಳನ್ನೂ ದೂರ ಸರಿಸಿ ನನಗೆ ತೊಂದರೆಯಾಗದಂತೆ ನೋಡಿಕೊಂಡಿತು. ಕುರಿಗಳೂ ತಮ್ಮಿಂದ ಯಾವುದೇ ತೊಂದರೆಯಾಗದಂತೆ ಜಾಗ್ರತೆ ವಹಿಸಿದವು. ವಿಪರ್ಯಾಸ ನೋಡಿ : ಆವತ್ತು ಮನುಷ್ಯರು ನನಗೆ ಸಾಯುವಂತೆ ಹೊಡೆದಿದ್ದರು. ಆದರೆ ಮೂಕಪ್ರಾಣಿಗಳು ಸಾಯದಂತೆ ತಡೆದಿದ್ದವು. ಆವತ್ತು ಹೊಕ್ಕುಳಬಳ್ಳಿಯನ್ನು ಕತ್ತರಿಸಲಿಕ್ಕೂ ಜನ ಬರಲಿಲ್ಲ. ಕೊಟ್ಟಿಗೆಯಲ್ಲಿ ಬಿದ್ದಿದ್ದ ಕಲ್ಲು ತೆಗೆದುಕೊಂಡು ಅದರಿಂದಲೇ ಹೊಕ್ಕುಳಬಳ್ಳಿಯನ್ನು ತುಂಡರಿಸಿಕೊಂಡೆ. ಆಗ ಹುಟ್ಟಿದ್ದು ಹೆಣ್ಣುಮಗು. ಅವಳ ಹೆಸರು ಮಮತಾ.

ಗಂಡನ ಮನೆಯಲ್ಲಿ ಆಶ್ರಯ ತಪ್ಪಿತು. ಮಾಡುವುದೇನು ? ಹಾಗಾಗಿ ದೇವಸ್ಥಾನ, ಬಸ್ ಹಾಗೂ ರೈಲುನಿಲ್ದಾಣಗಳಲ್ಲಿ ಭಿಕ್ಷೆ ಬೇಡುತ್ತಾ ಬದುಕತೊಡಗಿದೆ. ಮುಂದೆ - ಇಡೀ ದಿನ, ಕಂಡವರ ಮುಂದೆಲ್ಲಾ ಕೈ ಒಡ್ಡುವುದು 'ಅಮ್ಮಾ ತಾಯೀ' ಎಂದು ಪ್ರಾರ್ಥಿಸುವುದು, ಇದಿಷ್ಟೇ ನನ್ನ ದಿನಚರಿಯಾಯಿತು. ಒಂದು ದಿನ ಮರದ ಕೆಳಗೆ ಕುಳಿತಿದ್ದೆ. ಜೀವನದಲ್ಲಿ ನಿರಾಶೆ ತುಂಬಿತ್ತು. ಮುಂದೇನು ಮಾಡುವುದು ಎಂಬ ಆಲೋಚನೆ. ನಾನು ಕುಳಿತ ಮರದ ಒಂದು ಟೊಂಗೆ ಅರ್ಧಭಾಗ ಮುರಿದಿದ್ದರೂ ಅದು ಇನ್ನೂ ಜೀವಂತವಾಗಿದ್ದು ಹತ್ತಾರು ಜನರಿಗೆ ನೆರಳುಕೊಡುತ್ತಿತ್ತು. ಅದನ್ನು ನೋಡಿ ನನ್ನ ಮನಸ್ಸಿನಲ್ಲಿಯೂ ಆಶಾಕಿರಣ ಮೂಡಿತು. ನನಗೆ ಜ್ಞಾನೋದಯವಾಗಿದ್ದು ಆಗಲೇ. ಜೀವವಿಲ್ಲದ ಈ ಮರದ ಕೊಂಬೆ, ಅರೆಜೀವವಾಗಿದ್ದರೂ ಪರೋಪಕಾರಿಯಾಗಿ ಬದುಕುತ್ತಿದೆ. ಹಾಗಿರುವಾಗ, ಜೀವವಿರುವ ನಾನು ಜೀವನದಲ್ಲಿ ಜಿಗುಪ್ಸೆ ತಂದುಕೊಂಡರೆ ಹೇಗೆ ? ನನ್ನಂತೆಯೇ ಸಂಕಟಗಳಿಗೆ ಸಿಕ್ಕಿಕೊಂಡ ಜನ ಖಂಡಿತ ಇರುತ್ತಾರೆ. ಅಂತವರಿಗೆ ನೆರವಾಗಬೇಕು ಎಂದು ಆಗಲೇ ನಿರ್ಧರಿಸಿದೆ.. ಅನ್ನುತ್ತಾರೆ ಸಿಂಧೂತಾಯಿ.

ಇಂಥದೊಂದು ಕೆಲಸ ಆರಂಭಿಸಲು ಮುಖ್ಯವಾಗಿ ಹಣ ಬೇಕಿತ್ತು. ಅದಕ್ಕಾಗಿ ಸಿಂಧೂತಾಯಿ ರೈಲುಗಳಲ್ಲಿ ಭಿಕ್ಷೆ ಬೇಡಲು ಆರಂಭಿಸಿದಳು. ಹೀಗೇ ಏಳು ವರ್ಷಗಳು ಕಳೆದುಹೋದವು. ಈ ಅವಧಿಯಲ್ಲಿ ಒಂದಷ್ಟು ಹಣ ಜೊತೆಯಾಗಿತ್ತು. ಹೀಗಿರುವಾಗಲೇ, ಸಿಂಧೂತಾಯಿಯ ಹೆಸರು ಸಹಸ್ರಾರು ಜನರಿಗೆ ಗೊತ್ತಾಗುವಂಥ ಘಟನೆಯೊಂದು ನಡೆಯಿತು. ಇದಾಗಿದ್ದು 1980ರಲ್ಲಿ. ಆಗ, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದ ಗಡಿಯಲ್ಲಿದ್ದ ಅಮರಾವತಿ ಜಿಲ್ಲೆಯ ಚಿಕಲಧಾರಾದಲ್ಲಿ ಟೈಗರ್ ಪ್ರಾಜೆಕ್ಟ್ ಆರಂಭಿಸುವ ಉದ್ದೇಶದಿಂದ ಆ ಭಾಗದಲ್ಲಿದ್ದ 84 ಹಳ್ಳಿಗಳ

ಆದಿವಾಸಿಗಳನ್ನು ಒಕ್ಕಲೆಬ್ಬಿಸಲಾಗಿತ್ತು. ಆದಿವಾಸಿಗಳಿಗೆ ಸೇರಿದ್ದ ಹಸುಗಳನ್ನು ಟೈಗರ್ ಪ್ರಾಜೆಕ್ಟನ ಅಧಿಕಾರಿಗಳು ವಶಪಡಿಸಿಕೊಂಡಿದ್ದರು. ಈ ವಿಷಯ ತಿಳಿದದ್ದೇ, ನೇರವಾಗಿ ಚಿಕಲ್ ಧಾರಾಕ್ಕೆ ಬಂದು ಸಿಂಧೂತಾಯಿ ಆದಿವಾಸಿಗಳ ಪರವಾಗಿ ಹೋರಾಟಕ್ಕೆ ನಿಂತಳು. ಅಷ್ಟೇ ಅಲ್ಲ, ಸರಕಾರ ಪುನರ್ವಸತಿಗೆ ಏರ್ಪಾಡು ಮಾಡುವವರೆಗೂ ಆದಿವಾಸಿಗಳನ್ನು ಒಕ್ಕಲೆಬ್ಬಿಸದಂತೆ ಆದೇಶ ತರುವುದರಲ್ಲಿ ಯಶಸ್ವಿಯೂ ಆದಳು.

ಈ ಘಟನೆಯ ಅನಂತರ ಚಿಕಲ್ ಧಾರಾದ ಆದಿವಾಸಿಗಳ ಪಾಲಿಗೆ ನಾಯಕಿ ಆಗಿ ಬಿಟ್ಟಳು ಸಿಂಧೂತಾಯಿ. ಆವತ್ತಿನಕಾಲಕ್ಕೆ ಆದಿವಾಸಿಗಳ ಬದುಕು ಭಿಕ್ಷುಕರಗಿಂತ ಕೆಟ್ಟದಾಗಿತ್ತು. ಅದನ್ನು ಕಂಡಾಗ, ಚಿಕಲ್ ಧಾರಾದಲ್ಲಿಯೇ ಅನಾಥಾಶ್ರಮ ಆರಂಭಿಸಬಾರದೇಕೆ ಅನ್ನಿಸಿತಂತೆ. ಈ ಯೋಚನೆಯಲ್ಲಿದ್ದಾಗಲೇ ತಪ್ಪಿಸಿಕೊಂಡ ಹಸುವನ್ನು ಹುಡುಕುತ್ತ ಹೊರಟ ಆದಿವಾಸಿಯೊಬ್ಬನಿಗೆ ಕಣಿವೆಯಲ್ಲಿ ಹಸು ಸಿಗಲಿಲ್ಲ. ಬದಲಿಗೆ, ನವಜಾತ ಶಿಶುವೊಂದು ಸಿಕ್ಕಿತು. ಆತ, ಮಗುವನ್ನು ತಂದು ಸಿಂಧೂತಾಯಿಯ ಮುಂದಿಟ್ಟು ನಡೆದಿದ್ದನ್ನು ವಿವರಿಸಿದ. ಆ ಮಗುವನ್ನು ಮಡಿಲಿಗೆ ಹಾಕಿಕೊಂಡ ಸಿಂಧೂತಾಯಿ, ಅದಕ್ಕೆ ದೀಪಕ್ ಸಪ್ಕಾಳ ಎಂದು ಹೆಸರಿಟ್ಟಳು. ಇದಾಗಿ, ಒಂದು ವಾರ ಕಳೆದಿಲ್ಲ. ಅದೊಂದು ಮಧ್ಯರಾತ್ರಿ, ಮನೆಯ ಹೊರಗೆ ಹಸುಕಂದನ ಚೀತ್ಕಾರ ಕೇಳಿಸಿದೆ. ಬಾಗಿಲು ತೆರೆದು ನೋಡಿದರೆ – ಹಾಲುಗಲ್ಲದ ಹೆಣ್ಣುಮಗು. ಮಗುವನ್ನು ಅಲ್ಲಿಟ್ಟು ಅದರ ಪೋಷಕರು ಓಡಿಹೋಗಿದ್ದರು. ಅದನ್ನೂ ಮಡಿಲಿಗೆ ಹಾಕಿಕೊಂಡ ಸಿಂಧೂತಾಯಿ, ಅದಕ್ಕೆ ಕರುಣಾ ಎಂದು ಹೆಸರಿಟ್ಟಳು. ಈ ಎರಡು ಮಕ್ಕಳ ಜೊತೆಯಲ್ಲಿಯೇ ತನ್ನ ಸ್ವಂತ ಮಗುವೂ ಇದ್ದರೆ, ಸ್ವಂತ ಮಗಳ ಮೇಲಿನ ಮೋಹದಲ್ಲಿ ಸಿಕ್ಕಿದ ಮಕ್ಕಳ ಮೇಲೆ ಪ್ರೀತಿ ಕಡಿಮೆಯಾಗಬಹುದು ಅನ್ನಿಸಿದಾಗ ತನ್ನ ಮಗಳನ್ನು ಪುಣೆಯಲ್ಲಿದ್ದ ಒಂದು ಸೇವಾಶ್ರಮದಲ್ಲಿ ಬಿಟ್ಟುಬಂದಳು ಸಿಂಧೂತಾಯಿ.

ಅನಂತರದಲ್ಲಿ ಸಿಂಧೂತಾಯಿಯ ಮಡಿಲು ಸೇರಿದ ಮಕ್ಕಳ ಸಂಖ್ಯೆ ಹೆಚ್ಚುತ್ತಾ ಹೋಯಿತು. ರೈಲು ನಿಲ್ದಾಣದಲ್ಲಿ, ಕಸದ ತೊಟ್ಟಿಯಲ್ಲಿ , ರಸ್ತೆ ಬದಿಯಲ್ಲಿ ಸಿಕ್ಕಿದ ಮಕ್ಕಳೆಲ್ಲಾ ಸಿಂಧೂತಾಯಿಯ ಮನೆ ಸೇರಿಕೊಂಡರು. ಎಲ್ಲರನ್ನೂ ಸಲುಹಬೇಕಲ್ಲ; ಹಾಗಾಗಿ ಸಿಂಧೂತಾಯಿ ಕೂಲಿಗೆ ಹೋದಳು. ಭಿಕ್ಷೆಯನ್ನೂ ಬೇಡಿದಳು.

ಹೀಗೆ ಒಮ್ಮೆ ರೈಲಿನಲ್ಲಿ ಭಿಕ್ಷೆ ಬೇಡುವಾಗ, ಇಬ್ಬರು ದಂಪತಿ– ನೀನೇ ಮೊದಲು ಸತ್ತುಬಿಡು. ಹಾಗಾದ್ರೆ ನಿನ್ನ ಕಷ್ಟಗಳಾದ್ರೂ ಕಡಿಮೆ ಆಗ್ತವೆ ಎಂದು ಪರಸ್ಪರ ಹೇಳಿಕೊಳ್ಳುತ್ತಿದ್ದುದು ಕೇಳಿಸಿತು. ಕುತೂಹಲದಿಂದ ವಿಚಾರಿಸಿದಾಗ ತಿಳಿದದ್ದು ಏನೆಂದರೆ – ದಂಪತಿಯ ಮಗ ಸುಪ್ರೀಂಕೋರ್ಟಿನಲ್ಲಿ ಲಾಯರ್ ಆಗಿದ್ದ. ಅವನ ಹೆಂಡತಿ, ಈ ಮುದುಕ–ಮುದುಕಿ ನಮ್ಮ ಪಾಲಿಗೆ ಹೊರೆ ಎಂದು ರೇಗಿ, ರಂಪ ಮಾಡಿ ಅತ್ತೆ–ಮಾವನನ್ನು ಮನೆಯಿಂದ ಹೊರಹಾಕಿದ್ದಳು. ಹೆಂಡತಿಗೆ ಎದುರು ಮಾತಾಡಲಾಗದೆ ಆ ಲಾಯರ್ ಮಹಾಶಯ ಮೌನಿಯಾಗಿದ್ದ. ಈ ಆಘಾತಕ್ಕೆ ಒಳಗಾಗಿದ್ದ ದಂಪತಿಗಳು ರೈಲು ಹತ್ತಿದ್ದರು. ಅಲ್ಲಿ ಕೂತೇ ಬೇಗನೆ ಸತ್ತುಹೋಗುವ ಮಾತುಗಳಾಡಿದ್ದರು. ಅವರಿಗೆ ಸಮಾಧಾನ ಹೇಳಿದ ಸಿಂಧೂತಾಯಿ– ನಿಮ್ಮನ್ನು ಮಕ್ಕಳಿಗಿಂತ ಹೆಚ್ಚಾಗಿ ನೋಡಿಕೊಳ್ಳುವ ಜವಾಬ್ದಾರಿ ನನ್ನದು ಎಂದು ಭರವಸೆ ನೀಡಿದಳು. ತನ್ನ ಕಥೆಯನ್ನೆಲ್ಲ ಹೇಳಿ, ಅವರನ್ನು ತನ್ನೊಂದಿಗೆ ಕರೆದೊಯ್ಯುವಲ್ಲಿ ಯಶಸ್ವಿಯೂ ಆದಳು.

ವರ್ಷಗಳು ಕಳೆದಂತೆಲ್ಲ ಆಶ್ರಯ ಬೇಡಿ ಬರುವವರ ಸಂಖ್ಯೆ ಹೆಚ್ಚುತ್ತಲೇ ಹೋಯಿತು. ಇದರಿಂದ ಸಿಂಧೂತಾಯಿ ಕಿಂಚಿತ್ತೂ ಬೇಸರ ಮಾಡಿಕೊಳ್ಳಲಿಲ್ಲ. ತನ್ನಲ್ಲಿ ಇದ್ದುದನ್ನೇ ಎಲ್ಲರಿಗೂ ಹಂಚಿದಳು. ಅಕ್ಕಪಕ್ಕದ ಜಿಲ್ಲೆಗಳಲ್ಲೂ ಅನಾಥಾಶ್ರಮ ಆರಂಭಿಸಲು ಮುಂದಾದಳು. ಪರಿಣಾಮವಾಗಿ ಮಹಾರಾಷ್ಟ್ರದ ಪುಣೆ, ವರ್ಧಾ, ಕುಂಭಾರವಲನಗಳಲ್ಲಿ ಅನಾಥಾಶ್ರಮಗಳು ಆರಂಭವಾದವು. 1997 ರಲ್ಲಿ ನಡೆದ ಒಂದು ಕಾರ್ಯಕ್ರಮದಲ್ಲಿ ಮುಂಬಯಿ ಹೈಕೋರ್ಟಿನ ನಿವೃತ್ತ ನ್ಯಾಯಮೂರ್ತಿ ಖೋಲ್ಸೆ ಪಾಟೀಲ ಭಾಗವಹಿಸಿದ್ದರು. ಸಿಂಧೂತಾಯಿಯ ನಿಸ್ವಾರ್ಥ ಸೇವೆಯ ಬಗ್ಗೆ ತಿಳಿದ ಅವರು, ಅಹಮದನಗರ ಜಿಲ್ಲೆಯ ಗುಹಾ ಎಂಬಲ್ಲಿ ತಮಗಿದ್ದ 10 ಎಕರೆ ಭೂಮಿಯನ್ನು ಸಿಂಧೂತಾಯಿಗೆ ದಾನ ಮಾಡಿದರು.

ಈಗ ಏನಾಗಿದೆ ಗೊತ್ತೆ ? ಸಿಂಧೂತಾಯಿಯ ಮಡಿಲು ಸೇರಿದ ಮಕ್ಕಳ ಸಂಖ್ಯೆ ಸಾವಿರಕ್ಕೂ ಅಧಿಕ ದಾಟಿದೆ. ಸಿಂಧೂತಾಯಿ, ಈ ಎಲ್ಲರನ್ನೂ ಓದಿಸಿದ್ದಾಳೆ. ಪ್ರತಿಷ್ಠಿತ ಸಾವಿತ್ರಿಬಾಯಿ ಫುಲೆ ಪುರಸ್ಕಾರವೂ ಸೇರಿದಂತೆ, 200ಕ್ಕೂ ಹೆಚ್ಚು ಪ್ರಶಸ್ತಿಗಳು ಸಿಂಧೂತಾಯಿಯನ್ನು ಹುಡುಕಿಕೊಂಡು ಬಂದಿವೆ. 'ಮೀ ಸಿಂಧೂತಾಯಿ' ಎಂಬ ಹೆಸರಿನ ಆತ್ಮಚರಿತ್ರೆ

ಪ್ರಕಟವಾಗಿದೆ. ಈಕೆಯ ಬದುಕನ್ನು ಆಧರಿಸಿ ತಯಾರಾದ 'ಮೀ ಸಿಂಧೂತಾಯಿ ಸಪ್ಕಾಲ' ಎಂಬ ಮರಾಠಿ ಚಲನಚಿತ್ರ ಲಂಡನ್ ಚಿತ್ರೋತ್ಸವದಲ್ಲಿ ಪ್ರದರ್ಶಿತವಾಗಿದೆ. ಒಂದು ಕಾಲದಲ್ಲಿ ಈಕೆಯನ್ನು ಛೀ ಎಂದು ದೂರ ತಳ್ಳಿದ್ದ ನವರಗಾಂವ್‌ನ ಜನರೇ ಈಗ, ಕರೆದು ಸನ್ಮಾನಿಸಿದ್ದಾರೆ.

72 ವರ್ಷ ವಯಸ್ಸಿನ ಈ ಅಜ್ಜಿ ಈಗಲೂ ತನ್ನ ಮಡಿಲಲ್ಲಿರುವ ಮಕ್ಕಳು ಹಾಗೂ ವೃದ್ಧರನ್ನೂ ಸಲುಹಲು ಭಿಕ್ಷೆ ಬೇಡುತ್ತಾಳೆ. ಈ ತಾಯಿಯ ಕೈತ್ತುತ್ತು ತಿಂದು ಬೆಳೆದ ಮಕ್ಕಳಿದ್ದಾರಲ್ಲ ; ಅವರೆಲ್ಲ ತಪ್ಪದೆ ಈ ತಾಯಿಗೆ ಕಿರುಕಾಣಿಕೆ ಒಪ್ಪಿಸುತ್ತಾರೆ. 'ಅವ್ವಾ ನೀನು ಆಯಾಸ ಮಾಡ್ಕೋಬೇಡ. ಈಗ ನಾವೆಲ್ಲಾ ಬೆಳೆದಿದ್ದೇವೆ. ಆಶ್ರಮದ ಕೆಲಸವನ್ನೆಲ್ಲನಾವು ನೋಡ್ಕೋತೀವಿ. ನೀನು ರೆಸ್ಟ್ ತಗೋ' ಎಂದು ಒತ್ತಾಯಿಸುತ್ತಿದ್ದಾರೆ. ಆದರೆ, ರೆಸ್ಟ್ ತೆಗೆದುಕೊಳ್ಳಲು ಅಜ್ಜಿ ಒಪ್ಪುತ್ತಿಲ್ಲ.

ಅಮ್ಮಾ, ಈಗ ಒಮ್ಮೆ ಹಿಂತಿರುಗಿ ನೋಡಿದರೆ ಏನನ್ನಿಸ್ತದೆ ಎಂದು ಪ್ರಶ್ನಿಸಿದರೆ ಈ ಭೂಮಿ ತೂಕದ ಮಹಿಳೆ ಹೇಳುತ್ತಾಳೆ; ಎಲ್ಲವೂ ಒಂದು ಕನಸಿನಂತೆ ನಡೆದು ಹೋಗಿದೆ. ನಾನೀಗ ಸಾವಿರ ಮಕ್ಕಳ ತಾಯಿ. ಹೀಗೆ ಹೇಳಲಿಕ್ಕೆ ನನಗಂತೂ ಹೆಮ್ಮೆ. ನನ್ನ ಆಶ್ರಮದಲ್ಲಿ ಎಲ್ಲ ರಾಜ್ಯದ ಮಕ್ಕಳೂ ಇದ್ದಾರೆ. ಒಂದು ವೇಳೆ ನನ್ನ ಗಂಡ ನನ್ನನ್ನು ಮನೆಯಿಂದ ಹೊರಹಾಕದಿದ್ದರೆ ಇಂಥದೊಂದು ಸಾಧನೆ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ ನನ್ನ ಗಂಡನಿಗೆ ಹಾಗೂ ದಶಕಗಳ ಹಿಂದೆ ನನಗೆ ಕಿರುಕುಳ ಕೊಟ್ಟವರಿಗೆ ಥ್ಯಾಂಕ್ಸ್ ಹೇಳಬೇಕು...

ಮತ್ತೊಂದು ವಿಶೇಷ ಗೊತ್ತೆ ? ಸಿಂಧೂತಾಯಿಯ ಗಂಡನಿಗೆ ಈಗ 85 ವರ್ಷ ದಾಟಿದೆ. ಆತನ ಆರೋಗ್ಯ ಸಂಪೂರ್ಣ ಹದಗೆಟ್ಟಿದೆ. ವಿಷಯ ತಿಳಿದಾಗ, ಆತನನ್ನೂ ತನ್ನ ಆಶ್ರಮಕ್ಕೆ ಕರೆತಂದು ಆರೈಕೆ ಮಾಡುತ್ತಿದ್ದಾಳೆ ಸಿಂಧೂತಾಯಿ. ಈತ ನಮ್ಮ ಆಶ್ರಮದ ತುಂಬಾ ಹಳೆಯ ಮಗು ಎಂದು ಎಲ್ಲರಿಗೂ ಪರಿಚಯ ಮಾಡಿಕೊಡುತ್ತಾಳೆ. ಅಷ್ಟೇ ಅಲ್ಲ, ಮೂರು ದಶಕದ ಹಿಂದೆ ಕೊಟ್ಟಿಗೆಯಲ್ಲಿ ಹೆರಿಗೆಯಾದಾಗ ತನ್ನನ್ನು ಕಾಪಾಡಿದ ಹಸುವಿನ ನೆರವನ್ನೂ ಆಕೆ ಮರೆತಿಲ್ಲ. ಸಿಂಧಿವಿಹಾರ ಎಂಬಲ್ಲಿ ಗೋಪಿಕಾ ಗೋವು ರಕ್ಷಣ ಕೇಂದ್ರ ಆರಂಭಿಸಿ ಹಸುಗಳಿಗೆ ಆಶ್ರಯ ನೀಡಿದ್ದಾಳೆ.

## ಶಬ್ದಗಳ ಅರ್ಥ

ಸಾಧಕಿ – ಸಾಧನೆ ಮಾಡಿದವಳು; ಪೋಷಕ – ರಕ್ಷಿಸುವವ; ಚಿಂದಿ – ಹರಕುಬಟ್ಟೆ; ನೆರಳು ಕೊಡು–ಆಶ್ರಯ ನೀಡು.

- **ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.**

ಅನಿಷ್ಟ – ................ ; ದಾಂಪತ್ಯ – ............. ; ಹೆರಿಗೆ – ............... ;

ಅನುಮಾನ – .................

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಸಿಂಧೂ ತಾಯಿಯ ಹುಟ್ಟೂರು ಯಾವುದು ?

ಉತ್ತರ ..........................................................................................

ಆ) ಟೈಗರ್ ಪ್ರೊಜೆಕ್ಟನ್ನು ಎಲ್ಲಿ ಆರಂಭಿಸಲು ಉದ್ದೇಶಿಸಿದ್ದರು ?

ಉತ್ತರ ..........................................................................................

ಇ) ಸಿಂಧೂತಾಯಿ ತನ್ನ ಸ್ವಂತ ಮಗಳನ್ನು ಎಲ್ಲಿ ಬಿಟ್ಟು ಬಂಡು ?

ಉತ್ತರ ..........................................................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತು ಬರೆಯಿರಿ.**

ಅ) ..........................................................................................

ಉತ್ತರ ..........................................................................................

ಆ) ..........................................................................................

ಉತ್ತರ ..............................................................................................

**ಪ್ರಶ್ನೆ 3) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಸಿಂಧೂತಾಯಿ ಶಿಕ್ಷಣ ಪಡೆದ ಬಗೆಯನ್ನು ತಿಳಿಸಿರಿ.

ಉತ್ತರ ..............................................................................................

..............................................................................................

ಆ) ಸಹಸ್ರಾರು ಜನರಿಗೆ ಗೊತ್ತಾಗುವಂತಹ ಯಾವ ಘಟನೆ ಜರುಗಿತು ?

ಉತ್ತರ ..............................................................................................

..............................................................................................

ಇ) ಖೋಲ್ಸೆ ಪಾಟೀಲರು ಯಾವ ರೀತಿ ಸಹಾಯ ಮಾಡಿದರು ?

ಉತ್ತರ ..............................................................................................

..............................................................................................

**ಪ್ರಶ್ನೆ 4) ಯೋಚಿಸಿ ಕೆಳಗಿನ ವಿಧಾನಗಳನ್ನು ಪೂರ್ಣಗೊಳಿಸಿರಿ.**

1) ಸಿಂಧೂತಾಯಿಯವರು ಅನಾಥ ಮಕ್ಕಳಿಗಾಗಿ ಆಶ್ರಮಗಳನ್ನು ತೆರೆದರು.
ಹಾಗಾದರೆ ಸಾವಿತ್ರಿಬಾಯಿ ಫುಲೆಯವರು ಹೆಣ್ಣುಮಕ್ಕಳಿಗಾಗಿ .................

2) 1980ರಲ್ಲಿ ಚಿಕಲಧಾರಾ ಟೈಗರ್ ಪ್ರೊಜೆಕ್ಟಗಾಗಿ ಜನರನ್ನು ಒಕ್ಕಲೆಬ್ಬಿಸಲಾಗಿತ್ತು.
ಆದರೆ 1993ರಲ್ಲಿ ಕಿಲ್ಲಾರಿ ಭೂಕಂಪ ಸಂತ್ರಸ್ತರಿಗೆ .........................

3) ಸಿಂಧೂತಾಯಿಯವರಿಗೆ ಹೆರಿಗೆ ಸಮಯದಲ್ಲಿ ಮನುಷ್ಯರು ಹಿಂಸೆ ನೀಡಿದರು.
ಆದರೆ ಮೂಕ ಪ್ರಾಣಿಗಳು .....................

**ಪ್ರಶ್ನೆ 5) ಕೆಳಗಿನ ಸಂದರ್ಭದಲ್ಲಿ ನೀವು ಏನು ಮಾಡುವಿರಿ.**



.........................................................................................................

.........................................................................................................

.........................................................................................................

**ಪ್ರಶ್ನೆ 6) ಕೆಳಗಿನ ಪದಗಳ ಅರ್ಥಹೇಳಿ ವಾಕ್ಯದಲ್ಲಿ ಉಪಯೋಗಿಸಿರಿ.**

1) ಮೂಗುಮುರಿ = ...................

.........................................................................

.......................................................................

2) ಕೈಯೊಡ್ಡು = ...................

.........................................................................

.......................................................................

3) ಸತ್ಕರಿಸು = ...................

.........................................................................

.......................................................................

**ಉಪಕ್ರಮ :** ಸಮೀಪದಲ್ಲಿರುವ ವೃದ್ಧಾಶ್ರಮಕ್ಕೆ ಭೇಟ್ಟಿಕೊಟ್ಟು ಅಲ್ಲಿರುವ ಹಿರಿಯರೊದಿಗೆ ಸಂಭಾಷಣೆ ನಡೆಸಿ ನಿಮ್ಮ ಶಿಕ್ಷಕರ / ಪಾಲಕರ ಸಹಾಯದಿಂದ ವ್ಹಿಡಿಯೋ ಕ್ಲಿಪ ತಯಾರಿಸಿರಿ.

## ಪರರ ಸೇವೆಯನ್ನು ಮಾಡಿ ಪರಮಾನಂದವನ್ನು ಪಡೆ

- **ಯೋಚಿಸಿ ಉತ್ತರಿಸಿರಿ.**

ಅ) ಗುಂಪಿಗೆ ಸೇರದ ಸಂಧಿ ಪದವನ್ನು ಗುರುತಿಸಿರಿ.

1) ನೂರಾರು 2) ಮನೆಯಿಂದ 3) ಊರಿಂದೂರಿಗೆ 4) ಕಲ್ಲನ್ನು

ಆ) ''ಮೂಷಕ ವಾಹನ'', ಈ ಪದವು ಯಾರನ್ನು ಪ್ರತಿನಿಧಿಸುತ್ತದೆ ?

1) ವಿಷ್ಣು 2) ಶಿವ 3) ಗಣೇಶ 4) ಬ್ರಹ್ಮ

8BHUN5

# 5. ನಗೆಯ ಬಗೆ

**ಲೇಖಕರ ಪರಿಚಯ :** ಎಸ್. ವ್ಹಿ. ರಾವ್ ಇವರು, 'ಬದುಕಿನ ಚಿತ್ರಗಳು', 'ವಕ್ರದೃಷ್ಟಿ', 'ನಗೆದೀವಿಗೆ' ಮುಂತಾದ ಹಾಸ್ಯ ಗ್ರಂಥಗಳನ್ನು ರಚಿಸಿದ್ದಾರೆ. ಜೀವನದ ವೈವಿಧ್ಯಮಯ ವಿಷಯಗಳಿಗೆ ಹಾಸ್ಯದ ಹೊನಲನ್ನು ತುಂಬಿ ಸಹೃದಯರನ್ನು ನಗೆಗಡಲಿನಲ್ಲಿ ತೇಲಿಸುವ ಕಲೆ ಇವರಿಗೆ ಕರಗತವಾಗಿದೆ.

ನಗೆಯ ವಿವಿಧ ಮಜಲುಗಳನ್ನು ವೈವಿಧ್ಯಮಯವಾಗಿ ಇಲ್ಲಿ ಚಿತ್ರಿಸಲಾಗಿದೆ.



ಎಲ್ಲರೂ ನಗುತ್ತಾರೆ. ಕೆಲವರು ನಗುನಗುತ್ತಾ ಇರುತ್ತಾರೆ. ಕೆಲವರಿಗೆ ಸಣ್ಣ ವಿಷಯಗಳಿಗೆ ಕೂಡಾ ದೊಡ್ಡ ನಗೆ ಬರುತ್ತದೆ; ನಗೆ ತಡೆಯುವುದೇ ಕಷ್ಟವಾಗಿ ದೀರ್ಘ ನಗೆಯಾಗುತ್ತದೆ.

ಒಂದು ಸಲ ನನ್ನ ಸ್ನೇಹಿತನ ಮನೆಗೆ ಹೋದಾಗ ಸಾಯಂಕಾಲ. ಅಕ್ಕ ತಮ್ಮರಿಬ್ಬರೂ ಭಜನೆ ಮಾಡುತ್ತಿದ್ದರು. ಅಕ್ಕನದು ಮಧುರ ಸ್ವರ. ತಮ್ಮನ ಸ್ವರ ಕೊಂಚ ಒರಟು. ಸರಾಗವಾಗಿ ಹಾಡುತ್ತಿದ್ದಾಗ ಮಧ್ಯೆ ಒರಟು ಸ್ವರವನ್ನು ಸ್ವಲ್ಪ ತಾರಕಕ್ಕೇರಿಸುತ್ತಿದ್ದನು. ಇದೇ ನಗೆಗೆ ಉಗಮವಾಗುತ್ತಿತ್ತು. ಭಜನೆಗಿಂತ ನಗೆಯೇ ಜಾಸ್ತಿಯಾಗುತ್ತಿತ್ತು. ಹೊ....... ಹೊ........ ಹ್ಹೋ......... ಎಂದು ನಗೆಯೇ ನಗೆ. ನಗೆಯಲ್ಲೇ ಭಜನೆಯ ಮುಕ್ತಾಯ.

ನಮ್ಮ ಒಬ್ಬ ಅಧ್ಯಾಪಕರಿಗೆ ಹಾಸ್ಯ ಸಾಹಿತ್ಯವನ್ನು ಓದುವಾಗ ನಗೆ ಉಕ್ಕಿ ಉಕ್ಕಿ ಬರುತ್ತಿತ್ತು. ಈ ಪ್ರಸಂಗದ ಸದವಕಾಶವನ್ನು ಪಡೆದು ವಿದ್ಯಾರ್ಥಿಗಳು ನಗೆಯ ಹೊನಲನ್ನೇ ಹರಿಸುತ್ತಿದ್ದರು. ಅದು ನಿಲ್ಲುವ ಸಮಯಕ್ಕೆ ಸರಿಯಾಗಿ ಒಬ್ಬ ವಿದ್ಯಾರ್ಥಿ 'ಅಹ್ಹಹ್ಹ' ಎಂದು ಪುನಃ ನಗೆ ಪ್ರಾರಂಭಿಸುತ್ತಿದ್ದನು. ಹೀಗಾಗಿ ದೀರ್ಘಕಾಲ ನಡೆಯುತ್ತಿತ್ತು, ನಗೆಯ ವೈಖರಿ !

ಸೊಟ್ಟ ಮೋರೆಯ ಸಿಡುಕಿನವರು ಎಂದಾದರೊಮ್ಮೆ ನಗುತ್ತಾರೆ. ಎಂಥಾ ಹಾಸ್ಯ ಪ್ರಸಂಗಗಳಲ್ಲಿಯೂ ಆ ಮುಖಗಳ ಮೇಲೆ ನಗೆ ಮೂಡುವುದು ದುರ್ಲಭ. ಒಂದು ವೇಳೆ ಮೂಡಿದರೂ ನಗೆಯ ಛಾಯೆ ಮಾತ್ರ. ಅದೂ ತಕ್ಷಣ ಮಾಯವಾಗುತ್ತದೆ. ತಾವಂತೂ ನಗುವುದಿಲ್ಲ,


ಬೇರೆಯವರು ನಗುವುದನ್ನೂ ಸಹಿಸುವುದಿಲ್ಲ. ಕಿರಿಯರೂ ಅವರೆದುರು ನಕ್ಕರೆ, ಛೀ !, ಯಾಕೆ ಸುಮ್ಮನೆ ನಗುವುದು ? ಎಂದು ಗದರಿಸುತ್ತಾರೆ. ಈ ಭಯವಿದ್ದರೂ ನಗೆಯು ಮೆರೆಯುತ್ತದೆ; ಬೆಳೆಯುತ್ತದೆ. ನಗೆ, ಅಂಟುರೋಗದ ಹಾಗೆ. ಆದ್ದರಿಂದ ಒಬ್ಬರಿಂದೊಬ್ಬರಿಗೆ ಬೇಗನೆ ಹರಡುತ್ತದೆ. ಒಬ್ಬ ನಗುವುದನ್ನು ನೋಡಿ, ಕಾರಣ ತಿಳಿಯದಿದ್ದರೂ ಇನ್ನೊಬ್ಬ ನಗುತ್ತಾನೆ.

ಕಾರಣವೇನಾದರೂ ಇರಲಿ, ನಗುವುದು ಹೇಗಾದರೂ, ಎಷ್ಟಾದರೂ ಇರಲಿ, ಕನ್ನಡಿ ನೋಡಿಕೊಂಡು ಯಾರು ನಗುವುದಿಲ್ಲ ? ಇದನ್ನು ಓದಿ ನೀವೂ ನಗಬಹುದು. ನೀವು ನಗುವ ಅಂದವನ್ನು ಕನ್ನಡಿಯಲ್ಲಾದರೂ ನೋಡಿಕೊಳ್ಳಿ. ನಗುವ ಅಂದ ಹಲ್ಲಿನಿಂದ. ನಾನೇನೋ ದಂತ-ಧಾವನದ ಜಾಹೀರಾತು ಮಾಡಲು ಹೊರಟಿದ್ದೇನೆಂದು ಭಾವಿಸಬೇಡಿ. ಹಲ್ಲನ್ನು ಕೀಳುವ ದಂತವೈದ್ಯನೂ ನಾನಲ್ಲ. ನಗುವಾಗ ಹಲ್ಲು (ಇದ್ದರೆ!) ತೋರಿಸಬಾರದೆಂದು ನೀವು ಪ್ರಯತ್ನಿಸಬಹುದು. ಆದರೆ ನಗುವಾಗ ಹಲ್ಲುಗಳು ಮುಚ್ಚಲೆಳಸಿದಷ್ಟು ಅವು ಇಣಕಿ ನೋಡುತ್ತವೆ; ಕೆಲವು ಸಲ ಮೂವತ್ತೆರಡೂ ಒಟ್ಟಿಗೆ ತೋರಿಸಿಕೊಳ್ಳಲು ಪ್ರಯತ್ನಿಸುತ್ತವೆ.ಹೀಗೆ ಬೇರೆ ಬೇರೆ ವಿಧದಲ್ಲಿ ತೋರಿಸಿಕೊಳ್ಳುವ ಹಲ್ಲುಗಳಿಂದಲೇ ನಗುವ ಅಂದವನ್ನು ನೋಡಬಹುದು.

ಮೋಹಕ ನಗೆಯಲ್ಲಿ ಹಲ್ಲುಗಳು ತಮ್ಮನ್ನು ತೋರಿಸಿಕೊಳ್ಳುವ ಪ್ರಯತ್ನ ಮಾತ್ರ ಮಾಡುತ್ತವೆ. ಮುಗುಳು ನಗೆ ಮುಖವನ್ನು ತುಸು ಅರಳಿಸಿ ತುಟಿಗಳ ಮೇಲೆ ಲಾಸ್ಯವಾಡುತ್ತದೆ. ನಗೆಯಲ್ಲೆಲ್ಲಾ ಇದು ಹೆಚ್ಚು ಪ್ರಭಾವಶಾಲಿ.

ಕೆಲವರು ಮಾತಾಡುತ್ತ ನಗುತ್ತಾರೆ ಅಥವಾ ನಗುತ್ತಾ ಮಾತಾಡುತ್ತಾರೆ. ಕಾರಂಜಿಯಂತೆ ಉಗುಳು ಹಾರಿಸುತ್ತಾರೆ. ಇದೇ ಉಗುಳು ನಗೆ. ಹೀಗೆ ನಗುವವರಿಂದ ಮೂರಡಿ ದೂರವಿರುವುದು ಲೇಸು. ಮಾತಿನ ಸರಸ, ನಗೆಯ ರಭಸ, ಉಗುಳಿನ ಬಿರುಸು ಇವನ್ನು ದೂರವಿದ್ದು ಎದುರಿಸಬೇಕು; ಒಮ್ಮೊಮ್ಮೆ ಸಹಿಸಬೇಕು.

ಹಲವು ಸಲ ಮಾತಿಗಿಂತ ನಗೆಯು ಜಾಸ್ತಿಯಾಗಿ, ನಗೆಗಿಂತ ಉಗುಳು ಹೆಚ್ಚಾಗುತ್ತದೆ. ಏನೋ ಹಾಸ್ಯ ಪ್ರಸಂಗವನ್ನು ಅತ್ಯುತ್ಸಾಹದಿಂದ ನಗುತ್ತಾ ಹೇಳಿಕೊಂಡು ಬರುತ್ತಾರೆ. ಆ ಉಗುಳು ನಗೆಯ ತುಂತುರಕ್ಕೆ ಅಂಜಿ ನಾವು ದೂರ ಸರಿಯುತ್ತೇವೆ. ನಾವು ದೂರ ಸರಿದಷ್ಟೂ ಅವರು ಹತ್ತಿರ ಹತ್ತಿರ ಬರತೊಡಗುತ್ತಾರೆ. ಆಗ ಉಗುಳಿನ ತುಂತುರು ಮಳೆಯಿಂದ ರಕ್ಷಿಸಿಕೊಳ್ಳಲು ಕರವಸ್ತ್ರದಿಂದ ಮುಖ ಮುಚ್ಚಿಕೊಳ್ಳಬೇಕಾಗುತ್ತದೆ.



ಹೆಚ್ಚಾಗಿ ಶಬ್ದಮಾಡಿ ಬಾಯಿ ಅಗಲಿಸಿ ಗಹಗಹಿಸಿ, ಬಿದ್ದು ಬಿದ್ದು ನಗುವುದು ಹುಚ್ಚು ನಗೆ. ಹುಚ್ಚು ನಗೆ ಬಾಯಲ್ಲಿ , ಮುಖದಲ್ಲಿ ಮಾತ್ರವಲ್ಲ ಮೈಯಲ್ಲೆಲ್ಲಾ ಕಾಣಿಸಿಕೊಳ್ಳುತ್ತದೆ. ಮೈ ನಡುಗುತ್ತದೆ. ತಲೆ ಅಲ್ಲಾಡುತ್ತದೆ, ಕೈ ಬಡಿಯುತ್ತದೆ, ಬಾಯಿ ತೆರೆಯುತ್ತದೆ, ಮೂವತ್ತೆರಡು ಹಲ್ಲುಗಳು ಕಾಣಿಸಿಕೊಳ್ಳುತ್ತವೆ.

ಹಲ್ಲುಗಳಿದ್ದರೆ ತಾನೇ ನಗುವಾಗ ಹಲ್ಲು ತೋರಿಸುವುದು ? ಹಲ್ಲುಗಳೇ ಇಲ್ಲದ ಬೊಚ್ಚು ಬಾಯಿಯವರು, ಬರೇ ಬಾಯಿತೋರಿಸುತ್ತಾರೆ. ಇದೇ ಬೋಳು ನಗೆ. 'ಹಲ್ಲು ಕಿರಿಯುವುದು, ಹಲ್ಲು ತೋರಿಸುವುದು' ಎಂಬ ಮಾತುಗಳು ಅವರಿಗೆ ಅನ್ವಯಿಸುವುದಿಲ್ಲ.

ನಗೆ, ಅಡೆತಡೆಯಿಲ್ಲದೆ ಅಖಂಡವಾಗಿ ದೀರ್ಘವಾಗಿರಬಹುದು. ಕೆಲವು ಸಲ ಒಂದು ಕ್ಷಣ ವಿರಾಮದಿಂದ ಮರುಕಳಿಸಬಹುದು. ಹೀಗೆ ತಡೆ ತಡೆದು ಬರುವ ನಗೆ ಹೋಳು ನಗೆ. 'ಅಹ್ಹಹ್ಹ ಹುಂ....... ಅಹ್ಹಹ್ಹ ಹೀಗೆ ಅಥವಾ ಉಹ್ಹು.......... ಉಹ್ಹುಹ್ಹು.'

ಕೆಮ್ಮು ನಗೆ ಗೊತ್ತೇ ನಿಮಗೆ ? ಕೆಲವರು ನಕ್ಕು ನಕ್ಕು ನಡುವೆ ಕೆಮ್ಮುತ್ತಾರೆ. ಕೆಮ್ಮಿ ನಗುತ್ತಾರೆ. ಆಗ ನಗೆಗೂ, ಕೆಮ್ಮಿಗೂ ಪೈಪೋಟಿ ನಡೆಯುತ್ತದೆ. ನಕ್ಕು, ಕೆಮ್ಮಿ ಕೆಮ್ಮಿ, ನಕ್ಕು ಸುಸ್ತಾಗುತ್ತಾರೆ.

''ಮುಖದಲ್ಲಿ ನಗೆ ಮನದಲ್ಲಿ ಧಗೆ,'' ಇರುವ ನಗೆಯೊಂದಿದೆ. ಮುಖದಲ್ಲಿ ನಸುನಗೆ ಸೂಸಿ, ಸಿಹಿ ಮಾತಾಡಿ ಮೋಸ ಮಾಡುವವರು ಹಲವರಿದ್ದಾರೆ. ಅವರ ಮಾತಿಗೆ ಮಾರು ಹೋಗಿ, ನಗೆಗೆ ಮನ ಸೋತು ಬಲೆಗೆ ಸಿಲುಕಿ ಒದ್ದಾಡುವವರ ಸ್ಥಿತಿ ಕರುಣಾಜನಕ. ಇದು ವಂಚಕ ನಗೆ.

ಸಲ್ಲದ ವೇಳೆಯಲ್ಲಿ ಒಲ್ಲದ ನೆಂಟರು ಯಾರೋ ಬರುತ್ತಾರೆ. ಆಗ ಅವರನ್ನು ಸ್ವಾಗತಿಸಿ ನೀವು ಹಲ್ಲು ಕಿರಿಯಬೇಕು. ಮನೆಯ ಅನಾನುಕೂಲತೆಗಳನ್ನು ಹೇಳಿ ಎಷ್ಟೋ ಸಲ ಮೊರೆಯಿಟ್ಟರೂ ಗಮನಕೊಡದೆ ತಿಂಗಳ ಮೊದಲ ದಿನ ಹಲ್ಲು ಕಿರಿದು ಬಾಡಿಗೆಗೆ ಕೈಯೊಡ್ಡುತ್ತಾನೆ ಮಾಲಿಕ. ಆಗ ನೀವು ಪ್ರತಿಯಾಗಿ ಹಲ್ಲು ಕಿರಿಯಬೇಕಾಗುತ್ತದೆ. ಹೀಗೆ ಸಂದರ್ಭದ ಆವಶ್ಯಕತೆಯಿಂದ ಮನಸ್ಸಿಲ್ಲದೆ ಬರಿಸಿ ತೋರಿಸುವ ನಗೆ ದೇಶಾವರಿ ನಗೆ.' ಈ ಲೇಖನವನ್ನು ಓದಿದ ಮೇಲೆ ನಿಮಗೆ ನಗು ಬರುವುದು ಸ್ವಾಭಾವಿಕ. ಅದು ಯಾವ ಪ್ರಕಾರದ ನಗೆ ಎನ್ನಬಹುದು ? ಯಾವುದೇ ಇರಲಿ, ನಮ್ಮನ್ನು ಸಂತೋಷಪಡಿಸುವುದರಲ್ಲಿಯೇ ನಗೆಯ ಸಾರ್ಥಕತೆ ಇದೆ.

– ಎಸ್. ವ್ಹಿ. ರಾವ್

## ಶಬ್ದಗಳ ಅರ್ಥ

ವೈಖರಿ – ರೀತಿ, ಬೆಡಗು ; ಛಾಯೆ – ನೆರಳು, ಪ್ರತಿಬಿಂಬ ; ಧಾವನ – ಉಜ್ಜುವಿಕೆ ; ಲಾಸ್ಯ – ಕುಣಿತ; ಪೈಪೋಟಿ – ಸ್ಪರ್ಧೆ ; ಸುಸ್ತಾಗು – ಬಳಲು ; ದೇಶಾವರಿ ನಗೆ – ತೋರಿಕೆಯ ನಗೆ ; ಮೋಹಕ – ಮುಗುಳುನಗೆ.

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಬರೆಯಿರಿ.

ಒರಟು – ............. ; ತಾರಕ ಸ್ವರ – .................. ; ವೈಖರಿ – ...............

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

ಅ) ಭಜನೆಗಿಂತ ಯಾವುದು ಜಾಸ್ತಿಯಾಗುತ್ತಿತ್ತು ?

ಉತ್ತರ ..........................................................................................

ಆ) ಉಗುಳು ನಗೆ ಎಂದರೇನು ?

ಉತ್ತರ ..........................................................................................

ಇ) ಕೆಮ್ಮು ನಗೆ ಎಂದರೇನು ?

ಉತ್ತರ ..........................................................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತು ಬರೆಯಿರಿ.**

ಅ) ..........................................................................................

ಉತ್ತರ ..........................................................................................

ಆ) ..........................................................................................

ಉತ್ತರ ..........................................................................................

**ಪ್ರಶ್ನೆ 3) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಮೋಹಕನಗೆ ಎಂದರೇನು?

ಉತ್ತರ ..........................................................................................

ಆ) ಹುಚ್ಚು ನಗೆಯ ಬಗ್ಗೆ ಬರೆಯಿರಿ.

ಉತ್ತರ ..........................................................................................

ಇ) ಬೋಳುನಗೆ ಎಂದರೇನು ?

ಉತ್ತರ ..........................................................................................

**ಪ್ರಶ್ನೆ 4) ಕೆಳಗಿನ ಪದಗಳನ್ನು ವಾಕ್ಯಗಳಲ್ಲಿ ಉಪಯೋಗಿಸಿ ಬರೆಯಿರಿ.**

1) ಸಾಹಿತ್ಯ.........................................................................

2) ಜಾಹೀರಾತು.....................................................................

3) ಪ್ರಯತ್ನ.........................................................................

4) ತುಂತುರು.......................................................................

**ಉಪಕ್ರಮ :** ನಗೆಹನಿಗಳನ್ನು ಹೇಳಲು ಕಲಿಯಿರಿ.

**ನಗುವುದು ಸಹಜಧರ್ಮ ನಗಿಸುವುದು ಪರಧರ್ಮ**

- **ಯೋಚಿಸಿ ಉತ್ತರಿಸಿರಿ.**

ಅ) ಭಾರತರತ್ನ ಪ್ರಶಸ್ತಿ ಪಡೆದ ಕರ್ನಾಟಕದ ಸಂಗೀತಗಾರ್ತಿ –

1) ಗಂಗೂಬಾಯಿ ಹಾನಗಲ್ಲ 2) ಬಿ. ಆರ್. ಛಾಯಾ

3) ಸಂಗೀತಾ ಕಟ್ಟಿ 4) ಎಂ. ಎಸ್. ಸುಬ್ಬಲಕ್ಷ್ಮಿ


BC6QQF

ಆ) ಗಂಗಾವತಿ ಬೀಚಿ ಎಂದು ಕರೆಯಿಸಿಕೊಳ್ಳುವ ಹಾಸ್ಯದಿಗ್ಗಜ –

1) ಪ್ರೊ. ಕೃಷ್ಣೇಗೌಡ 2) ನರಸಿಂಹ ಜೋಶಿ

3) ಪ್ರಾಣೇಶ 4) ರಿಚರ್ಡ ಲೂಯಿಸ

# 6. ಇರುವುದನ್ನು ಇಷ್ಟಪಡು



**ಮಗು :** ಅಮ್ಮ ನನಗೆ ತುಂಬ ಬೇಜಾರಾಗಿದೆ. ನಮಗೆ ಇತರರ ಹಾಗೆ ಸುಖದಿಂದ ಬಾಳಲು ಸಾಧ್ಯವಿಲ್ಲವೆ ?

**ಅಮ್ಮ :** ಯಾಕೆ, ಮಗು ಏನಾಯಿತು ? ನಿನಗೇಕೆ ಈ ಚಿಂತೆ ?

**ಮಗು :** ನೀನು ಹಾಗೂ ಅಪ್ಪ ಎಷ್ಟು ಒಳ್ಳೆಯವರಾಗಿದ್ದೀರಿ. ನಮಗೇಕೆ ಇತರರಂತೆ ಸುಖದಿಂದ ಬಾಳಲು ಸಾಧ್ಯವಾಗದು ?

**ಅಮ್ಮ :** ನಿನಗೇನು ಕೊರತೆ ಮಗು ? ನೀನು ಬೇಡಿದ್ದನ್ನು ನಾವು ಕೊಡುತ್ತಲೇ ಇದ್ದೇವಲ್ಲ !


**ಮಗು :** ಹಾಗಲ್ಲಮ್ಮ ! ನೆರೆ ಮನೆ ಅಂಕಲ್ ಬಳಿ ಕಾರು ಇದೆ. ಮೊನ್ನೆ ಗೆಳೆಯ ಗಿರೀಶನ ತಂದೆ ಬಂಗಲೆ ಕಟ್ಟಿಸಿದರು. ಎದುರು ಮನೆಯವರು ಹೊಸ ಟಿ.ವ್ಹಿ. ತಂದಿದ್ದಾರೆ. ರಮೇಶನ ಅಣ್ಣ ಹೊಸ ಬೈಕ್ ಕೊಂಡು ತಂದಿದ್ದಾನೆ. ಇದಾವುದು ನಮ್ಮಲಿಲ್ಲವಲ್ಲ !

**ಅಮ್ಮ :** ರಾಜು, ನಿನ್ನ ಮಾತಿನ ಅರ್ಥ ನನಗೆ ತಿಳಿಯಿತು. ಮಗು, ನೀನು ಆಸೆಪಡುವುದೇನೋ ಸರಿ. ಆದರೆ ಅತೀ ಆಸೆ ಒಳ್ಳೆಯದಲ್ಲ. ಅವರ ಬದುಕು ಅವರಿಗೆ, ನಮ್ಮ ಬದುಕು ನಮಗೆ. ನಾವೆ ಇದ್ದುದರಲ್ಲೇ ಸುಖವಾಗಿದ್ದೇವಲ್ಲ !

**ಮಗು :** ಅಮ್ಮ ! ಇಗೇನೋ ಸುಖವಾಗಿದ್ದೀವಿ. ಮುಂದೆ ಗತಿಯೇನು ? ತಂದೆಯವರ ಅಲ್ಪ ಆದಾಯದಲ್ಲಿ ನಾವು ಏನು ಮಾಡಲು ಸಾಧ್ಯ ? ನಾವು ನಾಲ್ಕು ಜನರಲ್ಲಿ ಮರ್ಯಾದೆಯಿಂದ ಬಾಳಬಹುದೇ ? ನಿಮ್ಮ ಪ್ರಾಮಾಣಿಕತೆ, ಸಭ್ಯತೆಗೆ ಬೆಲೆ ಇದೆಯೇ ?

**ಅಮ್ಮ :** ಮಾನ ಮರ್ಯಾದೆಗಳು ಹಣದಿಂದ ದೊರೆಯುವುದಿಲ್ಲ. ಅವು ಗುಣದಿಂದ ದೊರೆಯುತ್ತವೆ. ಚಿಂತಿಸದಿರು ರಾಜು ನಿನಗೆ ಒಳ್ಳೆಯ ಭವಿಷ್ಯವಿದೆ. ಬಾ, ನಿನಗೊಂದು ಕಥಾಪ್ರಸಂಗವನ್ನು ತೋರಿಸುತ್ತೇನೆ.


ನಾವು ಹೊಟ್ಟೆ ತುಂಬ ತಿನ್ನ ಬೇಕೆಂದರೆ ಜಿರಾಫೆಯಂತೆ ಉದ್ದವಾದ ಕುತ್ತಿಗೆ ಇಲ್ಲ. ಮಂಗನಂತೆ ಜಿಗಿಯಲು ಬರುವದಿಲ್ಲ.
ನಿಮ್ಮ ವಿಚಾರ ಸರಿಯಾಗಿದೆ. ಇದಕ್ಕೆ ಏನಾದರೂ ಉಪಾಯವನ್ನು ಹುಡುಕೋಣ. ಈಗ ಹಸಿವೆಯಾಗಿದೆ ಸಮೀಪದ ಕೊಳದ ಬಳಿ ಇರುವ ಹಚ್ಚಹಸಿರಾದ ಕರಿಕೆಯನ್ನು ತಿಂದುಬರೋಣ ನಡೆಯಿರಿ.
ನಾವು ಕಾಡಿನಲ್ಲಿಯ ಎಲ್ಲ ಪ್ರಾಣಿಗಳಿಗೂ ಅಂಜಿ ಬದುಕಬೇಕು.
ನಡೆಯಿರಿ, ನಡೆಯಿರಿ ಕೊಳದ ಬಳಿ....
ಒಡೆಯನೆ ನಮಗೆ ಬದುಕುವುದೇ ಬೇಜಾರವಾಗಿದೆ.
ಮುಖಂಡರೆ ನಾವು ಬದುಕುವುದು ತುಂಬ ಕಷ್ಟವಾಗಿದೆ.
ನಾವು ಕ್ರೂರ ಪ್ರಾಣಿಗಳ ಕಣ್ಣಿಗೆ ಬಿದ್ದರೆ ಬದುಕುವುದೇ ಇಲ್ಲ.


ಗೆಳೆಯಾ ಆಕಡೆಯಿಂದ ಏನೋಸಪ್ಪಳ ಕೇಳಿಬರುತ್ತಿದೆ.
ಅಯ್ಯೋ ! ಅಲ್ಲಿ ನೋಡಿ ಮೊಲಗಳ ಹಿಂಡೇ ನಮ್ಮತ್ರ ಬರುತ್ತಿದೆ. ನಮ್ಮ ಜೀವಕ್ಕೆ ತುಂಬ ಅಪಾಯವಿದೆ. ಕೂಡಲೇ ನೀರಿಗೆ ಜಿಗಿದು ಪ್ರಾಣ ಉಳಿಸಿಕೊಳ್ಳೋಣ.
ಹೌದು ಯಾರೊ ಬರುತ್ತಿರುವಂತೆ ಕಂಡು ಬರುತ್ತಿದೆ.
ಹೌದು, ಹೌದು.


ಬನ್ನಿರೋ ಬೇಗ ಬನ್ನಿರಿ ಜಿಗಿಯಿರಿ.
ಅಯ್ಯೋ ಸತ್ತೆ ನಾನು ಸತ್ತೆ
ಅಯ್ಯೋ ನನ್ನ ಜೀವ ಉಳಿಸಿರಿ.
ಅಯ್ಯೋ ಜಿಗಿಯಿರಿ


ನೋಡಿದಿರಾ ! ಈ ಅಂಜುಬುರುಕ ಕಪ್ಪೆಗಳನ್ನು, ನಮ್ಮನ್ನು ಕಂಡು ಕೊಳಕ್ಕೆ ಜಿಗಿದವಲ್ಲ ! ನೀವೆಲ್ಲ ಕಣ್ಣಾರೆ ಕಂಡಿರಲ್ಲ. ನಮಗೂ ಹೆದರುವ ಪ್ರಾಣಿಗಳು ಈ ಸೃಷ್ಟಿಯಲ್ಲಿವೆ. ನಾವು ಆತ್ಮಹತ್ಯೆ ಮಾಡಿಕೊಳ್ಳುವ ಕಾರಣವಿಲ್ಲ.
ಇನ್ನು ನಾವು ಬಲುಹೇಡಿಗಳು ಎಂದು ತಿಳಿದುಕೊಳ್ಳುವ ಕಾರಣವಿಲ್ಲ.
ಹೌದು, ಹೌದು ದೊರೆ. ಕಪ್ಪೆಗಳು ನಮ್ಮನ್ನು ನೋಡಿ ಹೆದರಿದವು. ನೀರಿಗೆ ಜಿಗಿದವು. ನಾವು ಅವುಗಳಿಗಿಂತ ಬಲಿಷ್ಠರು.
ಹೌದು, ಹೌದು

**ಮಗು :** ಅಮ್ಮ ! ಎಷ್ಟೊಂದು ಮಾರ್ಮಿಕವಾಗಿದೆಯಲ್ಲ ಈ ಕಥೆ. ಇದು ನನ್ನ ಕಣ್ಣುಗಳನ್ನು ತೆರೆಯಿಸಿತು.

**ಅಮ್ಮ :** ಮಗು, ಇದನ್ನು ತಿಳಿದುಕೋ. ನಮ್ಮ ಸುತ್ತಲೂ ನಮಗಿಂತಲೂ ಬಡವರಿದ್ದಾರೆ. ಅವರನ್ನು ಕಂಡು, ನಮ್ಮ ಸ್ಥಿತಿ ಅವರಿಗಿಂತಲೂ ಚೆನ್ನಾಗಿದೆ ಎಂದು ಸಮಾಧಾನ ಪಡಬೇಕು.

**ಮಗು :** ಹೌದಮ್ಮ.

**ಅಮ್ಮ :** ನಾವು ನಮಗಿಂತಲೂ ಶ್ರೀಮಂತರನ್ನು ನೋಡಿ ದುಃಖ ಪಡಬಾರದು. ಇದ್ದುದರಲ್ಲಿಯೇ ನೆಮ್ಮದಿಯನ್ನು ಕಾಣಬೇಕು.

**ಮಗು :** ಆಗಲಮ್ಮ.

**ಉಪಕ್ರಮ :** ಈ ಪಾಠದಿಂದ ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬಹುದಾದ ಅಂಶಗಳನ್ನು ನಾಲ್ಕು ಸಾಲುಗಳಲ್ಲಿ ವ್ಯಕ್ತಗೊಳಿಸಿರಿ.


..............................................................................

..............................................................................

..............................................................................

..............................................................................

BCFLS3



# 7. ಪರಿಸರ ಮಾಲಿನ್ಯ



(ಪರಿಸರ ನಿರೀಕ್ಷಣೆಗಾಗಿ ವಿದ್ಯಾರ್ಥಿಗಳು ಹೊರಗೆ ಹೊರಟಿದ್ದಾರೆ. ಜೊತೆಗೆ ಗುರುಗಳೂ ಮತ್ತು ಹಿರೇಮಣಿಯೂ ಇದ್ದಾರೆ.)

**ಗುರುಗಳು** : ಮಕ್ಕಳೇ, ಈ ರಸ್ತೆಯ ಎಡಬದಿಯಿಂದ ಸಾಗಿರಿ. ಇಲ್ಲಿ ವಾಹನಗಳ ಓಡಾಟ ಹೆಚ್ಚು.

**ರಾಧಾ** : ಈ ವಾಹನ ಕಪ್ಪು ಹೊಗೆಯನ್ನು ಒಂದೇಸವನೆ ಬಿಡುತ್ತಲಿದೆ. ನನ್ನ ಕಣ್ಣುಗಳು ಉರಿಯತೊಡಗಿವೆ.

**ಜೊಸೆಫ್** : ನನಗಂತೂ ಈ ಹೊಗೆಯಿಂದ ಉಸಿರುಗಟ್ಟಿದಂತಾಗಿದೆ.

**ಮೋಹನ** : ಅದರಿಂದ ಹವೆ ದೂಷಿತವಾಗುತ್ತದೆ ಅಲ್ಲವೆ, ಗುರುಗಳೆ ?

**ಗುರುಗಳು** : ಹೌದು. ಹವೆಯು ದೂಷಿತವಾಗಲಿಕ್ಕೆ ಹಲವಾರು ಕಾರಣಗಳಿವೆ. ವಾಹನಗಳು ಬಿಡುವ ಕಪ್ಪು ಹೊಗೆಯಂತೂ ಸರಿಯೇ. ಅವು ಎಬ್ಬಿಸುವ ಧೂಳು, ಕೊಳಚೆಯ ಕೆಟ್ಟ ವಾಸನೆ, ಗಿರಣಿ, ಕಾರ್ಖಾನೆಗಳು ಹೊರಹಾಕುವ ಹೊಗೆಯೂ ಸೇರಿ, ಅವುಗಳೊಳಗಿನ ವಿಷಪೂರಿತ ಅನಿಲಗಳು ನಾವು ಉಸಿರಾಡುವ ಹವೆಯಲ್ಲಿ ಸೇರಿಕೊಳ್ಳುತ್ತವೆ.

**ರಾಧಾ** : ಗುರುಗಳೇ, ಹವೆಯು ದೂಷಿತವಾದರೆ ನಮಗೇನು ತೊಂದರೆ ?

**ಗುರುಗಳು** : ಇಂಥ ಹವೆಯನ್ನು ನಾವು ಉಸಿರಾಡುವಂತಾದರೆ, ಅದರಿಂದ ತಲೆನೋವು, ಕಣ್ಣುರಿತ, ಉಬ್ಬಸರೋಗ, ಕೆಮ್ಮು, ರಕ್ತದ ಒತ್ತಡ, ಚರ್ಮದ ರೋಗ ಉಂಟಾಗುವವು. ಕ್ಯಾನ್ಸರಿನಂತಹ ಭೀಕರ ರೋಗಕ್ಕೂ ಇದು ಕಾರಣವಾಗಬಹುದು.

**ರಮಾ** : ನಮ್ಮ ಉಸಿರಾಟಕ್ಕೆ ಶುದ್ಧಹವೆ ಬೇಕೇಬೇಕು ಅಲ್ಲವೆ ?

**ಸಮೀರ** : ಹಳ್ಳಿಗಳಲ್ಲಿ ಶುದ್ಧವಾದ ಹವೆ ಸಿಗುತ್ತದೆ, ಅಲ್ಲವೆ ಗುರುಗಳೇ ?

**ಗುರುಗಳು** : ಈಗ ಹಳ್ಳಿಗಳಲ್ಲಿಯೂ ಹವೆಯು ದೂಷಿತವಾಗತೊಡಗಿದೆ. ಮನೆ ಮನೆಗಳಲ್ಲಿ ಉರಿಸುವ ಹಸಿ ಸೌದೆಯ ಹೊಗೆಯಿಂದ ಉಸಿರು ಕಟ್ಟುತ್ತದೆ. ಮನೆಗೆ ತಾಗಿ ದನದ ಕೊಟ್ಟಿಗೆ ಇರುವುದರಿಂದ ಹೊಲಸು ವಾಸನೆ ಬರುತ್ತದೆ. ಹಳ್ಳಿಗಳಲ್ಲಿ ಬಚ್ಚಲು ನೀರನ್ನು ಹಾಗೆಯೇ ಹರಿಬಿಡುತ್ತಾರೆ. ದಾರಿಯ ಎಡಬಲಗಳಲ್ಲಿಯೇ ಮಲಮೂತ್ರ ಮಾಡುವುದುಂಟು. ಹವೆಯಲ್ಲಿ ಈ ಕೆಟ್ಟ ವಾಸನೆ ಸೇರಿಕೊಳ್ಳುತ್ತದೆ. ಇಷ್ಟೇ ಅಲ್ಲ; ಗಿಡಮರಗಳನ್ನು ತಮ್ಮ ಲಾಭಕ್ಕಾಗಿ ಕಡಿಯುತ್ತಾರಷ್ಟೆ. ಅದರಿಂದ ಹವೆಯಲ್ಲಿ ಧೂಳು ಹೆಚ್ಚುತ್ತದೆ. ಪರಿಸರವೆಲ್ಲ ಪ್ರದೂಷಣೆಗೊಳ್ಳುತ್ತದೆ

**ರವಿ** : 'ಪ್ರದೂಷಣೆ' ಎಂದರೇನು ಗುರುಗಳೇ ?

**ಗುರುಗಳು** : ಪ್ರದೂಷಣೆ ಎಂದರೆ ಮಲಿನವಾಗುವುದು, ಹೊಲಸಾಗುವುದು ಎಂದು ಅರ್ಥ. ಕೆಲವೊಮ್ಮೆ ಇಡೀ ಪರಿಸರವೇ ಮಲಿನಗೊಳ್ಳಬಹುದು. ದೂಷಿತ ಹವೆ, ಅಶುದ್ಧನೀರು, ವಾಹನಗಳ ಅತಿ ಕಿರುಚಾಟ, ಇಕ್ಕಟ್ಟಾದ ರಸ್ತೆಗಳು, ರೋಗ ಜಂತುಗಳನ್ನು ಹುಟ್ಟಿಸುವ ಅಶುದ್ಧ ಆಹಾರ – ಇವೆಲ್ಲ ಪರಿಸರವನ್ನು ಮಲಿನಗೊಳಿಸುವ ಮುಖ್ಯ ಕಾರಣಗಳು.

**ಮಾಲತಿ** : ಗುರುಗಳೆ ನೀರು ಹೇಗೆ ಅಶುದ್ಧವಾಗುವುದು ?

**ಗುರುಗಳು** : ಕುಡಿಯುವ ನೀರಿನ ಬಾವಿ ಸುತ್ತ-ಮುತ್ತ ಎಷ್ಟೋ ಬಾರಿ ಹೊಲಸು ನೀರು ನಿಂತಿರುತ್ತದೆ. ಆ ನೀರು ಇಂಗಿ ಬಾವಿಯ ನೀರಿನಲ್ಲಿ ಕೂಡಿಕೊಳ್ಳುವ ಸಾಧ್ಯತೆ ಇರುತ್ತದೆ. ಹಳ್ಳಿಗಳಲ್ಲಿ ಕೆರೆ ಇದ್ದರೆ ಅಲ್ಲಿ ಬಟ್ಟೆ ಒಗೆಯುವುದು, ದನಕರುಗಳ ಮೈ ತೊಳೆಯುವುದರಿಂದ ಆ ನೀರು ಎಷ್ಟು ಮಲೀನವಾಗಬಹುದೆಂದು ನೀವೇ ಊಹಿಸಿರಿ.

**ಹಿರೇಮಣಿ** : ಅದೇ ನೀರನ್ನು ಕುಡಿಯುವುದಕ್ಕೂ ಬಳಸಿದರೆ ಏನು ಗತಿ ?

**ಗುರುಗಳು** : ದುರ್ಗತಿಯೇ ಸರಿ. ಅಂಥ ನೀರಿನ ಸೇವನೆಯಿಂದ ಕಾಮಾಲೆ, ಕಾಲರಾ, ನಾರುಹುಣ್ಣು, ಆನೆಕಾಲು ರೋಗ ಬರುತ್ತದೆ. ನಮಗೆ ಬರುವ ಅನೇಕ ರೋಗಗಳಿಗೆ ಅಶುದ್ಧ ನೀರಿನ ಸೇವನೆಯೇ ಕಾರಣ.

**ಕವಿತಾ** : ಶುದ್ಧನೀರು ನಮಗೆ ಸಿಗಬೇಕಾದರೆ ಯಾವ ಎಚ್ಚರಿಕೆ ವಹಿಸಬೇಕು, ಗುರುಗಳೇ ?

**ಗುರುಗಳು** : ಕೊರೆದ ಬಾವಿಯ ನೀರನ್ನು ಬಳಸುವುದು ಉತ್ತಮ. ನಳದ ನೀರನ್ನು ಉಪಯೋಗಿಸುವಾಗ ಸೋಸಿ, ಕುದಿಸಿ ಬಳಸಬೇಕು. ಶುದ್ಧ ನೀರಿನಂತೆ ಶುದ್ಧ ಹವೆಯೂ ನಮಗೆ ಮಹತ್ವದ್ದು.

**ಸ್ವಾತಿ** : ಹೌದು, ಗುರುಗಳೇ. ಹವೆಯನ್ನು ನಾವು ಪ್ರತಿಕ್ಷಣಕ್ಕೂ ಉಸಿರಾಡುತ್ತೇವೆ.

**ರಾಧಾ** : ಅದಕ್ಕಾಗಿ ಇಡೀ ಪರಿಸರವೇ ಚೆನ್ನಾಗಿರಬೇಕು, ಎಂದಂತಾಯಿತು.

**ಸ್ವಾತಿ** : ಹವೆಯ ಪ್ರದೂಷಣೆಯಲ್ಲಿ ಗಿಡಮರಗಳ ಪಾತ್ರವೇನು ?

**ಗುರುಗಳು** : ಗಿಡಮರಗಳ ಎಲೆಗಳು ತೇವವಾಗಿರುತ್ತವೆ. ವಾಹನಗಳ ಓಡಾಟದಿಂದ ಮೇಲೆದ್ದ ಧೂಳು ಈ ತಪ್ಪಲಿಗೆ ಅಂಟಿಕೊಳ್ಳುತ್ತದೆ.

**ಕವಿತಾ** : ಹೌದು ಗುರುಗಳೇ.

**ಗುರುಗಳು** : ಹವೆ ಪ್ರದೂಷಣೆಯಿಂದ ಹೊರಬಂದ ವಿಷಪೂರಿತ ಅನಿಲವನ್ನು ಗಿಡ-ಮರಗಳು ಹೀರಿಕೊಂಡು ಶುದ್ಧವಾದ ಆಕ್ಸಿಜನ್ ವಾಯುವನ್ನು ಹೊರಬಿಡುತ್ತವೆ.

**ಸಮೀರ** : ಅಬ್ಬಾ! ಎಷ್ಟು ಉಪಕಾರಿಯಾಗಿವೆ ಗಿಡಮರಗಳು.

**ಗುರುಗಳು** : ಅದಕ್ಕಾಗಿ ನಾವು ಗಿಡಮರಗಳನ್ನು ಸಂರಕ್ಷಿಸಬೇಕು.

**ಹಿರೇಮಣಿ** : ಹೌದು ಗುರುಗಳೆ, ಗಿಡಮರಗಳು ಪರಿಸರವನ್ನು ಇಷ್ಟೊಂದು ಸಮತೋಲವಾಗಿ ಇಡುತ್ತವೆ. ಅದು ಮೆಚ್ಚುವಂತಹದು.

**ಗುರುಗಳು** : ಅದಕ್ಕಾಗಿ ಪ್ರತಿವರ್ಷ ಸಸಿಗಳನ್ನು ನೆಡಬೇಕು. ಅವುಗಳನ್ನು ರಕ್ಷಿಸಬೇಕು.

**ಕವಿತಾ** : ನಾವು ಇದನ್ನು ತಪ್ಪದೇ ಪಾಲಿಸಬೇಕು.

**ರಮಾ** : ಗುರುಗಳೆ, ಸಮೀರ ಕಿವಿಗಳನ್ನು ಮುಚ್ಚಿಕೊಂಡಿದ್ದಾನೆ. ನೀವು ಹೇಳುವುದನ್ನು ಕೇಳಿಸಿಕೊಳ್ಳುತ್ತಿಲ್ಲ.

**ಗುರುಗಳು** : ಏಕೆ ಸಮೀರ ಏನಾಗಿದೆ ?

**ಸಮೀರ** : ಗುರುಗಳೆ, ಈ ವಾಹನಗಳ ಹಾರ್ನದಿಂದ ನನ್ನ ಕಿವಿಗಳೇ ಕಿವುಡಾಗುತ್ತಿವೆಎನಿಸುತ್ತಿದೆ.

**ಗುರುಗಳು** : ಇದು ಒಂದು ಪ್ರಕಾರದ ಶಬ್ದ ಮಾಲಿನ್ಯ.

**ಜೋಸೆಫ್** : ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಧ್ವನಿವರ್ಧಕಗಳನ್ನು ಬಳಸುತ್ತಾರಲ್ಲ ಗುರುಗಳೇ, ಇದರಿಂದ ಶಬ್ದಮಾಲಿನ್ಯ ಹೆಚ್ಚಾಗುತ್ತದೆ ಅಲ್ಲವೆ?

**ಗುರುಗಳು** : ಹೌದು.

**ರವಿ** : ಅದರಲ್ಲೂ 'ಡಾಲ್ಬಿ' ಹಚ್ಚಿರುತ್ತಾರೆ. ಅದರ ಸಪ್ಪಳದ ಪರಿಣಾಮ ಕಿವಿಯ ಮೇಲಷ್ಟೇ ಅಲ್ಲ , ಹೃದಯದ ಮೇಲೂ ಆಗುತ್ತದೆ.

**ಮೋಹನ** : ಎದೆ ಬಡಿತ ಹೆಚ್ಚಾಗುತ್ತದೆ.

**ಗುರುಗಳು** : ಹೌದು. ಶಬ್ದ ಮಾಲಿನ್ಯದಿಂದ ನಮ್ಮ ಶರೀರದ ಮೇಲೆ ವಿಪರೀತ ಪರಿಣಾಮಗಳಾಗುತ್ತವೆ. ಇದನ್ನು ತಡೆಗಟ್ಟಬೇಕು.

**ಜೋಸೆಫ್** : ಆಗಲಿ, ಗುರುಗಳೆ.

**ಗುರುಗಳು** : ಮಕ್ಕಳೇ, ಇಂದಿಗೆ ಇಷ್ಟು ಸಾಕು. ಉಳಿದ ವಿಷಯಗಳನ್ನು ಇನ್ನೊಮ್ಮೆ ತಿಳಿದುಕೊಳ್ಳೋಣ. ಈಗಾಗಲೆ ವೇಳೆಯಾಗಿದೆ. ನಾವೆಲ್ಲ ಮನೆಗೆ ಹಿಂದಿರುಗೋಣ.

– ಎನ್. ಜಿ. ಹೆಗಡೆ.

## ಶಬ್ದಗಳ ಅರ್ಥ

ಉಬ್ಬಸರೋಗ – ದಮ್ಮುರೋಗ ; ಕೊರೆದ ಬಾವಿ – ಕೊಳವೆ ಬಾವಿ ; ಡಾಲ್ಬಿ – ಒಂದು ಧ್ವನಿವರ್ಧಕ ಸಾಧನ ; ಹಿರೇಮಣಿ – ಮುಖಂಡ

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಉಸಿರಾಟಕ್ಕೆ ಎಂತಹ ಹವೆಬೇಕು ?

ಉತ್ತರ ..........................................................................................

ಆ) 'ಪ್ರದೂಷಣೆ' ಎಂದರೇನು ?

ಉತ್ತರ ..........................................................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

ಅ) ..........................................................................................

ಉತ್ತರ ..........................................................................................

ಆ) ..........................................................................................

ಉತ್ತರ ..........................................................................................

**ಪ್ರಶ್ನೆ 3) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ವಾಹನಗಳು ಬಿಡುವ ಕಪ್ಪುಹೊಗೆಯು ಯಾವ ಪರಿಣಾಮ ಉಂಟು ಮಾಡುತ್ತದೆ ?

ಉತ್ತರ ..........................................................................................

ಆ) ಹವೆ ದೂಷಿತವಾಗಲು ಕಾರಣವೇನು ?

ಉತ್ತರ ..........................................................................................

ಇ) ಮಲೀನವಾದ ನೀರು ಸೇವನೆಯಿಂದ ಯಾವ ರೋಗಗಳು ಬರುತ್ತವೆ ?

ಉತ್ತರ ..........................................................................................

**ಪ್ರಶ್ನೆ 4) ಕೆಳಗಿನ ಶಬ್ದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬರೆಯಿರಿ.**

ಉಸಿರುಗಟ್ಟು = ............................................................

............................................................

ಮಲೀನವಾಗು = ............................................................

............................................................

ಅಂಟಿಕೊಳ್ಳು = ............................................................

............................................................

**ಪ್ರಶ್ನೆ 5) ಕೆಳಗಿನ ಶಬ್ದಗಳಿಗೆ ಎರಡೆರಡು ಅರ್ಥಗಳಿವೆ. ಅವುಗಳನ್ನು ಬರೆಯಿರಿ.**

**ಉದಾ :** ಕಪ್ಪು = ಕಪ್ಪುಬಣ್ಣ , ಚಹ ಕುಡಿಯುವ ಪಾತ್ರೆ.

ಬೆಳೆ = .................... , ...................... .


ಹೊಳೆ = .................... , ...................... .


ಏಳು = .................... , ...................... .

ತೆರೆ = .................... , ...................... .

**ಉಪಕ್ರಮ :** ಚಿತ್ರಗಳ ಸಹಾಯದಿಂದ ಪ್ರದೂಷಣೆಯ ಪ್ರಕಾರಗಳನ್ನು ಬರೆಯಿರಿ.









**ನಿಸರ್ಗ ಬೆಳೆಸಿ ಪರಿಸರ ಉಳಿಸಿ**

- **ಯೋಚಿಸಿ ಉತ್ತರಿಸಿರಿ.**

ಅ) ''ದೀಪದ ಕೆಳಗೆ .................. . '' ಈ ಗಾದೆಮಾತನ್ನು ಕೆಳಗಿನ ಯಾವ ಪರ್ಯಾಯ ಬಳಸಿದರೆ ಪೂರ್ಣಗೊಳಿಸಬಹುದು ?

1) ಮಲಗಿಕೋ 2) ಬೆಳಕು 3) ಕತ್ತಲೆ 4) ಎಣ್ಣೆ

# 8. ಕ್ರಿಸ್‌ಮಸ್

ಬಹಳ ಹಿಂದಕ್ಕೆ ಜುದಾಯಿ ದೇಶದಲ್ಲಿ ಬೆತ್ಲೆಹೇಮ ಎಂಬ ಒಂದು ಊರು ಇತ್ತು. ಒಂದು ರಾತ್ರಿ ಆ ಊರ ಹೊರಗಿನ ಗುಡ್ಡದ ಓರೆಯಲ್ಲಿ ಕೆಲವರು ತಮ್ಮ ಕುರಿಗಳನ್ನು ಕಾಯುತ್ತಿದ್ದರು. ಒಮ್ಮೆಲೆ ಮುಗಿಲಿನಲ್ಲಿ ಝುಗ್ಗನೆ ಬೆಳಕು ಬಿದ್ದಿತು. ಅವರು ಬಹಳ ಹೆದರಿದರು. ಆ ಬೆಳಕಿನಲ್ಲಿ ಒಬ್ಬ ದೇವದೂತನು ಕಾಣಿಸಿಕೊಂಡನು. ''ಹೆದರಬೇಡಿರಿ. ನಾನು ಒಳ್ಳೆಯ ಸಮಾಚಾರ ತಂದಿರುವೆನು. ಇಂದು ನಮ್ಮನ್ನು ಉದ್ಧಾರ ಮಾಡುವ ಬಾಲಕನೊಬ್ಬ ಹುಟ್ಟಿದ್ದಾನೆ. ಅವನು ದನದ ಕೊಟ್ಟಿಗೆಯಲ್ಲಿದ್ದಾನೆ'' ಎಂದು ಹೇಳಿ ಆ ದೇವದೂತನು ಕಣ್ಮರೆಯಾದನು.

ಅದೇ ವೇಳೆಗೆ ಅಲ್ಲಿಂದ ಬಹು ದೂರದಲ್ಲಿ ಮೂವರು ಜಾಣರು ಒಂದು ಥಳಥಳ ಹೊಳೆಯುವ ನಕ್ಷತ್ರವನ್ನು ಕಂಡರು. ಅಂಥ ನಕ್ಷತ್ರವನ್ನು ಅವರು ಎಂದೂ ಕಂಡಿರಲಿಲ್ಲ. ಅದು ಚಲಿಸುವಂತೆ ಕಂಡಿತು. ಆ ಮೂವರು ಅದು ಚಲಿಸುವ ದಿಕ್ಕಿನಲ್ಲಿ ಹೊರಟರು. ಬೆತ್ಲೆಹೇಮಿಗೆ ಬಂದರು. ಕುರಿ ಕಾಯುವವರೂ ಅದೇ ಸ್ಥಳಕ್ಕೆ ಬಂದರು. ಅವರೆಲ್ಲರೂ ದನದ ಕೊಟ್ಟಿಗೆಯಲ್ಲಿ ಜೋಸೆಫ್ ಮತ್ತು ಮೇರಿ ದಂಪತಿಗಳ ಮಗುವನ್ನು ಕಂಡರು. ಮಗುವಿನ ಸುತ್ತಲೂ ಬೆಳಕು ಹರಡಿತ್ತು. ಅವನಿಗೆ 'ಏಸು' ಎಂದು ಹೆಸರಿಟ್ಟರು. ಈ ಮಗುವೇ ಮುಂದೆ ಜಗತ್ತಿಗೆ ಹೊಸ ಬೆಳಕು ನೀಡಿದ ಏಸುಕ್ರಿಸ್ತನು.

ಏಸುಕ್ರಿಸ್ತನ ಹುಟ್ಟುಹಬ್ಬವೇ ಕ್ರಿಸ್‌ಮಸ್. ಇದು ಬಹಳ ದೊಡ್ಡ ಹಬ್ಬ. ಹರುಷದ ಹಬ್ಬ. ಕ್ರೈಸ್ತ ಬಂಧುಗಳು ಈ ಹಬ್ಬವನ್ನು ಪ್ರತಿ ವರುಷ ಡಿಸೆಂಬರ ಇಪ್ಪತ್ತನಾಲ್ಕರಿಂದ ಜನವರಿ ಒಂದನೆಯ ತಾರೀಖಿನವರೆಗೆ ಒಂದು ವಾರ ಆಚರಿಸುವರು.

ಹಬ್ಬವು ಬರುವ ಮುಂಚೆಯೆ ಕ್ರೈಸ್ತರುತಮ್ಮ ಮನೆಗಳನ್ನು ಸ್ವಚ್ಛಗೊಳಿಸುವರು. ಬಣ್ಣ ಬಣ್ಣದ ಬಲೂನಗಳಿಂದ ಸಿಂಗರಿಸುವರು. ನಕ್ಷತ್ರದ ಆಕಾರದ ಬಣ್ಣ ಬಣ್ಣದ ಆಕಾಶಬುಟ್ಟಿಗಳನ್ನು ಮನೆಯ ಮುಂದೆ ತೂಗು ಹಾಕುವರು. ಅವುಗಳಲ್ಲಿ ದೀಪಗಳನ್ನು ಇಡುವರು. ಕೆಲವರು ತಮ್ಮ ಮನೆಗಳಲ್ಲಿ ಏಸುವಿನ ಜನ್ಮದ ದೃಶ್ಯಗಳನ್ನು ತಯಾರಿಸುವರು. ಅದರ ಮುಂದೆ ಮೇಣದಬತ್ತಿಗಳನ್ನು ಹಚ್ಚಿ ಇಡುವರು. ಕೆಲವರು ಕ್ರಿಸ್‌ಮಸ್ ಗಿಡವನ್ನು ತಯಾರಿಸಿ ಬಣ್ಣ ಬಣ್ಣದ ದೀಪಗಳಿಂದ ಅಲಂಕರಿಸುವರು.



ಡಿಸೆಂಬರ ಇಪ್ಪತ್ತುನಾಲ್ಕು ಕ್ರೈಸ್ತರಿಗೆಮಹತ್ವದ ದಿನ. ಹೊಸ ಉಡುಗೆ ತೊಟ್ಟು ಅವರು ಚರ್ಚಿಗೆ ಹೋಗುವರು. ಮೊಣಕಾಲೂರಿ ಪ್ರಾರ್ಥನೆಯನ್ನು ಸಲ್ಲಿಸುವರು. ನಡುರಾತ್ರಿಯ ವೇಳೆಗೆ ಏಸುಕ್ರಿಸ್ತನು ಜನಿಸಿದ್ದನು. ಆ ವೇಳೆಗೆ ಕ್ರಿಸ್‌ಮಸ್ ಗೀತೆಗಳನ್ನು ಹಾಡುವರು. ಚರ್ಚಿನ ಗಂಟೆಗಳು ಮಧುರವಾದ ಧ್ವನಿಯನ್ನು ಮಾಡುವವು.



ಅಂದು ರಾತ್ರಿ ಮಕ್ಕಳು ಉದ್ದನೆಯ ಟೋಪಿ, ಕೆಂಪು ನಿಲುವಂಗಿ ತೊಟ್ಟ ಬಿಳಿಯ ಗಡ್ಡ ಮೀಸೆಯ ತಾತ ಸಾಂತಾಕ್ಲೋಜನನ್ನು ಎದುರುಗೊಳ್ಳಲು ಕಾತುರರಾಗಿರುತ್ತಾರೆ. ವರ್ಷಕ್ಕೊಮ್ಮೆ ಕ್ರಿಸ್‌ಮಸ್ ಹಬ್ಬದಂದು ಹೆಗಲ ಮೇಲೆ ಉಡುಗೊರೆ ತುಂಬಿದ ಬುಟ್ಟಿಯನ್ನು ಹೊತ್ತು ಮನೆ ಮನೆಗೂ ಭೇಟಿ ನೀಡಿ ಚಿಕ್ಕ ಮಕ್ಕಳಿಗೆ ಉಡುಗೊರೆ ನೀಡುತ್ತಾನೆಂಬ ನಂಬಿಕೆ ಇದೆ.

ಡಿಸೆಂಬರ ಇಪ್ಪತ್ತೈದರಂದು ಕ್ರೈಸ್ತರ ಸಡಗರ ಹೇಳತೀರದು. ಮುಂಜಾನೆ ಎಲ್ಲರೂ ಬೇಗನೆ ಏಳುವರು. ರಂಗುರಂಗಿನ, ಬೆಲೆ ಬಾಳುವ ಉಡುಗೆ ತೊಟ್ಟುಕೊಂಡು ಚರ್ಚಿಗೆ ಹೋಗುವರು. ಮೊಳಕಾಲೂರಿ ಪ್ರಾರ್ಥನೆಯನ್ನು ಸಲ್ಲಿಸುವರು. ಅವರ ಗುರುಗಳು ಕ್ರಿಸ್‌ಮಸ್ ಸಂದೇಶವನ್ನು ನೀಡುವರು. ಎಲ್ಲರೂ ತಮ್ಮ ತಮ್ಮ ಬಂಧು ಮಿತ್ರರ ಕೈಕುಲುಕಿ ಶುಭಾಶಯಗಳನ್ನು ಕೋರುವರು. ಬೇರೆ ಊರಿನಲ್ಲಿರುವ ಬಂಧು ಮಿತ್ರರಿಗೆ ಶುಭಾಶಯಗಳನ್ನು ಅಂಚೆಯ ಮೂಲಕ ಕಳಿಸುವರು.

ಡಿಸೆಂಬರ ಮೂವತ್ತೊಂದು ಹಬ್ಬದ ಕೊನೆಯ ದಿನ. ಅಂದು ರಾತ್ರಿ ಕ್ರೈಸ್ತ ಬಂಧುಗಳು ಚರ್ಚುಗಳಲ್ಲಿ ಸೇರುವರು. ಪ್ರಾರ್ಥನೆಯನ್ನು ಸಲ್ಲಿಸುವರು. ಗುರುಗಳು ಏಸುವಿನ ಉಪದೇಶಗಳನ್ನು ಜನರಿಗೆ ತಿಳಿಸಿಕೊಡುವರು. ಹನ್ನೆರಡು ಗಂಟೆಗೆ ಚರ್ಚಿನ ಗಂಟೆಗಳು ಧ್ವನಿ ಮಾಡುವವು. ಜನರು ಹಳೆಯ ವರುಷವನ್ನು ಬೀಳ್ಕೊಡುವರು. ಹೊಸ ವರುಷವನ್ನು ಸ್ವಾಗತಿಸುವರು. ''ಹೊಸ ವರುಷವು ಸುಖ ತರಲಿ'' ಎಂದು ಆಪ್ತರಿಗೆ, ಮಿತ್ರರಿಗೆ ಶುಭ ಕೋರುವರು. ಕೈ ಕೈ ಕುಲುಕುವರು.

ಕ್ರಿಸ್‌ಮಸ್ ಹಬ್ಬದಲ್ಲಿ ಕ್ರೈಸ್ತ ಬಂಧುಗಳು ತರತರದ ಪಕ್ವಾನ್ನಗಳನ್ನು ಮಾಡುವರು. ಕ್ರಿಸ್‌ಮಸ್ ಕೇಕ್ ಮಾಡಿ ಅಂದು ಅದನ್ನು ಕತ್ತರಿಸಿ ಎಲ್ಲರಿಗೂ ಹಂಚಿ ಸಂತೋಷ ಪಡುವರು. ಆಪ್ತರಿಗೆ, ಮಿತ್ರರಿಗೆ ಔತಣದೂಟವನ್ನು ಏರ್ಪಡಿಸುವರು. ಎಲ್ಲರೂ ಹರುಷದಿಂದ ಕಾಲ ಕಳೆಯುವರು. ಬಡವರಿಗೆ ಅನ್ನ, ಬಟ್ಟೆ, ಹಣ ದಾನ ಮಾಡುವರು.

ಕ್ರಿಸ್ತನು ಹೇಳಿದ ಶಾಂತಿ, ದಯೆ, ಪ್ರೀತಿ, ಸಹನೆಗಳ ಸಂದೇಶ ಬೀರುವ ಹಾಗೂ ಅವುಗಳನ್ನು ಸ್ಮರಿಸುವ ಹಬ್ಬವೇ ಕ್ರಿಸ್‌ಮಸ್. ನೆಂಟರಿಷ್ಟರು

ಒಂದೆಡೆ ಸೇರುವುದರಿಂದ ಮೈತ್ರಿ ಹೆಚ್ಚುವುದಲ್ಲದೆ ರಾಷ್ಟ್ರೀಯ ಭಾವನೆ ಬೆಳೆಯುವುದು. ಸಮಾಜದಲ್ಲಿ ಐಕ್ಯ ವಿಚಾರವಿನಿಮಯಕ್ಕೆ ಅವಕಾಶ ದೊರೆಯುವುದು. ಭಾವನೆ ಕುದುರುವುದು.

## ಶಬ್ದಗಳ ಅರ್ಥ

ಕೊಟ್ಟಿಗೆ – ದನಗಳ ವಾಸಸ್ಥಾನ (ದನಗಳನ್ನು ಕಟ್ಟುವ ಸ್ಥಳ) ; ಸಮಾಚಾರ – ಸುದ್ದಿ ; ಆಚರಣೆ – ರೂಢಿ.

- **ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.**

ಝುಗ್ಗನೆ ................... ; ಕಣ್ಮರೆ ..................... ; ಹರುಷ .................... ;
ಶುಭಾಶಯ .................

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಕುರಿ ಕಾಯುವವರು ಏಕೆ ಹೆದರಿದರು ?

ಉತ್ತರ ..........................................................................................

..........................................................................................

ಆ) ಕ್ರಿಸ್‌ಮಸ್ ಎಂದರೇನು ?

ಉತ್ತರ ..........................................................................................

..........................................................................................

ಇ) ''ಕ್ರಿಸ್‌ಮಸ್'' ಹಬ್ಬಕ್ಕೆ ಕ್ರೈಸ್ತರು ಮನೆಗಳನ್ನು ಹೇಗೆ ಶೃಂಗಾರಮಾಡುವರು ?

ಉತ್ತರ ..........................................................................................

..........................................................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತು ಬರೆಯಿರಿ.**

ಅ) ..........................................................................................

ಉತ್ತರ ..........................................................................................

ಆ) ..........................................................................................

ಉತ್ತರ ..........................................................................................

**ಪ್ರಶ್ನೆ 3) ಬಿಟ್ಟ ಸ್ಥಳ ತುಂಬಿರಿ.**

ಅ) ಬೆಳಕಿನಲ್ಲಿ ಒಬ್ಬ .................. ಕಾಣಿಸಿಕೊಂಡನು.

ಆ) ಜಾಣರು .................... ಕೊಟ್ಟಿಗೆಯಲ್ಲಿ ಮಗುವನ್ನು ಕಂಡರು.

ಇ) ಹೊಸ ವರುಷವು ................. ತರಲಿ.

ಈ) .................. ರಂದು ಕ್ರೈಸ್ತರ ಸಡಗರ ಹೇಳತೀರದು.

**ಪ್ರಶ್ನೆ 4) ಕೆಳಗಿನ ಧರ್ಮಗಳ ಪವಿತ್ರ ಗ್ರಂಥಗಳ ಹೆಸರನ್ನು ಚೌಕಟ್ಟಿನಲ್ಲಿ ತುಂಬಿರಿ.**

ಅ) ಕ್ರೈಸ್ತ ಧರ್ಮ

ಆ) ಸಿಖ್ ಧರ್ಮ

ಇ) ಇಸ್ಲಾಂ ಧರ್ಮ

**ಉಪಕ್ರಮ :** ಶಿಕ್ಷಕರು / ಪಾಲಕರ ಸಹಾಯದಿಂದ ಆಕಾಶಬುಟ್ಟಿಯನ್ನು ತಯಾರಿಸಿರಿ.

## ಹಬ್ಬ ಬಂತು ಸಂತಸ ತಂತು

- **ಯೋಚಿಸಿ ಉತ್ತರಿಸಿರಿ.**

ಅ) ಭರಮನು ಆದಾಯಕ್ಕಿಂತ ಹೆಚ್ಚಿಗೆ ಖರ್ಚು ಮಾಡಿ ಸಾಲಕ್ಕೆ ಗುರಿಯಾದನು. ಅವನ ಈ ಪ್ರವೃತ್ತಿ ಕೆಳಗಿನ ಯಾವ ಗಾದೆಮಾತನ್ನು ಹೋಲುತ್ತದೆ?

1) ಬಡವನ ಸಿಟ್ಟು ದವಡೆಗೆ ಮೂಲ  2) ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲದು

3) ಹಾಸಿಗೆ ಇದ್ದಷ್ಟು ಕಾಲು ಚಾಚು  4) ಸಾಲವೇ ಶೂಲ






# 9. ಪೋಸ್ಟಮನ್ ಬರೆದ ಪತ್ರ

ಮುದ್ದು ಮಕ್ಕಳೇ !

ಹೇಗಿದ್ದೀರಿ ? ಚೆನ್ನಾಗಿ ತಾನೆ. ನಾನು 'ಪೋಸ್ಟಮನ್'. ಒಂದು ಕಾಲದಲ್ಲಿ ಊರಿಗೆ ಬೇಕಾದ ವ್ಯಕ್ತಿ. ಇತ್ತೀಚಿಗೆ ಅಂಚೆ ಕಛೇರಿಯಲ್ಲಿ ಬರುವ ಪತ್ರಗಳ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿರುವುದರಿಂದ ನಿಮ್ಮ ಮನೆಗೆ ನಾನು ಮೇಲಿಂದ ಮೇಲೆ ಬರುವುದು ಅಪರೂಪವಾಗಿದೆ. ಒಂದು ಕಾಲದಲ್ಲಿ ನಿಮ್ಮ ಬೀದಿಯಲ್ಲಿ ನನ್ನ ಸೈಕಲ್ ಗಂಟೆಯ ದನಿ ಕೇಳಿದರೆ ಸಾಕು, ನೀವು ಬೀದಿಗಿಳಿದು ''ಅಣ್ಣಾ, ನಮಗೆ ಪತ್ರ ಬಂದಿದೆಯಾ?'' ಎಂದು ಕೇಳುತ್ತ ನನ್ನನ್ನು ಮುತ್ತುತ್ತಿದ್ದಿರಿ. ಓಣಿಯಲ್ಲಿ ನಾನು ಬರುವುದೇ ತಡ ಚಿಕ್ಕವರಿಂದ ವಯೋವೃದ್ಧರವರೆಗೂ ''ನಮ್ಮದೇನಾದರೂ ಇದೆಯಾ? ಅಣ್ಣಾ, ಮನಿಯಾರ್ಡರ ತಂದಿರುವೆಯಾ? '' ಎಂದು ನನ್ನನ್ನು ಕಾತುರದಿಂದ ವಿಚಾರಿಸುತ್ತಿದ್ದರು. ಆದರೆ ಇಂದು ಈ ದೃಶ್ಯ ಕಾಣೆಯಾಗಿದೆ. ಇಂದು ನಾನು ನಾಲ್ಕು ಪತ್ರ ಕೈಯಲ್ಲಿ ಹಿಡಿದು ಬೀದಿಯಲ್ಲಿ ನಾಲ್ಕು ಸಲ ಸುತ್ತಾಡಿದರೂ ನನ್ನನ್ನು ಮಾತನಾಡಿಸುವವರಿಲ್ಲ – 'ಟಪಾಲು ಬಂತೇ?' ಅನ್ನುವವರಿಲ್ಲ. ಹೀಗಾಗಿ ನನ್ನ ಕೈಭಾರವೇನೋ ಕಡಿಮೆಯಾದಂತಾಯಿತು. ಆದರೆ ನನ್ನ ಮನಸ್ಸಿನ ಭಾರ ತುಂಬ ಹೆಚ್ಚಾಯಿತು. ಮನದಲ್ಲೇನೋ ತಳಮಳ. ಅಸಮಾಧಾನ ನಿತ್ಯ ಗೋಚರಿಸುತ್ತಿದೆ. ಈ ಭಾರವಾದ ಮನಸ್ಸನ್ನು ಹಗುರುಗೊಳಿಸಲೆಂದೇ ನಾನು ನಿಮಗೆ ಈ ಪತ್ರ ಬರೆಯುತ್ತಿರುವೆ. ನೀವು ಮನಗೊಟ್ಟು ಓದುತ್ತೀರಿ ತಾನೆ ! ನೋವನ್ನು ಹಂಚಿಕೊಂಡರೆ ಮಾತ್ರ ನೋವಿನಲ್ಲೂ ನಲಿವು ಕಾಣಬಹುದಲ್ಲವೇ ?



ಪ್ರೀಯರೇ,

ಅಂದು ನನ್ನ ಚೀಲ ಟಪಾಲು, ಅಂತರದೇಶಿ ಪತ್ರ, ಪಾಕೀಟು, ಮನಿಯಾರ್ಡರ, ಪಾರ್ಸಲಗಳಿಂದ ತುಂಬಿ ತುಳುಕುತ್ತಿತ್ತು. ಬಂದ ಈ ಸಂದೇಶ, ಸರಕುಗಳನ್ನು ಜನರ ಮನೆ ಮನೆಗೂ ಒಯ್ದು ಮುಟ್ಟಿಸುವವರೆಗೆ ನನಗೆ ಸಮಾಧಾನವಿರುತ್ತಿರಲಿಲ್ಲ. ಮಳೆ, ಗಾಳಿ, ಬಿಸಿಲೆನ್ನದೇ ಈ ಕಾರ್ಯವನ್ನು ನಾನು ನಿಷ್ಠೆಯಿಂದ ಮಾಡುತ್ತಿದ್ದೆ. ಅದು ಸರಕಾರದ ಕೆಲಸವೆಂದು ನನಗೆ ಅನಿಸುತ್ತಿರಲಿಲ್ಲ. ಶೀಘ್ರವಾಗಿ ಬಂದ 'ತಂತಿ ಸಂದೇಶ'ಗಳನ್ನು ಅತಿ ಶೀಘ್ರವಾಗಿ ಜನರಿಗೆ ತಲುಪಿಸುತ್ತಿದ್ದೆ. ಸಂಬಳ ಕಡಿಮೆ ಇದ್ದರೂ ಈ ಕಾರ್ಯದಲ್ಲಿ ನಾನು ವಿಳಂಬ ಮಾಡುತ್ತಿರಲಿಲ್ಲ. ಜನರಿಗೆ ಬಂದ ಸಂದೇಶಗಳನ್ನು ಅವರಿಗೆ ತಲುಪಿಸುವುದರಲ್ಲಿಯೇ ನನಗೆ ಖುಷಿಯಾಗುತ್ತಿತ್ತು. ಕೆಲವೊಮ್ಮೆ ನನಗೆ ಕೆಲವರ ಪತ್ರ ಓದಿ ತೋರಿಸುವ ಪ್ರಸಂಗವೂ ಬರುತ್ತಿತ್ತು. ಅವುಗಳನ್ನು ಓದಿ ತೋರಿಸುತ್ತ ಜನರ ಸಿಹಿ–ಕಹಿ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದೆ. ಕೆಲವರು ನನ್ನಿಂದಲೇ ಪತ್ರ ಬರೆಯಿಸಿಕೊಂಡ ಉದಾಹರಣೆಗಳೂ ಇವೆ. ಮನಿಯಾರ್ಡರಗಳನ್ನು ಹೊತ್ತಿಗೆ ಸರಿಯಾಗಿ ತಲುಪಿಸಿ ಜನರಿಂದ ಬಾಯಿ ಸಿಹಿ ಮಾಡಿಕೊಂಡ ನೆನಪೂ ಇನ್ನು ಮಾಸಿಲ್ಲ. ನನ್ನನ್ನು ಜನರು ತಮ್ಮ ಕುಟುಂಬದ ಸದಸ್ಯನಂತೆ ಪ್ರೀತಿ, ಗೌರವಗಳಿಂದ ಕಾಣುತ್ತಿದ್ದರು. ಜನರ ಮಧ್ಯೆ ನಾನು ಎಲ್ಲರ ಅಣ್ಣ , ಅಂಚೆಯ ಅಣ್ಣನಾಗಿ ಬೆಳೆದೆ, ಬಾಳಿದೆ. ಇಂದಿಗೂ ಆ ನೆನಪುಗಳು ಮರುಕಳಿಸಿದರೆ ಕಣ್ಣಂಚುಗಳು ತೇವಗೊಳ್ಳುವವು. ಕಾಲ ಬದಲಾಗುತ್ತ ನಡೆದರೂ ಜನರಲ್ಲಿಯ ಪ್ರೀತಿ, ವಿಶ್ವಾಸಗಳನ್ನು ನಾನು ಕಳೆದುಕೊಂಡಿಲ್ಲ. ನಾನು ಮಾಡುತ್ತಿರುವ ಸಂದೇಶವಹನದ ಕೆಲಸಗಳನ್ನು ಇಂದು ಅನೇಕ ಯಂತ್ರಗಳು ಮಾಡುತ್ತಿವೆ. ಅವು ಆಧುನಿಕ–ತಂತ್ರಜ್ಞಾನದ ಸಾಧನಗಳು. ಖಾಸಗಿ 'ಕೋರಿಯರ್' ಸೇವೆ ಪ್ರಾರಂಭವಾಗುತ್ತಲೇ ನನ್ನ ಕೆಲಸಕ್ಕೆ ಅಪಾಯದ ಗಂಟೆ ಬಾರಿಸಿತು. ಜನರು ಹೊಸದಾಗಿ ಬರುವ ಯೋಜನೆಗಳಿಗೆ ಆಕರ್ಷಿತರಾಗತೊಡಗಿದರು. ಶೀಘ್ರ ಬದುಕಿಗೆ ಪರಿವರ್ತನೆ ಅನಿವಾರ್ಯವೆನಿಸಿತು. ಕ್ರಮೇಣ ಟೆಲಿಫೋನ, ಮೊಬೈಲ್ ಯುಗ ಆರಂಭಗೊಂಡಿತು.

ಮೊದಲು ಟೆಲಿಫೋನ ಸೇವೆ ನಮ್ಮ ಅಂಚೆಕಛೇರಿಯಿಂದಲೇ ಆರಂಭಗೊಂಡಿತು. ಗ್ರಾಮೀಣ ವಲಯದಲ್ಲಿ ಊರಿಗೆ ಒಂದೇ 'ಪೋಸ್ಟ ಆಫೀಸ್' ಇರುವುದರಿಂದ ಟೆಲಿಫೋನ ಮಾಡಬೇಕೆಂದರೆ ಜನರು ನಮ್ಮಲ್ಲಿಗೆ ಬರಬೇಕಿತ್ತು. ಹಾಗೆಯೇ ಟೆಲಿಫೋನಿನಲ್ಲಿ ಮಾತನಾಡುವುದಕ್ಕಾಗಿ ನಿಗದಿ ಪಡಿಸಿದ ಬೆಲೆಯನ್ನು ಆಫೀಸಿನಲ್ಲಿ ಕೊಡಬೇಕಾಗುತ್ತಿತ್ತು. ಹಬ್ಬ–ಹರಿದಿನಗಳು ಬಂದರೆ ಅಂಚೆಕಚೇರಿಯಲ್ಲಿ ಜನದಟ್ಟಣೆ ಹೆಚ್ಚುತ್ತಿತ್ತು. ಅಂದು ಆಫೀಸಿಗೆ ಸಂಭ್ರಮ, ನಮಗೆ ಸಂತಸ ತರುತ್ತಿತ್ತು. ಕ್ರಮೇಣ ಖಾಸಗಿ ಎಸ್.ಟಿ.ಡಿ. ಕೇಂದ್ರಗಳಿಗೆ ಸರಕಾರ ಮಾನ್ಯತೆ ನೀಡಿತು. ಇದರಿಂದ ಮಾತನಾಡುವುದಕ್ಕಾಗಿ ಪೋಸ್ಟ್ ಆಫೀಸಿಗೆ ಬರುವ ಜನರ ಸಂಖ್ಯೆ ಕಡಿಮೆಯಾಗತೊಡಗಿತು. ಮತ್ತೆ ಇಲ್ಲಿ ಬಿಕೋ ಎನ್ನುವ ವಾತಾವರಣ. ಆದರೂ ಇಂದು ಅಂಚೆಟಿಕೇಟು, ರೆವೆನ್ಯೂ ಸ್ಟಾಂಪ, ಅಲ್ಪ ಉಳಿತಾಯ ಯೋಜನೆ, ಶೀಘ್ರ ಸಂದೇಶವಹನ (ಸ್ಪೀಡಪೋಸ್ಟ) ಕೆಲಸಗಳಿಗಾಗಿ ಜನರು ನಮ್ಮ ಆಫೀಸಿಗೆ ಬರುತ್ತಾರೆ.

ಬಂಧುಗಳೇ,

ಕಾಲಕಳೆದಂತೆ ಎಸ್.ಟಿ.ಡಿ. ಬೆನ್ನಟ್ಟಿ ಬಂದಂತೆ ಬಂತು ''ಮೊಬೈಲ್ ಯುಗ''. ಇದರಿಂದ ಅಂಚೆ ಕಚೇರಿಯಲ್ಲಿ ಮೌಖಿಕ–ಸಂದೇಶವಹನದ ಕಾರ್ಯ ಪೂರ್ಣವಾಗಿ ನಿಂತಿತು. ನನ್ನ ಚೀಲ ತುಂಬ ಹಗುರವಾಯಿತು. ಅಂದು ಈ ಚೀಲದಲ್ಲಿ ಸಂಕ್ರಮಣದ ಕುಸಿರೆಳ್ಳು, ಮಹಾನವಮಿಯ ಬನ್ನಿ ಬಂಗಾರ, ಸಹೋದರ ವಾತ್ಸಲ್ಯದ ರಾಖಿಗಳು ತುಂಬುತ್ತಿದ್ದವು. ಅವುಗಳನ್ನು ಜನರ ಬಾಗಿಲವರೆಗೂ ಒಯ್ದು ತಲುಪಿಸುತ್ತಿದ್ದೆ. ಅವರ ಸಂತೋಷದಲ್ಲಿ ನಾನೂ ಪಾಲ್ಗೊಳ್ಳುತ್ತಿದ್ದೆ. ಇಂದು ಮೊಬೈಲದಲ್ಲಿಯ ಮೆಸೆಜ್, ವಾಟ್ಸಅಫ್, ಫೇಸಬುಕಗಳ ಮುಖಾಂತರ ಸಂದೇಶವಹನದ ಕಾರ್ಯ ತುಂಬ ಶೀಘ್ರಗತಿಯಲ್ಲಿ ಸಾಗಿದೆ. ಅದು ಸಂತೋಷದ ಸಂಗತಿಯೇ ಸರಿ. ಯಾಕೆಂದರೆ ನಾವು ಕಾಲಕ್ಕೆ ತಕ್ಕಂತೆ ಬಾಳಬೇಕು. ಪರಿವರ್ತನೆಯಲ್ಲಿ ಪಾಲುಗಾರರಾಗಬೇಕು. ನೀವು ನಮ್ಮ ದೇಶದ ಭಾವೀ ನಾಗರಿಕರು. ಪ್ರಗತಿಯ ಕನಸನ್ನು ಕಾಣುತ್ತಿರುವವರು. ಸಂವೇದನಶೀಲ, ಸ್ವಾವಲಂಬಿ ಪ್ರಜೆಗಳು. ಇದರಿಂದ ವಿಕಾಸಗೊಳ್ಳುತ್ತಿರುವ ತಂತ್ರಜ್ಞಾನವನ್ನು ಅರಿತು, ಅದರಲ್ಲಿ ಬೆರೆತು ನಡೆಯುವುದೇ ಒಳ್ಳೆಯ ಲಕ್ಷಣವಾಗಿದೆ. ಮೊಬೈಲನಂತೆ 'ಕಂಪ್ಯೂಟರ್' ಸಹ ಸಂದೇಶವಹನದ ಸಾಧನವಾಗಿ ಬೆಳಕಿಗೆ ಬಂತು. ಇದರಲ್ಲಿ 'ಇ–ಮೆಲ್' (E-mail)

ಮುಖಾಂತರ ಕ್ಷಣಾರ್ಧದಲ್ಲಿ ಸಂದೇಶಗಳನ್ನು ರವಾನಿಸಬಹುದಾಗಿದೆ. ಅವುಗಳನ್ನು ಬಹುದಿನಗಳ ಕಾಲ ಕಾಯ್ದಿರಿಸಬಹುದಾಗಿದೆ. ದಿನೇ ದಿನೇ ವಿಕಾಸಗೊಳ್ಳುತ್ತಿರುವ ಈ ತಂತ್ರಜ್ಞಾನ ಸಾಧನಗಳಿಂದ ಸಂದೇಶವಹನ ಕಾರ್ಯ ಪ್ರಗತಿಯತ್ತ ಸಾಗಿತು.

ಬಾಲಕರೇ,

ಈ ಯಂತ್ರಗಳು ಕೇವಲ ಯಂತ್ರಗಳೇ. ಆವುಗಳಲ್ಲಿ ತಂತ್ರಗಳೇ ಅಡಕವಾಗಿರುತ್ತವೆ. ಆದರೆ ಭಾವನೆಗಳಲ್ಲ; ಮಾನವೀಯ ಸ್ಪಂದನಗಳಲ್ಲ. ಮನದಾಳದ ಭಾವನೆಗಳನ್ನು ಪತ್ರದಲ್ಲಿ ಕೈಯಿಂದ ಬರೆಯುವಾಗ ಉಂಟಾಗುವ ಭಾವನಿಕ ಸ್ಪಂದನ ಈ ಯಂತ್ರಗಳಲ್ಲಿ ಟೈಪ್ ಮಾಡುವುದರಲ್ಲಿ ಕಾಣುವುದಿಲ್ಲ. ಪೋಸ್ಟ ಪಾಕೀಟಿನಲ್ಲಿ ಬಂದ ಕುಸಿರೆಳ್ಳಿನ ರುಚಿ, ಬನ್ನಿಯ ಬಾಂಧವ್ಯಗಳನ್ನು ಈ ಯಂತ್ರಗಳಲ್ಲಿ ಕಾಣಬಹುದೇ ? ಯಂತ್ರಗಳಲ್ಲಿ ಸಂದೇಶಗಳೇನೋ ಶೀಘ್ರವಾಗಿ ತಲುಪುತ್ತವೆ. ಆದರೆ ಮಾನವೀಯ ಸಂಬಂಧಗಳನ್ನು ಗಟ್ಟಿಗೊಳಿಸುವ ಶಬ್ದಗಳು ಅಲ್ಲಿ ಕಾಣುವುದು ವಿರಳ. ಪತ್ರಗಳಲ್ಲಿ ಬರೆಯುವ ''ಹಿರಿಯರಿಗೆ ಶಿರಸಾಷ್ಟಾಂಗ ನಮಸ್ಕಾರಗಳು, ಕಿರಿಯರಿಗೆ ಆಶೀರ್ವಾದಗಳು, ಗೆಳೆಯರಿಗಾಗಿ, ಸಹೋದರ-ಸಹೋದರಿಯರಿಗಾಗಿ ಒಲುಮೆಯ, ಪ್ರೀತಿಯ, ಆತ್ಮೀಯರೆಂಬ ನುಡಿಗಳು, ಹಿರಿಯರ ಹಾರೈಕೆಗಳು, ಮನೆಯಲ್ಲಿಯ ಶಿಶುಗಳಿಗಾಗಿ ಸಿಹಿಮುತ್ತುಗಳು, ಗಂಡ-ಹೆಂಡಿರ ಒಲವಿನ ಮಾತುಗಳು'', ಮುಂತಾದ ಬಾಂಧವ್ಯದ ನುಡಿಗಳು ನಮ್ಮ ಭಾವನೆಗಳಿಗೆ ಸ್ಪಂದಿಸುತ್ತಿದ್ದವು. ಅಂದಿನ ಆ ಬರವಣಿಗೆಯಲ್ಲಿ ಪ್ರೀತಿಯ ಸೆಲೆ ಇತ್ತು. ನಯವಿನಯದ ನೆಲೆ ಇತ್ತು. ಬರವಣಿಗೆಯ ಕಲೆ ಇತ್ತು. ಆದರೆ ಇಂದು ಮೊಬೈಲು ರಿಂಗ್‌ಆದೊಡನೆ ಹಿರಿಯರಿರಲಿ, ಕಿರಿಯರಿರಲಿ 'ಹಲೋ' ಎಂಬ ಧ್ವನಿ ಮಾತ್ರ ಕೇಳಿ ಬರುತ್ತಿದೆ. ಪತ್ರದಲ್ಲಿ ಬರುವ ಪ್ರೀತಿ, ವಾತ್ಸಲ್ಯ, ಬಾಂಧವ್ಯದ ನುಡಿಗಳು ಈಗಲೂ ನಿಮ್ಮಲ್ಲಿ ಬಿಂಬಿಸಬೇಕು ಎಂಬುದು ನನ್ನ ಹೆಬ್ಬಯಕೆ.

ಪೋಸ್ಟದಿಂದ ಹಂಚಲಾಗುವ ಲಗ್ನ ಪತ್ರಿಕೆ, ಆಮಂತ್ರಣ ಪತ್ರಿಕೆಗಳನ್ನು ಅಂದು ಜನರು (ನೆನಪಿನ ಸಂಕೇತವಾಗಿ) ಅಪರೂಪದ ವಸ್ತುಗಳೆಂದು ತಮ್ಮ ಬಳಿ ಕಾಯ್ದಿರಿಸಿಕೊಳ್ಳುತ್ತಿದ್ದರು. ಕಡು ಬಡವರಿಗಾಗಿ ಸರಕಾರದಿಂದ ಮನಿಯಾರ್ಡರ ಮುಖಾಂತರ ದೊರೆಯುವ ವಿಶೇಷ ಮಾಸಿಕ ಸಂಬಳವನ್ನು ನಾನು ಅವರನ್ನು ಹುಡುಕಿ ತಲುಪಿಸುತ್ತಿದ್ದೆ. ಆ ಜನ ಹಣವನ್ನು ಸ್ವೀಕರಿಸುವಾಗ ಅವರಲ್ಲಿ ಹರಿಯುವ ಸಂತಸದ ಹೊನಲು ನನ್ನಲ್ಲಿಯೂ ಸಂಚರಿಸುತ್ತಿತ್ತು. ಅವರು, ''ಅಣ್ಣಾ ! ನಮಗೆ ಸರಿಯಾದ ಸಮಯಕ್ಕೆ ಹಣ ತಲುಪಿಸುತ್ತಿರುವಿ'' ಎಂದು ನನ್ನನ್ನು ಕೊಂಡಾಡುತ್ತಿದ್ದರು. ನಾನು ಅವರಿಗೆ ಕೊಡುವುದು ಸರಕಾರದ ಹಣವಾದರೂ ನಾನೇ ಕೊಡುತ್ತೇನೆಂಬ ಅನಿಸಿಕೆ ಅವರಿಗೆ. ಕೊಡುವವರಿಗಿಂತ ಮುಟ್ಟಿಸುವವರೇ ಮಹಾತ್ಮರು ಎಂಬುದು ಅವರ ಭಾವನೆ. ಹಾಗೆಯೇ ನಮ್ಮಲ್ಲಿ ಪರಸ್ಪರ ಅನುಬಂಧ ಅಂಕುರಿಸುತ್ತಲೇ ಬಂತು. ಆದರೆ ಇಂದು ಮಾಸಾಸನ ನೇರವಾಗಿ ಅವರ ಬ್ಯಾಂಕ ಖಾತೆಗೆ ಜಮಾ ಆಗುವುದು. ಹಣವೇನೋ ಶೀಘ್ರವಾಗಿ ತಲುಪುತ್ತದೆ ಆದರೆ ಅವರ ಕೃತಜ್ಞತಾ ಭಾವವನ್ನು ಹಂಚಿಕೊಳ್ಳುವವರಿಲ್ಲ.

ಭಾರತದ ಭಾವೀ ಪ್ರಜೆಗಳೇ.

ಪ್ರಗತಿಯತ್ತ ಸಾಗುತ್ತಿರುವ ಈ ಪರಿವರ್ತನಶೀಲ ಯುಗದಲ್ಲಿ ನೀವು ಹೊಸದನ್ನು ಜೀವನದಲ್ಲಿ ಅಳವಡಿಸುತ್ತ ಹೋಗಿರಿ. ಆದರೆ ಮಾನವೀಯ ಪರಸ್ಪರ ಸಂಬಂಧ ಅನುಬಂಧಗಳನ್ನು ಮಾತ್ರ ಮರೆಯದಿರಿ.

ನಿಮಗೆ ಶುಭವಾಗಲಿ !!

ಇಂತಿ
ನಿಮ್ಮ ಅಂಚೆಯ ಅಣ್ಣ.

## ಶಬ್ದಗಳ ಅರ್ಥ

ದುರ್ಲಭ ; ವಿರಳ ; ತಳಮಳ-ಚಿಂತೆ, ಗಾಬರಿ ; ಪರಿವರ್ತನೆ-ಬದಲಾವಣೆ ; ಶೀಘ್ರ-ಬೇಗನೆ

• ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಪ್ರಗತಿ - ............... ; ಸಂಚರಿಸು - ................ ; ಅಂಕುರಿಸು - ................ ;

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಅಂಚೆ ಅಣ್ಣನ ಇನ್ನೊಂದು ಹೆಸರು ಏನು ?

ಉತ್ತರ ..........................................................................................

ಆ) ಅಂಚೆ ಅಣ್ಣ ಹಂಚುತ್ತಿದ್ದ ಪತ್ರಗಳಾವವು ?

ಉತ್ತರ ..........................................................................................

ಇ) ಅಂಚೆ ಅಣ್ಣನನ್ನು ಜನ ಹೇಗೆ ಪ್ರೀತಿಸುತ್ತಿದ್ದರು ?

ಉತ್ತರ ..........................................................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತು ಬರೆಯಿರಿ.**

ಅ) ..........................................................................................

ಉತ್ತರ ..........................................................................................

ಆ) ..........................................................................................

ಉತ್ತರ ..........................................................................................

**ಪ್ರಶ್ನೆ 3) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಅಂಚೆ ಅಣ್ಣನಿಗೆ ಯಾವಾಗ ಸಮಾಧಾನ ಆಗುತ್ತಿತ್ತು ?

ಉತ್ತರ ..........................................................................................

..........................................................................................

ಆ) ಅಂಚೆಅಣ್ಣನ ಕೆಲಸಕ್ಕೆ ಅಪಾಯದ ಗಂಟೆ ಯಾವಾಗ ಬಾರಿಸಿತು ?

ಉತ್ತರ ..........................................................................................

..........................................................................................

ಇ) ಅಂಚೆಅಣ್ಣನ ಸಂದೇಶವೇನು ?

ಉತ್ತರ ..........................................................................................

..........................................................................................

**ಪ್ರಶ್ನೆ 4) ಕೆಳಗಿನ ಸಾಧನಗಳ ಬಳಕೆಯಲ್ಲಿ ರೀತಿಯನ್ನು ಅನುಕ್ರಮವಾಗಿ ಬರೆಯಿರಿ.**

ಅ) ಮೊಬೈಲ್ ಬಳಕೆ ....................................

ಆ) ಪೋಸ್ಟ ಆಫೀಸಿನಲ್ಲಿ ಟೆಲಿಫೋನ ಸೇವೆ ...........................

ಇ) ಪತ್ರದ ಮುಖಾಂತರ ಸಂದೇಶವಹನ ...........................

ಈ) ಸಂಗಣಕ ಸೌಲಭ್ಯ ....................................

ಉ) ಎಸ್.ಟಿ.ಡಿ. ಸೇವೆ ....................................



**ಪ್ರಶ್ನೆ 5) ಪತ್ರದಲ್ಲಿ ಕೆಳಗಿನವರಿಗೆ ಬರೆಯುವ ಬಾಂಧವ್ಯದ ನುಡಿಗಳನ್ನು ಸೂಚಿಸಿರಿ.**

ಗೆಳೆಯ ......................................

ತಂದೆಯವರಿಗೆ ......................................

ಗುರುಗಳಿಗೆ ......................................

ಮಾವನವರಿಗೆ ......................................

ತಾಯಿಗೆ ......................................

**ಪ್ರಶ್ನೆ 6) ಕೆಳಗಿನ ವಾಕ್ಯಗಳಲ್ಲಿ ಗೆರೆಹೊಡೆದ ಶಬ್ದಗಳ ಸಮಾನಾರ್ಥಕ ಶಬ್ದಗಳನ್ನು ಕಂಸಿನೊಳಗಿನ ಪರ್ಯಾಯಗಳಿಂದ ಆಯ್ದು ವಾಕ್ಯಗಳನ್ನು ಪುನಃ ಬರೆಯಿರಿ.**

(ಅಂಕುರಿಸು, ಮರುಕಳಿಸು, ಅಪರೂಪ, ಕೊಂಡಾಡು)

ಅ) ಸರಿಯಾದ ಸಮಯಕ್ಕೆ ಹಣ ತಲುಪಿಸುತ್ತಿ ಎಂದು ಎಲ್ಲರೂ ನನ್ನನ್ನು ಹೊಗಳುತ್ತಿದ್ದರು.

ಆ) ಆ ನೆನಪುಗಳು ಮರಳಿ ಬಂದರೆ ಕಣ್ಣಂಚು ತೇವಗೊಳ್ಳುವವು.

ಇ) ನಮ್ಮಲ್ಲಿ ಪರಸ್ಪರ ಅನುಬಂಧ ಹುಟ್ಟುತ್ತಲೇ ಬಂತು.

ಈ) ನಾನು ಮೇಲಿಂದ ಮೇಲೆ ಬರುವುದು ಕಡಿಮೆಯಾಗಿದೆ.

**ಉಪಕ್ರಮ 1 :** ವಿವಿಧ ಅಂಚೆ ಟಿಕೇಟಗಳನ್ನು ಸಂಗ್ರಹಿಸಿರಿ.

______ ______ ______ ______

______ ______ ______ ______

## ಪತ್ರ ಸಕಲರ ಮಿತ್ರ

- **ಯೋಚಿಸಿ ಉತ್ತರಿಸಿರಿ.**

1) ವರ್ಣಮಾಲೆಯ ಕ್ರಮದಲ್ಲಿ ಕೆಳಗಿನ ಶಬ್ದಗಳನ್ನು ಕ್ರಮವಾಗಿ ಬರೆದಾಗ ಮೂರನೆಯ ಸ್ಥಾನದಲ್ಲಿ ಬರುವ ಶಬ್ದ ಯಾವುದು?

(ಮಕ್ಕಳು , ಫಲ , ಬುಗುರಿ , ಭರಣಿ , ಪತಂಗ)

2) ಕೆಳಗಿನ ಪದಗಳಿಗೆ 'ಅಪ' ಎಂಬ ಉಪಸರ್ಗವನ್ನು ಸೇರಿಸಿ.


ಮಾನ .......................... ರೂಪ ..........................

ಸ್ವರ .......................... ರಾತ್ರಿ ..........................



8D89X1

# 10. ಯೋಗಾಸನ - ಪ್ರಾಣಾಯಾಮ



ಇಂದಿನ ಯಾಂತ್ರಿಕ ಜೀವನ, ಅತಂತ್ರ ಜೀವನ ಶೈಲಿಗೆ ಸುಸೂತ್ರತೆ ತರುವ ನಿಟ್ಟಿನಲ್ಲಿ ಯೋಗ - ಆಸನ ಪ್ರಾಣಾಯಾಮಗಳು ಮುಖ್ಯ ಪಾತ್ರ ವಹಿಸುತ್ತವೆ, ಆಡುವ ವಯಸ್ಸಿನ ಮಕ್ಕಳಿಂದ ವೃದ್ಧರವರೆಗೆ ಒತ್ತಡದ ಬಲೆಯಲ್ಲಿ ಓಡಾಡುವ ಬಿಡುವಿಲ್ಲದ ಮನಸ್ಸು , ಶರೀರ ಒದ್ದಾಡುತ್ತಿದೆ. ಆದ್ದರಿಂದ ದೇಹ ಬಲಶಾಲಿಯಾಗಿರಬೇಕು. ಮನಸ್ಸನ್ನು ಹಗುರವಾಗಿಡಲು, ಆತ್ಮಬಲವನ್ನು ಗಟ್ಟಿಮುಟ್ಟು ಮಾಡಲು ಯೋಗಾಸನ, ಪ್ರಾಣಾಯಾಮದ ಸಾಧನೆಯನ್ನು ಪ್ರತಿನಿತ್ಯ ಮಾಡುವುದು ಅವಶ್ಯವಾಗಿದೆ.

'ಯೋಗ' ಎಂದರೆ ಕೂಡಿಸು, ಐಕ್ಯತೆ, ಕೇಂದ್ರಿಕರಿಸು ಎಂಬ ಅರ್ಥವನ್ನು ಹೊಂದಿದೆ. ವಾಸ್ತವಿಕ ದೃಷ್ಟಿಯಿಂದ ನೋಡಿದಾಗ ದೇಹ, ಮನಸ್ಸು ಹಾಗೂ ಭಾವನೆಗಳ ನಡುವೆ ಸಮತೋಲನ ಸಾಧಿಸುವುದಕ್ಕೆ ಯೋಗಾಸನ ಮತ್ತು ಪ್ರಾಣಾಯಾಮಗಳು ಸಹಾಯ ಮಾಡುತ್ತವೆ. ಯೋಗಾಸನಗಳು ಆರೋಗ್ಯ ಮತ್ತು ದೇಹಕ್ಕೆ ಹಗುರತೆಯನ್ನು ನೀಡುತ್ತವೆ.

ಇವುಗಳನ್ನು ದಿನಾಲೂ ರೂಢಿಸಲು ಸ್ವಚ್ಛವಾದ ಸ್ಥಳ, ಒಂದು ಜಮಖಾನೆ ಮತ್ತು ಮನಸ್ಸಿನ ದೃಢತೆ ಬಹಳ ಮುಖ್ಯ. ದೇಹದ ಪ್ರತಿಯೊಂದು ಅಂಗಕ್ಕೂ , ಮಾಂಸಖಂಡಕ್ಕೂ, ನರಕ್ಕೂ, ಗ್ರಂಥಿಗೂ ವ್ಯಾಯಾಮ ಸಿಗುವಂತೆ ಯೋಗಾಸನಗಳನ್ನು ರಚಿಸಲಾಗಿದೆ. ಪತಂಜಲಿಯ ಯೋಗಸೂತ್ರದಲ್ಲಿ ಯೋಗಾಸನವನ್ನು 'ಸ್ಥಿರಂ ಸುಖಂ ಆಸನಂ' ಅಂದರೆ ಹಾಯಾಗಿ ಪ್ರಶಾಂತವಾಗಿರುವಂಥ ಸ್ಥಿತಿ. ಯೋಗಾಸನಗಳಿಂದ ದೇಹದ ಕೆಲವು ನಿರ್ದಿಷ್ಟ ಭಂಗಿಗಳು ಚೈತನ್ಯ ಪ್ರವಾಹಗಳನ್ನು ಹಾಗೂ ಮಾನಸಿಕ ಕೇಂದ್ರಗಳನ್ನು ತೆರವುಗೊಳಿಸುತ್ತವೆ. ಇವುಗಳು ದೇಹ, ಉಸಿರು, ಮನಸ್ಸು ಮತ್ತು ಉನ್ನತ ಸ್ಥಿತಿಗಳ ಶೋಧನೆಗೆ ಸಾಧನವಾಗುತ್ತವೆ. ಆದ್ದರಿಂದಲೇ ಇಂದು ಯೋಗವು ವಿಶ್ವದಲ್ಲಿಯೇ ಮಹತ್ವಪಡೆದಿದೆ. ಪ್ರತಿವರ್ಷ ಜೂನ್ 21ನೇ ತಾರೀಖಿನ ದಿನ ''ಅಂತರರಾಷ್ಟ್ರೀಯ ಯೋಗದಿನ'' ಎಂದು ಜಗತ್ತಿನಾದ್ಯಂತ್ಯ ಆಚರಣೆ ಮಾಡಲಾಗುತ್ತಿದೆ.

ನಮ್ಮ ಮುಷ್ಟಿಯಷ್ಟೇ ಗಾತ್ರವಿರುವ ಹೃದಯವು ನಿರಂತರವಾಗಿ ರಕ್ತವನ್ನು ಒತ್ತಿ ತಳ್ಳುತ್ತಿರುತ್ತದೆ.ಆದುದರಿಂದ ಶಕ್ತಿಯುತವಾಗಿರುವುದು ಅವಶ್ಯಕ. ಶ್ವಾಸಕೋಶಗಳು ಎಡಬಿಡದೆ ಕೆಲಸಮಾಡಿ ದೇಹಕ್ಕೆ ಅಗತ್ಯವಾದ ಆಮ್ಲಜನಕವನ್ನು ಒದಗಿಸಿ ಇಂಗಾಲಾಮ್ಲ ವಾಯುವನ್ನು ಹೊರಹಾಕುತ್ತವೆ. ಯೋಗಾಸನಗಳಿಂದ ದೇಹದ ಎಲ್ಲ ಅಂಗಗಳಿಗೆ ಯೋಗ್ಯ ವ್ಯಾಯಾಮ ದೊರೆಯುತ್ತದೆ. ತಾಡಾಸನ, ವೃಕ್ಷಾಸನ, ಪದ್ಮಾಸನಗಳು ಸಸ್ಯಗಳನ್ನು ಪ್ರತಿನಿಧಿಸಿದರೆ, ಮತ್ಸ್ಯಾಸನ, ಕೂರ್ಮಾಸನ, ಮಂಡೂಕಾಸನಗಳು ನೀರಿನಲ್ಲಿರುವ ಪ್ರಾಣಿಗಳನ್ನು ಬಿಂಬಿಸುತ್ತವೆ. ಭುಜಂಗಾಸನವು ಹರಿದಾಡುವ ಪ್ರಾಣಿಯನ್ನು ಹೋಲುತ್ತದೆ. ವೀರಭದ್ರಾಸನ, ಹನುಮಾನಾಸನಗಳು ಪೌರಾಣಿಕ ವ್ಯಕ್ತಿಗಳನ್ನೂ, ಭಾರದ್ವಜಾಸನ, ಕಪಿಲಾಸನ, ವಸಿಷ್ಠಾಸನ, ವಿಶ್ವಾಮಿತ್ರಾಸನಗಳು ಋಷಿಗಳ ಹೆಸರುಗಳನ್ನು ಹೊಂದಿವೆ. ಈ ಆಸನಗಳನ್ನು ಮಾಡುವಾಗ ನಮ್ಮ ದೇಹವು ಅನೇಕ ಜಂತುಗಳ ರೂಪವನ್ನು ತಾಳಿ, ಎಲ್ಲದರಲ್ಲೂ ಏಕತೆಯನ್ನು ಕಾಣುತ್ತದೆ. ಇದರಿಂದ ನಮ್ಮ ದೇಹದ ತುಂಬಾ ಹರಡಿರುವ ನರಮಂಡಲವು ಚೈತನ್ಯ ಪಡೆಯುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ದಿನಾಲು ಯೋಗಾಸನ ಮಾಡುವುದು ಅವಶ್ಯಕವಾಗಿದೆ. ಇದರಿಂದ ಶರೀರ ಸದೃಢವಾಗುತ್ತದೆ. ಬುದ್ಧಿ ಚುರುಕಾಗುತ್ತದೆ. ಮುಖ ಕಾಂತಿಯುಕ್ತವಾಗಿ ಸದಾ ಲವಲವಿಕೆಯಿಂದ ಕೂಡಿರುತ್ತದೆ.

ಪ್ರಾಣಾಯಾಮ ಎಂದರೆ ಪ್ರಾಣ (ಉಸಿರಿನ)ದ ಆಯಾಮವನ್ನು ವಿಸ್ತರಿಸುವುದು ಅಥವಾ ಹಿಗ್ಗಿಸುವುದು. ಸರಳ ಪ್ರಾಣಾಯಾಮದ ಪ್ರಕಾರಗಳಿಂದ ಇದರ ಅಭ್ಯಾಸವನ್ನು ಮಾಡಬೇಕು. ಮೂಗಿನ ಮುಖಾಂತರ ಉಸಿರು ತೆಗೆದುಕೊಳ್ಳುವ ಮತ್ತು ಬಿಡುವ ಕ್ರಮವನ್ನೂ ಮಾಡಬೇಕು. ಪದ್ಮಾಸನ ಅಥವಾ ಸುಖಾಸನದಲ್ಲಿ ಕುಳಿತು, ಬೆನ್ನು ಮತ್ತು ಕತ್ತನ್ನು ನೇರವಾಗಿಟ್ಟು ಬಲ ಮೂಗಿನ ಹೊಳ್ಳೆಯನ್ನು ಹೆಬ್ಬೆರಳಿನಿಂದ ಮೃದುವಾಗಿ ಮುಚ್ಚಿ ಎಡ ಮೂಗಿನ ಹೊಳ್ಳೆಯ ಮುಖಾಂತರ ಉಸಿರನ್ನು ದೀರ್ಘವಾಗಿ ತೆಗೆದುಕೊಳ್ಳುವದು ಮತ್ತು ಬಿಡುವುದು. ಇದೇ ಕ್ರಮವನ್ನೇ ವಿರುದ್ಧ ದೆಸೆಯಲ್ಲಿ ಮಾಡುವುದು. ಬಲ ಮೂಗಿನ ಹೊಳ್ಳೆಯನ್ನು ಮುಚ್ಚಿ ಎಡ ಮೂಗಿನ ಹೊಳ್ಳೆಯಿಂದ ಉಸಿರನ್ನು ನಿಧಾನವಾಗಿ ತೆಗೆದುಕೊಂಡು, ಎಡ ಮೂಗಿನ ಹೊಳ್ಳೆಯನ್ನು ಮುಚ್ಚಿ ಬಲ ಮೂಗಿನ ಹೊಳ್ಳೆಯಿಂದ ನಿಧಾನವಾಗಿ ಉಸಿರನ್ನು ಬಿಡುವುದು. ಇದೇ ಪದ್ಧತಿಯನ್ನು ವಿರುದ್ಧ ಕ್ರಮದಲ್ಲಿ ಮಾಡುವುದು. ಮುಂದಿನ ಪ್ರಾಣಾಯಾಮದ ಪ್ರಕಾರಗಳನ್ನು ನುರಿತ ಯೋಗಸಾಧಕರಿಂದ ರೂಢಿಸಿಕೊಳ್ಳಬೇಕು.

### ಯೋಗಾಸನ ಮತ್ತು ಪ್ರಾಣಾಯಾಮ ಮಾಡುವವರು ಪಾಲಿಸಬೇಕಾದ ಅಂಶಗಳು :

1) ಮುಂಜಾನೆ ಮತ್ತು ಮುಂಬರಿದ ಸಂಜೆ ಅತ್ಯುತ್ತಮ ಆಗಿದೆ. ಬೇರೆ ಸಮಯದಲ್ಲೂ ಯೋಗಾಭ್ಯಾಸ ಮಾಡಬಹುದು ; ಆದರೆ ಅದರಿಂದ ದೊರೆಯುವ ಸತ್ಫಲಗಳ ಪ್ರಮಾಣ ವ್ಯತ್ಯಾಸ ಆಗುವುದು.

2) ಬೆಳಗಿನ ವಿಧಿಗಳನ್ನೆಲ್ಲ ಮುಗಿಸಿ, ಎರಡು-ಮೂರು ಗ್ಲಾಸು ನೀರು ಸೇವಿಸಿ ಅರ್ಧ

ಗಂಟೆಯ ನಂತರ ಆಸನಗಳನ್ನು ಮಾಡಬೇಕು.

3) ಯೋಗಾಭ್ಯಾಸ ಮಾಡುವ ಕೋಣೆಯ ಕಿಟಕಿ, ಬಾಗಿಲುಗಳನ್ನು ತೆರೆದಿಡಬೇಕು. ಪ್ರಶಾಂತವಾದ ಉದ್ಯಾನದಲ್ಲಾಗಲಿ, ನದಿ ತೀರದ ಪ್ರದೇಶದಲ್ಲಾಗಲಿ ಇದರ ರೂಢಿ ಮಾಡಬಹುದು. ಸಮ ನೆಲದ ಮೇಲೆ ಒಂದು ಜಮಖಾನೆಯನ್ನು ಹಾಸಿ ಯೋಗಾಸನ ಮಾಡಬೇಕು.

4) ಪ್ರತಿಯೊಂದು ಯೋಗಾಸನ ಮಾಡುವಾಗ ಮೂಗಿನಿಂದಲೇ ಉಸಿರಾಟ ಮಾಡಬೇಕು. ಯೋಗ ನಿಯಮದ ಪ್ರಕಾರ ದೀರ್ಘವಾಗಿ ಉಸಿರು ತೆಗೆದುಕೊಳ್ಳಬೇಕು ಮತ್ತು ದೀರ್ಘವಾಗಿ ಉಸಿರು ಬಿಡಬೇಕು.

5) ಪ್ರತಿಯೊಂದು ಸ್ಥಿತಿಯಲ್ಲಿ ದೇಹದ ಯಾವುದೇ ಅಂಗ ಬಿಗಿಯಾಗಿ ಹಿಡಿದಿರಬಾರದು. ಸಹಜವಾಗಿ, ಪ್ರಸನ್ನಮುಖದಿಂದ ಉಸಿರಾಟದ ಕಡೆಗೆ ಲಕ್ಷ್ಯ ನೀಡಬೇಕು.

6) ಪ್ರತಿಯೊಂದು ಯೋಗಾಸನದ ಭಂಗಿಯ ಅಂತಿಮ ಹಂತದಲ್ಲಿ ಸ್ಥಿರವಾಗಿದ್ದು ಸಹಜವಾಗಿ ಉಸಿರಾಟ ಮಾಡಬೇಕು.

7) ಯಾವುದೇ ಹಂತದಲ್ಲಿ ಉಸಿರು ಬಿಗಿಹಿಡಿದು ಯೋಗಾಸನ ಅಥವಾ ಪ್ರಾಣಾಯಮದ ಅಭ್ಯಾಸ ಮಾಡಬಾರದು.

8) ಪ್ರತಿಯೊಂದು ಆಸನದ ನಂತರ 20 ರಿಂದ 30 ಸೆಕೆಂಡುಗಳ ಕಾಲ ಆರಾಮವೆನಿಸುವ ಭಂಗಿಯಲ್ಲಿ ಇರಬೇಕು.

ಯೋಗಾಸನ ಮತ್ತು ಪ್ರಾಣಾಯಮವನ್ನು ಅಭ್ಯಾಸ ಮಾಡಿ ಅರ್ಧ ತಾಸಿನ ನಂತರ ಒಂದು ಹಿಡಿ ಮೊಳೆತ ಕಾಳುಗಳನ್ನು ತಿನ್ನಬೇಕು ಮತ್ತು ಒಂದು ಬಟ್ಟಲು ಹಾಲು ಕುಡಿಯಬೇಕು. ಬೆಳೆಕಾಳು, ತರಕಾರಿ, ಹಣ್ಣುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸೇವಿಸಬೇಕು. ಊಟದ ಮಧ್ಯೆ ಅವಶ್ಯ ಬಿದ್ದರೆ ಮಾತ್ರ ಸ್ವಲ್ಪ ನೀರು ಕುಡಿಯಬೇಕು. ಊಟದ ನಂತರ ಸ್ವಲ್ಪವೇ ನೀರನ್ನು ಸೇವಿಸಿದರೆ ಪಚನಕ್ರಿಯೆಗೆ ಸಹಾಯವಾಗುವದು. ಅರ್ಧ ತಾಸಿನ ನಂತರ ಯಥೇಚ್ಛ ನೀರನ್ನು ಕುಡಿಯಬಹುದು. ಬೆಳಗಿನ ಉಪಹಾರ ಅಥವಾ ಊಟ ಮಹಾರಾಜನಂತಿರಬೇಕು. ಮಧ್ಯಾಹ್ನದ ಊಟ ಬಡವನಂತೆ ಇರಬೇಕು. ರಾತ್ರಿಯ ಊಟ ಭಿಕ್ಷುಕನಂತೆ ಇರಬೇಕು. ಮಲಗುವ ಮುಂಚೆ ಕನಿಷ್ಠ ಎರಡು ತಾಸು ಮೊದಲು ಲಘು ಆಹಾರ ಸೇವನೆ ಅತ್ಯುತ್ತಮವಾಗಿರುತ್ತದೆ. ಯೋಗಾಸನಗಳೊಂದಿಗೆ ಸಮತೋಲಿತ ಆಹಾರ ಸೇವನೆ ಮಾಡಿದರೆ ಕಂಡು ಕೇಳರಿಯದ ಇಂದಿನ ರೋಗಗಳು ನಮ್ಮ ಹತ್ತಿರಕ್ಕೆ ಸುಳಿಯುವುದಿಲ್ಲ.

## ಶಬ್ದಗಳ ಅರ್ಥ

ಆತ್ಮಬಲ – ಮನಸ್ಸಿನ ಬಲ ; ಶೋಧನೆ – ಕಂಡುಹಿಡಿಯುವುದು ; ಎಡೆಬಿಡದೆ – ಸತತವಾಗಿ ;

ಬಿಂಬಿಸು – ಪ್ರತಿರೂಪವನ್ನು ತೋರಿಸು ; ಲವಲವಿಕೆ – ಉತ್ಸಾಹ ; ಯಥೇಚ್ಛ – ಅಧಿಕವಾಗಿ

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಪ್ರಸನ್ನ – ............... ; ಮೊಳೆತ – ................ ; ವ್ಯವಧಾನ – ................

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಇಂದಿನ ಜೀವನ ಶೈಲಿ ಎಂಥದು ?

ಉತ್ತರ ..........................................................................................

ಆ) ಹೃದಯದ ಗಾತ್ರ ಎಷ್ಟಿದೆ ?

ಉತ್ತರ ..........................................................................................

ಇ) ಪ್ರಾಣಾಯಾಮ ಎಂದರೇನು ?

ಉತ್ತರ ..........................................................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

ಅ) ..........................................................................................

ಉತ್ತರ ..........................................................................................

ಆ) ..........................................................................................

ಉತ್ತರ ..........................................................................................

**ಪ್ರಶ್ನೆ 3) ಕೆಳಗಿನ ವಾಕ್ಯಗಳನ್ನು ಅರ್ಥಪೂರ್ಣವಾಗಿ ಬರೆಯಿರಿ.**

1) ಹಗುರತೆಯನ್ನು ಆರೋಗ್ಯ ನೀಡುತ್ತವೆ. ಯೋಗಾಸನಗಳು ದೇಹಕ್ಕೆ ಮತ್ತು

2) ಬೆಳಗಿನ ರಾಜನಂತಿರಬೇಕು ಊಟ.

**ಪ್ರಶ್ನೆ 4) ಬಿಟ್ಟ ಸ್ಥಳಗಳಲ್ಲಿ ಕಂಸದಲ್ಲಿ ನೀಡಿದ ಯೋಗ್ಯ ಪರ್ಯಾಯವನ್ನು ಆಯ್ದು ಬರೆಯಿರಿ.**

(ಮೂಗಿನಿಂದ, ಆತ್ಮಬಲ, ಪ್ರತಿನಿತ್ಯ, ಯೋಗಾಸನ, ಪ್ರಾಣಾಯಾಮ, ಭುಜಂಗಾಸನ )

ಅ) ಯೋಗಾಸನ ಮಾಡುವುದರಿಂದ ...................... ಗಟ್ಟಿಮುಟ್ಟಾಗುತ್ತದೆ.

ಆ) ದೇಹದ ಎಲ್ಲ ಅಂಗಗಳಿಗೂ ವ್ಯಾಯಾಮವು .................. ದಿಂದ ಆಗುವುದು.

ಇ) ಪ್ರಾಣದ ಆಯಾಮವನ್ನು ವಿಸ್ತರಿಸುವುದಕ್ಕೆ ............... ಎನ್ನುವರು.

ಈ) ಯೋಗಾಸನ ಮಾಡುವಾಗ ಉಸಿರನ್ನು .................. ತೆಗೆದುಕೊಳ್ಳಬೇಕು.

**ಪ್ರಶ್ನೆ 5) 'ಬಲಶಾಲಿಯಾಗಿರಬೇಕು' ಈ ಶಬ್ದ ಸಮೂಹದಿಂದ ನಾಲ್ಕು ಹೊಸ ಪದಗಳನ್ನು ತಯಾರಿಸಿರಿ.**

1) .................. 2) ...................... 3) ................... 4) ..................

**ಪ್ರಶ್ನೆ 6) ಕೆಳಗಿನ ಸುಳಿವುಗನುಸರಿಸಿ ಚೌಕೋನಗಳನ್ನು ತುಂಬಿರಿ.**

1) ಮುಷ್ಟಿಯ ಗಾತ್ರವಿರುವ ಅಂಗ

| | | |
|---|---|---|
| | | |

2) ಉಸಿರಾಟ ಮಾಡುವ ಅವಯವ

| | | |
|---|---|---|
| | | |

3) ಸೌಂದರ್ಯವನ್ನು ವೀಕ್ಷಿಸುವ ಅವಯವ

| | | |
|---|---|---|
| | | |

4) ದೇಹದಲ್ಲಿ ನೆತ್ತರು ಹರಿದಾಡುವ ಅವಯವ

| | | |
|---|---|---|
| | | |

**ಪ್ರಶ್ನೆ 7) ಕೆಳಗಿನ ಪದಗಳ ಸಂಧಿ ಬಿಡಿಸಿ ಹೆಸರಿಸಿರಿ.**

ಯೋಗಾಸನ – ...............................

ಸಹಾಯವಾಗು – ............................

ಪ್ರತಿಯೊಂದು – ..............................

**ಉಪಕ್ರಮ :** ಸೇವಿಸುವ ಸಮತೋಲಿತ ಆಹಾರದ ಕೋಷ್ಟಕವನ್ನು ಪೂರ್ಣಗೊಳಿಸಿರಿ.

## ಸಮತೋಲ ಆಹಾರ

| | ಧಾನ್ಯಗಳು | ತರಕಾರಿ | ಬೇಳೆಕಾಳುಗಳು | ಹಣ್ಣುಗಳು |
|---|---|---|---|---|
| i) | | | | |
| ii) | | | | |
| iii) | | | | |
| iv) | | | | |

## ಸದೃಢವಾದ ದೇಹದಲ್ಲಿ ಸದೃಢ ಮನಸ್ಸು

- **ಯೋಚಿಸಿ ಉತ್ತರಿಸಿರಿ.**

1) ರಸ್ತೆಯಲ್ಲಿ ಬಾಳೆಯಹಣ್ಣಿನ ಸಿಪ್ಪೆಬಿದ್ದಿದೆ. ನೀವೇನು ಮಾಡುವಿರಿ ?

1) ಸುಮ್ಮನೆ ಹೋಗುತ್ತೇನೆ 2) ಅದನ್ನು ಎತ್ತಿ ಕಸದ ತೊಟ್ಟಿಯಲ್ಲಿ ಹಾಕುತ್ತೇನೆ

2) ಅದನ್ನು ತುಳಿದು ಹೋಗುತ್ತೇನೆ 3) ಏನೂ ಮಾಡುವುದಿಲ್ಲ

2) ಕೆಳಗಿನ ಗಾದೆಮಾತು ಪೂರ್ಣವಾಗಲು ಅವಶ್ಯಕವಾದ ಶಬ್ದ ಯಾವುದು ?

ದೂರದ ಬೆಟ್ಟ......

1) ಕಣ್ಣಿಗೆ ತಣ್ಣಗೆ 2) ಕಣ್ಣಿಗೆ ಬೆಳ್ಳಗ್ಗೆ 3) ಕಣ್ಣಿಗೆ ನೆಟ್ಟಗೆ 4) ಕಣ್ಣಿಗೆ ನುಣ್ಣಗೆ



# 11. ಕೌಂತೇಯ

**ಲೇಖಕರ ಪರಿಚಯ :** ವಿಷ್ಣು ವಾಮನ ಶಿರವಾಡಕರ ಇವರು ಮಹಾರಾಷ್ಟ್ರದ ಪ್ರಸಿದ್ಧ ಕವಿ, ನಾಟಕಕಾರ ಹಾಗೂ ಕಾದಂಬರಿಕಾರರೆಂದು ಖ್ಯಾತಿ ಪಡೆದಿದ್ದಾರೆ. 'ಕುಸುಮಾಗ್ರಜ' ಕಾವ್ಯನಾಮದಿಂದ ಇವರು ವಿಶಾಖಾ, ಕಿನಾರಾ, ಮರಾಠಾ ಮಾತೀ ಮುಂತಾದ ಅನೇಕ ಪ್ರಸಿದ್ಧ ಕೃತಿಗಳನ್ನು ರಚಿಸಿದ್ದಾರೆ. ಕೌಂತೇಯ, ದುಸರಾ ಪೇಶ್ವಾ, ನಟಸಮ್ರಾಟ ಇವು ಇವರ ಕೆಲವು ಪ್ರಸಿದ್ಧ ನಾಟಕಗಳು. ಜಾಹ್ನವಿ, ವೈಷ್ಣವ ಇವು ಇವರ ಲೋಕಪ್ರಿಯ ಕಾದಂಬರಿಗಳು. ಇದಲ್ಲದೆ ಅವರು ಅನೇಕ ಲಲಿತ ಲೇಖನಗಳನ್ನು ಬರೆದಿದ್ದಾರೆ. ಸಮಗ್ರ ಸಾಹಿತ್ಯ ಸಾಧನೆಗಾಗಿ ಇವರಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ.

ಮಹಾಭಾರತದಲ್ಲಿಯ ಕರ್ಣ ಮತ್ತು ಕುಂತಿಯ ಸಂವಾದವನ್ನು ಆಧರಿಸಿದ ಒಂದು ಭಾವಪೂರ್ಣ ಸನ್ನಿವೇಶವು ಇಲ್ಲಿದೆ. ಈ ಭಾಗವನ್ನು ಅವರ ಮರಾಠಿ 'ಕೌಂತೇಯ' ನಾಟಕದ ಕನ್ನಡ ಅನುವಾದದಿಂದ ಆಯ್ದು ಸಂಪಾದಿಸಲಾಗಿದೆ.

ಅನುವಾದಕರು : ಚಂದ್ರಕಾಂತ ಮಲ್ಯ.

**ಸಂದರ್ಭ :** ಮಹಾಭಾರತದ ಯುದ್ಧ ಆರಂಭವಾಗುವ ಮೊದಲು ಕುಂತಿಯು ಕರ್ಣನಿದ್ದಲ್ಲಿಗೆ ಹೋಗಿ, ಅವನು ತನ್ನ ಮಗನೆಂದು ತಿಳಿಸಿ, ಅವನಿಂದ ಉಳಿದ ಐದು ಪಾಂಡವರಲ್ಲಿ ಯಾರನ್ನೂ ಕೊಲ್ಲುವುದಿಲ್ಲ, ಎಂಬ ವಚನವನ್ನು ಕೇಳುತ್ತಾಳೆ. ಯುದ್ಧ ನಡೆದು ಭೀಷ್ಮ, ದ್ರೋಣಾದಿಗಳು ಹತರಾದ ಮೇಲೆ, ಕರ್ಣನು ಸೇನಾಧಿಪತ್ಯ ವಹಿಸುತ್ತಾನೆ. ಅದರ ಹಿಂದಿನ ರಾತ್ರಿ ಕರ್ಣನು ತಾಯಿಯ ಆಶೀರ್ವಾದ ಪಡೆಯಲು ಬರುತ್ತಾನೆ.

(ಅದೇ ರಾತ್ರಿ ಉತ್ತರಾರ್ಧದ ಪ್ರಾರಂಭ. ಕುಂತಿ ತನ್ನ ಅರಮನೆಯಲ್ಲಿ ಒಂದು ಮಂಚದ ಮೇಲೆ ತಲೆಯೊರಗಿ ಸುಸ್ತಾಗಿ ಕುಳಿತುಕೊಂಡಿದ್ದಾಳೆ. ಮೂಲೆಯಲ್ಲಿದ್ದ ಪೀಠದ ಮೇಲೆ ಒಂದು ದೊಡ್ಡ ದೀಪ ಉರಿಯುತ್ತಲಿದೆ. ಅರ್ಧ ಜಾಗೃತಾವಸ್ಥೆ, ಅರ್ಧ ನಿದ್ರಾವಸ್ಥೆಯಲ್ಲಿದ್ದಾಳೆಕುಂತಿ. ಇಂತಹ ಸಮಯದಲ್ಲಿ ಹಗುರವಾಗಿ ಹೆಜ್ಜೆ ಹಾಕುತ್ತ ಕರ್ಣ ಪ್ರವೇಶಿಸುತ್ತಾನೆ. ಕ್ಷಣಕಾಲ ದೂರ ನಿಂತು ಕುಂತಿಯತ್ತ ನೋಡಿ, ನಂತರ ಮುಂದೆ ಬರುತ್ತಾನೆ.)

**ಕರ್ಣ** : ತಾಯೀ !

**ಕುಂತಿ** : (ಎಚ್ಚರವಾದವಳಂತೆ) ಯಾರದು ?

**ಕರ್ಣ** : ನಾನು, ಕರ್ಣ.

**ಕುಂತಿ** : ಕರ್ಣ ? ಶಕ್ಯವಿಲ್ಲ ! ನನ್ನ ಅಂತಃಕರಣದ ಘೋಷಣೆಯೇ ನನ್ನ ಕಿವಿಯ ಮೇಲೆ ಪ್ರತಿಧ್ವನಿಯಾಗತೊಡಗಿದೆ.


**ಕರ್ಣ** : ತಾಯೀ, ನಾನು ಕರ್ಣ. ನನ್ನ ಗುರುತು ಹತ್ತಲಿಲ್ಲವೇ ?

**ಕುಂತಿ** : (ಎದ್ದು ಮುಂದೆ ಬಂದು) ಕರ್ಣನ ಗುರುತು ನನಗೆ ಸಿಕ್ಕದೆ ಇರುವುದು ಎಂದಿಗಾದರೂ ಸಾಧ್ಯವೇ? ನನ್ನ ಶರೀರವು ಮಣ್ಣಾದನಂತರವೂ, ಕರ್ಣನು ಹತ್ತಿರ ಬಂದರೆ, ಆ ಮಣ್ಣಿನ ಕಣಗಳು ಕೂಡ ಥರಥರ ನಡುಗಿಯಾವು ! ಹೌದು, ಕರ್ಣನೇ ! ಕರ್ಣನ ಮೂರ್ತಿಯೇ ತೋರುತ್ತಿದೆ ನನ್ನ ಕಣ್ಣುಗಳೆದುರು. ಆದರೆ ಇದು ಹೀಗಾಗುವುದು ಶಕ್ಯವಿಲ್ಲ. ನಾನು ಸ್ವಪ್ನದಲ್ಲಿರುವ ಹಾಗೆ ಭಾಸವಾಗುತ್ತಿದೆ ನನಗೆ.

**ಕರ್ಣ** : ಇದು ಸ್ವಪ್ನವಲ್ಲ ತಾಯೀ ! ಒಂದು ದುಷ್ಟ ನಿರ್ದಯ ಸ್ವಪ್ನದಿಂದ ನಾವಿಬ್ಬರೂ ಈಗ ಜಾಗೃತರಾಗಿದ್ದೇವೆ. ಜೀವನದಲ್ಲಿ ಇನ್ನು ಮುಂದೆ ಎಂದಿಗೂ ಶಾಂತ ನಿದ್ರೆ ಬರಲಾರದಷ್ಟರ ತನಕ ಎಚ್ಚರವಾಗಿದ್ದೇವೆ ನಾವು.

**ಕುಂತಿ** : ಇದೆಲ್ಲವೂ ಸತ್ಯವೇ ? ನೀನು ನಿಜವಾಗಿಯೂ ನನ್ನನ್ನು ಭೇಟಿಯಾಗಲು ಬಂದಿರುವೆಯಾ ? ನನ್ನ ಕರ್ಣ ನಿಜವಾಗಿಯೂ ನನ್ನನ್ನು 'ತಾಯೀ' ಎಂದು ಕರೆಯುತ್ತಿರುವನೇ ? – ಇದು ನನ್ನ ಹುಚ್ಚುಮನಸ್ಸಿನ ಆಟವೆಂದೇ ಭಾಸವಾಗುತ್ತಿದೆ ನನಗೆ ! ಇಂತಹ ಅಪರಾತ್ರಿಯ ಸಮಯದಲ್ಲಿ, ನೀನು ನನ್ನ ಬಳಿ – ಪಾಂಡವರ ಶಿಬಿರಕ್ಕೆ ಬಂದೆಯಾ ?

**ಕರ್ಣ** : ತಾಯೀ, ಎರಡು ವಿರೋಧಿ ಶಿಬಿರಗಳ ಮಧ್ಯೆ, ನಮ್ಮ ಜೀವನವು ಇಬ್ಭಾಗವಾಗಿ ಹೋಗುತ್ತಿರುವುದು ದುರ್ದೈವ. ಆದರೆ ಕರ್ಣ ದುರ್ದೈವಕ್ಕೆ ಶರಣು ಹೋಗುವಷ್ಟು ದುರ್ಬಲನಾಗಿದ್ದ ಪಕ್ಷದಲ್ಲಿ, ಇದುವರೆಗೆ ಸಹಸ್ರಬಾರಿ ಆತನಿಗೆ ಆತ್ಮಹತ್ಯೆ ಮಾಡುವ ಪ್ರಸಂಗ ಬರುತ್ತಿತ್ತು ! ಆದುದರಿಂದ, ಆಗುವ ಯಾವುದೇ ಪರಿಣಾಮಗಳತ್ತ ಪರಿವೆ ಮಾಡದೆ, ನಾನು ನಿನ್ನ, ನನ್ನ ತಾಯಿಯ ದರ್ಶನಕ್ಕಾಗಿ ಬಂದಿರುವೆ !



**ಕುಂತಿ** : ಆದರೆ ಏತಕ್ಕಾಗಿ ? ಯಾವ ಕಾರಣದಿಂದ ? – ಸ್ವಂತ ಗೌರವವನ್ನು, ಜೀವದ ರಕ್ಷಣೆಯ ವಿಚಾರವನ್ನು ಬದಿಗಿಟ್ಟು, ನೀನು ವೈರಿಗಳ ಶಿಬಿರಕ್ಕೆ ಬಂದಿರುವ ಉದ್ದೇಶವೇನು ?

**ಕರ್ಣ** : ತಾಯಿಯ ಅಂತಃಕರಣ, ನನ್ನನ್ನು ನಿನ್ನ ಕಡೆಗೆ ಎಳೆದು ತಂದಿತು. ಈಗ ಮಗುವಿನ ಅಂತಃ ಕರಣವನ್ನು ಹಿಡಿದುಕೊಂಡು ನಾನು ನಿನ್ನೆಡೆಗೆ ಬಂದಿರುವೆ ತಾಯೀ !

**ಕುಂತಿ** : ಇದು ನಿಜವೇ ? – ನನ್ನ ಮುದ್ದಿನ ಮಗೂ – ಆದರೆ ಇಲ್ಲ, ಈ ಭಾಗ್ಯವನ್ನು ಸ್ವೀಕರಿಸುವ ಅಧಿಕಾರ ನನಗಿಲ್ಲ! ನಾನು ಚಾಂಡಾಳಿನಿಯಂತೆ, ಜನ್ಮದ ಗಳಿಗೆಯಿಂದ ನಿನ್ನ ವೈರ ಸಾಧಿಸಿದೆ. ಆದರೆ ಇಂದು ನೀನು, ನಿನ್ನ ಆಯುಷ್ಯದ ಸರ್ವಶ್ರೇಷ್ಠ ಯಶಸ್ಸನ್ನು ಸಾಧಿಸುವ ಈ ಸುವರ್ಣ ಸಂಧಿಯಲ್ಲಿ, ನಾನು ನನ್ನ ಅಮಂಗಲ ಮುಖವನ್ನು ಮುಂದೆ ಮಾಡಿ, ನಿನ್ನ ದಾರಿಗಡ್ಡ ಬಂದು ನಿಂತೆ. ಯಾವ ತಾಯಿಯಾದರೂ, ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗುವಿನ ಬಗ್ಗೆ ಈ ರೀತಿ ಹಗೆ ಸಾಧಿಸಿರಲಿಕ್ಕಿಲ್ಲ. ನೀನು ಆಗ ನನಗೆ ಚಾಂಡಾಳಿನೀ, ಪಿಶಾಚಿನೀ ಎಂದೆಯಲ್ಲವೇ, ಅದೇ ಸತ್ಯ. ನಿನ್ನ ಹತ್ತಿರ ಬರುವ ಅಧಿಕಾರ ನನ್ನ ಪಾಲಿಗೆ ಎಂದೋ ಇಲ್ಲವಾಗಿದೆ .

**ಕರ್ಣ** : ಮಗುವಿನ ಬಳಿಗೆ ಹೋಗುವ ಅಧಿಕಾರವನ್ನು ತಾಯಿಗೆ ಯಾರೂ ಕೊಡಬೇಕಾಗಿಲ್ಲ ಮತ್ತು ಅವಳಿಂದ ಅದನ್ನು ಯಾರಿಂದಲೂ ಅಪಹರಿಸಿಕೊಳ್ಳುವುದೂ ಕೂಡ ಸಾಧ್ಯವಾಗಲಿಕ್ಕಿಲ್ಲ ! ತಾಯೀ, ಈ ಹಿಂದೆ ನೀನು ನನ್ನ ಬಳಿ ಬಂದಾಗ ಕ್ರೋಧದ ಆವೇಶದಲ್ಲಿ ಉಚ್ಚರಿಸಿದ ಶಬ್ದಗಳು, ನಿನ್ನ ಮೃದು ಮನಸ್ಸಿನಲ್ಲಿ ನಾಟಿಹೋಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ಆ ಶಬ್ದಗಳಿಂದ ನಿನ್ನ ಅಂತಃಕರಣಕ್ಕೆ ಎಷ್ಟು ವೇದನೆಯಾಗಿರಬಹುದೋ, ಅಷ್ಟೇ ವೇದನೆ ನನ್ನ ಅಂತಃ ಕರಣಕ್ಕೂ ಆಗುತ್ತಿದೆ. ಭುಗಿಲೆಂದು ಎದ್ದ ಆ ಶಬ್ದಗಳ ಜ್ವಾಲೆಯಲ್ಲಿ, ನಾನೇ ಈಗ ಕ್ಷಣ ಕ್ಷಣಕ್ಕೂ ನನ್ನ ಮನಸ್ಸನ್ನು, ನನ್ನ ಹೃದಯವನ್ನು ಸುಟ್ಟುಕೊಳ್ಳುತ್ತಿದ್ದೇನೆ! ತಾಯೀ, ನನ್ನನ್ನು ಕ್ಷಮಿಸು .... ಉದ್ವೇಗದ ಭರದಲ್ಲಿ ನಾನು ಆಡಬಾರದ್ದನ್ನು ಆಡಿಬಿಟ್ಟೆ. ನಿನ್ನ ನೊಂದ ಹೃದಯದ ಮೇಲೆ, ನೀಚತನದಿಂದ ಅಪಶಬ್ದಗಳ ಪ್ರಹಾರವನ್ನು ಮಾಡಿದೆ !

**ಕುಂತಿ** : ಮಗೂ, ಹೀಗೆ ಅಲ್ಲಸಲ್ಲದ್ದನ್ನುಹೇಳಬೇಡವಪ್ಪಾ ! ನನ್ನ ಹೃದಯ ಒಡೆದು ಹೋಗುತ್ತಿರುವಂತೆ ಭಾಸವಾಗುತ್ತಿದೆ ನನಗೆ ! ನಿನ್ನ ಕೋಪಾಗ್ನಿಯನ್ನು ಸಹನೆ ಮಾಡಿಕೊಳ್ಳಲು ಸಿದ್ಧಳಿದ್ದೇನೆ ನಾನು. ಆದರೆ ನಿನ್ನ ಪ್ರೇಮ... ಇಲ್ಲ , ಅದು ನನಗೆ ಸಹನೆಯಾಗುವುದಿಲ್ಲ ! ಕರ್ಣಾ, ನನ್ನ ಮೇಲೆ ಶಾಪಗಳ ಮಳೆಗರೆ ! ನಿನ್ನ ಪ್ರೇಮದ ಅಧಿಕಾರ ನನಗಿಲ್ಲ! ಅಂತಹ ಪುಣ್ಯವನ್ನು ನಾನು ಮಾಡಿಲ್ಲ!

**ಕರ್ಣ** : (ಅವಳ ಪಾದಗಳ ಮೇಲೆ ತನ್ನ ಮಸ್ತಕವನ್ನಿಡುತ್ತಾನೆ) ತಾಯೀ, ಈ ವಿಶ್ವದಲ್ಲಿದ್ದ ನನ್ನೆಲ್ಲ ಪುಣ್ಯ, ನಿನ್ನ ಪಾದಕಮಲಗಳಿಗೆ ಅರ್ಪಿಸಿದ್ದೇನೆ. ನನ್ನನ್ನು ಕ್ಷಮಿಸಿದೆಯಾ ಅಮ್ಮಾ ?

**ಕುಂತಿ** : (ಅವನನ್ನು ಎತ್ತಿ ಸಮೀಪ ಬರಸೆಳೆದು) ನನ್ನ ಮಗೂ... ನನ್ನ ಪ್ರೀತಿಯ ಕರ್ಣಾ ! ಏಳು, ನನ್ನೊಡನೆ ಎಂತಹ ಕ್ಷಮೆ ಕೇಳುತ್ತಿದ್ದಿ ? ಇಡೀ ಜಗತ್ತಿನಲ್ಲಿ ಮಹಾತ್ಮನೆಂದು ನಿನ್ನ ಗೌರವವಾಗುತ್ತಿದೆ ನಿಜ. ಆದರೆ ನಿನ್ನ ಮನಸ್ಸಿನ ಈ ಮಹಾತ್ಮೆ, ಈ ತರದ ಉದಾರತೆ ! – ಕರ್ಣಾ, ನನ್ನ ದೇಹ ತಲ್ಲಣಿಸುತ್ತಿದೆ, ಮನಸ್ಸು ಭೀತಿಯಿಂದ ಅಲ್ಲೋಲಕಲ್ಲೋಲವಾಗುತ್ತಿದೆ! ನನ್ನ ಆಯುಷ್ಯದಲ್ಲಿ, ಸುಖದ, ಆನಂದದ ಇಷ್ಟು ದೊಡ್ಡ ಸುರಿಮಳೆ ಎಂದೂ ಆಗಿರಲಿಲ್ಲ. ಕುರುಕ್ಷೇತ್ರದ ರಾಜಕಾರಣದ ಪರಿಣಾಮ ಏನೇ ಆಗಲಿ. ನನ್ನ ಕಳೆದುಹೋದ ಐಶ್ವರ್ಯ ಇಂದು ನನಗೆ ಪುನಃ ಲಭಿಸಿದೆ ! – ಆದರೆ, ಆದರೆ ನೀನು ಪುನಃ ಮರಳಿ ಹೋಗಲಿರುವೆಯಾ?

**ಕರ್ಣ** : ಹೌದು. ನಾನು ಮರಳಿ ಹೋಗಲೆಂದೇ ಬಂದಿರುವೆ, ಪಾಂಡವರ ಪಕ್ಷವನ್ನು ಸೇರಲು ಬಂದಿಲ್ಲ! ನಾನು ನನ್ನ ತಾಯಿಯ ದರ್ಶನಾಕಾಂಕ್ಷಿಯಾಗಿ ಮಾತ್ರ ಬಂದೆ. ರಣಾಂಗಣಕ್ಕೆ ಹೋಗುವ ಮೊದಲು ಆಶೀರ್ವಾದ ಪಡೆಯಲು ಬಂದಿರುವೆ.

**ಕುಂತಿ** : ನನ್ನ ದುರ್ಭಾಗ್ಯವನ್ನು ಆಯುಷ್ಯವಿಡೀ ಅಂಧಕಾರದಲ್ಲಿ ಗುಪ್ತವಾಗಿಟ್ಟುಕೊಳ್ಳುತ್ತ ಬಂದಿರುವ ಈ ಕುಂತಿ – ಎಂತಹ ಆಶೀರ್ವಾದವನ್ನು ಕೊಟ್ಟಾಳು ಅವಳು ! ಮತ್ತು ಏನೆಂದು ಆಶೀರ್ವಾದವನ್ನು ಕೊಡಲಿ ನಾನು ! ಒಬ್ಬನ ವಿಜಯವೆಂದರೆ, ಐದು ಜನರ ಪರಾಜಯ ಮತ್ತು ಐವರ ವಿಜಯವೆಂದರೆ, ನನ್ನದೇ ಒಂದು ಕಂದನ ಪರಾಜಯ ! ಕರ್ಣಾ, ನಿನ್ನ ಪರಾಕ್ರಮದಿಂದ, ಔದಾರ್ಯದಿಂದ, ಚಿರಂಜೀವಿಯಾಗಿ ಬಾಳು ! ಇದೇ ನನ್ನ ಆಶೀರ್ವಾದ !

**ಕರ್ಣ** : ತಾಯಿಯ ಕರ್ತವ್ಯವನ್ನು ನೀನು ಮಾಡಿರುವೆ ಅಮ್ಮಾ, ಈಗ ನನಗೆ ಮಗನ ಕರ್ತವ್ಯವನ್ನು ಮಾಡಬೇಕಾಗಿದೆ. ನೀನು ಯಾವ ವಚನವನ್ನು ನನ್ನಿಂದ ಅಪೇಕ್ಷಿಸಿರಲಿಲ್ಲವೋ, ಆ ವಚನವನ್ನು ಕೊಡಲು ನಾನು ಸಿದ್ಧನಿದ್ದೇನೆ. ತಾಯೀ, ನಿನ್ನ ಪವಿತ್ರ ಪಾದದ ಸಾಕ್ಷಿಯಾಗಿ ನಾನು ಹೇಳುವುದೇನೆಂದರೆ, ನಾನು ನಿನ್ನ ಮಕ್ಕಳನ್ನು – ನನ್ನ ತಮ್ಮಂದಿರನ್ನು ಕೊಲ್ಲುವುದಿಲ್ಲ! ಸತ್ಯಪ್ರಿಯ ಮತ್ತು ಧರ್ಮಶೀಲನೆಂದು ಯಾರ ಧವಳಕೀರ್ತಿ, ಕುರುವಂಶಕ್ಕೆ ಮುಕುಟ

ಪ್ರಾಯವಾಗಿರುವುದೋ, ಆ ಯುಧಿಷ್ಠರನನ್ನು ನನ್ನ ಸ್ವಂತ ಪ್ರಾಣದ ಮೇಲೆ ಸಂಕಟ ಬಂದರೂ ಕೊಲ್ಲುವುದಿಲ್ಲ !

**ಕುಂತಿ** : ಕರ್ಣಾ –

**ಕರ್ಣ** : ನನ್ನ ಚಿಕ್ಕ ತಮ್ಮಂದಿರಾಗಿರುವ – ಮಲತಾಯಿಯ ಮಕ್ಕಳಿದ್ದು ಕೂಡ, ನಿನ್ನ ಮಾತೃವಾತ್ಸಲ್ಯಸತತ ಲಭ್ಯವಾಯಿತೋ, ಆ ನಿನ್ನ ಪ್ರೀತಿಯ ನಕುಲ–ಸಹದೇವರ ಮೇಲೂ ನಾನು ಶಸ್ತ್ರಪ್ರಹಾರವನ್ನು ಮಾಡುವುದಿಲ್ಲ.

**ಕುಂತಿ** : ಕರ್ಣಾ, ನಿನ್ನ ಋಣದಿಂದ ಮುಕ್ತಳಾಗಲು ನಾನು ಏನು ತಾನೇ ಮಾಡಲಿ ಮಗೂ !

**ಕರ್ಣ** : ಯಾರ ಭೈರವ ಪರಾಕ್ರಮದ ಮುಂದೆ ಶತ್ರುಗಳು ಕೂಡ ವಿಸ್ಮಿತರಾಗಿ ನಿಲ್ಲುವರೋ, ಆ ನಿನ್ನ ಅಚ್ಚುಮೆಚ್ಚಿನ ಭೀಮನನ್ನು – ನನ್ನ ಆ ದಾಂಡಿಗ ತಮ್ಮನನ್ನು, ಶಸ್ತ್ರಗಳ ಕಕ್ಷೆಯಲ್ಲಿ ಬಂದರೂ ಕೂಡ ವಧೆ ಮಾಡುವುದಿಲ್ಲ !

**ಕುಂತಿ** : ಕರ್ಣಾ, ನಿನ್ನಂತಹ ವರಪುತ್ರನಿಗೆ ಜನ್ಮಕೊಟ್ಟೆ, ಈ ಒಂದು ವಿಷಯದಿಂದಲೇ, ನನ್ನ ಎಲ್ಲ ಪಾಪಗಳು ಪರಿಹಾರವಾದವು ! – ಅರ್ಜುನನ ಮೇಲೆ, ನನ್ನ ಪ್ರೇಮದ ಪುತ್ಥಳಿ ಧನಂಜಯನ ಮೇಲೂ ಶಸ್ತ್ರಪ್ರಹಾರವನ್ನುಮಾಡುವುದಿಲ್ಲವಲ್ಲ? ಹೇಳು, ಮಾಡುವುದಿಲ್ಲವಷ್ಟೇ ? – ಕರ್ಣಾ, ನೀನೇಕೆ ಮಾತನಾಡುತ್ತಿಲ್ಲ ?

**ಕರ್ಣ** : ಅರ್ಜುನನ ಕುರಿತು, ಇಂತಹ ವಚನವನ್ನು ಕೊಡಲು ನಾನು ಅಸಮರ್ಥನಿದ್ದೇನೆ. ಕುಂತಿಯ ಐದು ಮಕ್ಕಳು ಜೀವಂತ ಉಳಿದಾರು – ಅರ್ಜುನನ ಸಮೇತ ಅಥವಾ ಕರ್ಣನ ಸಮೇತ !

**ಕುಂತಿ** : ಎಂತಹ ಭಯಂಕರ ದ್ವಂದ್ವವಿದು ! ನನ್ನ ಉದರದಲ್ಲಿ ಹುಟ್ಟಿದ ಇಬ್ಬರು ಮಕ್ಕಳ ಪೈಕಿ ಒಬ್ಬನನ್ನು ಮೃತ್ಯುವಿನ ಸ್ವಾಧೀನ ಕೊಡಲು ಹೇಗೆ ಸಿದ್ಧಳಾಗಲಿ ನಾನು !

**ಕರ್ಣ** : ಯುದ್ಧರಂಗಕ್ಕೆ ಕಾಲಿಡುವ ಎಲ್ಲ ವೀರರೂ, ಜೀವನದ ಕೊನೆಯ ಅಂಚಿನಲ್ಲಿ ನಿಂತಿರುತ್ತಾರೆ. ಆದರೆ ತಾಯೀ, ನಾನು ಅರ್ಜುನನ ವಧೆ ಮಾಡುವುದನ್ನು ಬಿಟ್ಟು, ಅರ್ಜುನನಿಂದಲೇ ನನ್ನ ವಧೆಯಾಗುವ ಸಂಭವ ಈಗ ಹೆಚ್ಚೆಂದು ಕಾಣುತ್ತಿದೆ !

**ಕುಂತಿ** : ಕರ್ಣಾ, ನೀನು ನನಗೆ ಬೇಕಾದವನು, ನೀನೇ ನನಗೆ ಬೇಕಾದವನು. ಇತರಿಗಾಗಿ, ನಾನು ನಿನ್ನ ಮೇಲೆ ಪ್ರೀತಿ ಇಲ್ಲದವಳಾಗಿದ್ದೇನೆ ಎಂದು ನಿನಗೆ ಅನಿಸಿದರೆ ಅದು ಶುದ್ಧ ತಪ್ಪು. ಎಂದೆಂದಿಗೂ ಅದು ಸುಳ್ಳು. ನನಗೆ ನೀವಿಬ್ಬರೂ ಬೇಕು, ನೀವಿಬ್ಬರೂ ನನ್ನವರು ! ಕರ್ಣಾ, ನೀವಿಬ್ಬರೂ ಕೂಡಿರಲು ಸಾಧ್ಯವಿಲ್ಲವೇನು ?

**ಕರ್ಣ** : ಅದು ಅಸಾಧ್ಯವಮ್ಮಾ ನಾನು. ದುರ್ಯೋಧನನಿಗೆ ಎಂದೂ ದ್ರೋಹ ಮಾಡಲಾರೆ ಬಹುಶಃ ನನ್ನ ಮನಸ್ಸು ಈ ಕ್ಷಣಕ್ಕೆ ಆತನಿಗೆ ದ್ರೋಹ ಬಗೆಯುತ್ತಿರಬಹುದು ! ಆದರೆ ನನ್ನ ಶಸ್ತ್ರ ಮಾತ್ರ, ನನ್ನ ದೇಹದಲ್ಲಿ ಉಸಿರು ಇರುವ ತನಕ ದುರ್ಯೋಧನನಿಗಾಗಿಯೇ ಕಾದಾಡುವೆನು. ದುರ್ಯೋಧನನು ಮಾಡಿದ ಯುದ್ಧದ ಸಿದ್ಧತೆ, ಭೀಷ್ಮ, ದ್ರೋಣರ ಬಲದ ಮೇಲೆ ವಿಶ್ವಾಸವನ್ನಿಟ್ಟಿಲ್ಲ, ಆತನ ವಿಶ್ವಾಸ ಈ ಕರ್ಣನ ಮೇಲೆ. ನಾಳೆ ನಾನು ಕೌರವರ ಪಕ್ಷವನ್ನು ತ್ಯಾಗ ಮಾಡಿದರೆ – ಅವನ ಮಿತ್ರಪ್ರೇಮ ಎಷ್ಟು ಗಾಢ, ಎಷ್ಟು ಉನ್ನತವಾಗಿದೆಯೆಂದರೆ, ಒಂದು ಶಬ್ದದಿಂದ ಕೂಡ ಆತ ನನ್ನ ಮನಸ್ಸನ್ನು ನೋಯಿಸಲಿಕ್ಕಿಲ್ಲ, ನನ್ನ ದಾರಿಗೆ ಅಡ್ಡ ಬರಲಿಕ್ಕಿಲ್ಲ ! ಇಂತಹ ಉದಾರ ಹೃದಯಿ, ಸರಳ ಸ್ವಭಾವದ ಮತ್ತು ಸ್ವಾಭಿಮಾನಿ ಮಿತ್ರನ ವಿಶ್ವಾಸಘಾತ ಮಾಡಿ, ಅವನನ್ನು ಮೃತ್ಯುವಿನ ಕಂದರದಲ್ಲಿ ದೂಡುವ ಅಥವಾ ಪಾಂಡವರ ಪಕ್ಷಕ್ಕೆ ಸೇರಿ

ನನ್ನ ಸ್ವಂತ ಜೀವದ ರಕ್ಷಣೆಯನ್ನು ಮಾಡಿಕೊಳ್ಳುವ ಕಲ್ಪನೆಯನ್ನು ಕೂಡ ನಾನು ಸಹನೆ ಮಾಡಲಾರೆ. ಇದಕ್ಕೆಲ್ಲ ಈಗ ಉಳಿದುದು ಇದೊಂದೇ ಮಾರ್ಗ. ದುರ್ಯೋಧನನ ಮಿತ್ರ, ದುರ್ಯೋಧನನಿಗಾಗಿಯೇ ಕಾದಾಡುವೆನು ಮತ್ತು ಕುಂತಿಯ ಜ್ಯೇಷ್ಠ ಪುತ್ರ, ಕರ್ಣ ತನ್ನ ಸಣ್ಣ ತಮ್ಮಂದಿರ ಜೀವಕ್ಕೆ ಯಾವ ಧಕ್ಕೆಯೂ ತಗಲದಂತೆ ಜಾಗ್ರತೆ ವಹಿಸುವನು. ಆದರೆ ತಾಯೀ, ಒಬ್ಬ ಅರ್ಜುನನ ಕುರಿತು ಮಾತ್ರ ನೀನು ನನಗೆ ಯಾವ ಬಂಧನವನ್ನೂ ಹಾಕಬೇಡ ! ಬಂಧು ದ್ರೋಹ ಮತ್ತು ಮಿತ್ರದ್ರೋಹದಿಂದಮುಕ್ತನಾಗಲು ಇದೊಂದೇ ನನಗೆ ಉಳಿದಿರುವ ಮಾರ್ಗ.

**ಕುಂತಿ** : ನನ್ನ ಹೃದಯ ಸಿಡಿದು ಚೂರು ಚೂರಾಗುವಂತೆ ಭಾಸವಾಗುತ್ತಿದೆ ಕರ್ಣಾ ! ಆದರೆ 'ಸರಿ'ಯೆನ್ನದೆ ಬೇರೆ ಗತ್ಯಂತರವಿಲ್ಲ ! ನನ್ನ ಅಪರಾಧವನ್ನು ಮರೆತು, ನೀನು ಸ್ವತಃ ದೊಡ್ಡ ಮನಸ್ಸಿನಿಂದ ನನ್ನೆಡೆಗೆ ನಡೆದು ಬಂದೆ. ನನ್ನ ಸೆರಗನ್ನು ನಿನ್ನ ದಾನದಿಂದ ತುಂಬಿದೆ. ಇದೇ ಬಹಳವಾಯಿತು! ಇದೇ ನನ್ನ ಯೋಗ್ಯತೆಗಿಂತ ಹೆಚ್ಚಾಯಿತು. ಮೊದಲೇ, ನಾನು ನಿನ್ನ ಜನ್ಮದ ಗಳಿಗೆಯಿಂದಲೂ ನಿನ್ನ ಮಾರ್ಗದಲ್ಲಿ ಮುಳ್ಳಿನ ಹಾಸಿಗೆಯನ್ನೇ ಹಾಸುತ್ತ ಬಂದವಳು. ಈಗ ನಿನಗೆ ಇನ್ನಷ್ಟು ಕಂಟಕಗಳನ್ನು ಎದುರಿಸುವಂತೆ ಮಾಡುವ, ನಿನ್ನ ಮನಸ್ಸಿನ ದುಃಖದ ಒತ್ತಡಗಳನ್ನು ಇನ್ನೂ ಹೆಚ್ಚಿಸುವ ಇಚ್ಛೆ ನನಗಿಲ್ಲ ! ನನ್ನ ಕಂದಾ, ಹೋಗು, ವೇಳೆ ಅರ್ಧ ರಾತ್ರಿ ಮೀರಿಹೋಯಿತು. ಈಗ ಇಲ್ಲಿಂದ ಹೋಗು – ನಿನಗೆ ದೀರ್ಘಾಯುಷ್ಯ ಲಭಿಸಲಿ ! – ನಿನ್ನ ಕೀರ್ತಿ ಅಜರಾಮರವಾಗಲಿ !

**ಕರ್ಣ** : ತಾಯೀ, ಹೋಗುವ ಮೊದಲು, ನಿನ್ನ ಪವಿತ್ರ ಪಾದಕಮಲಗಳ ಮೇಲೆ ಇನ್ನೊಮ್ಮೆ ಮಸ್ತಕವನ್ನಿಡುವ ಭಾಗ್ಯವನ್ನು ಅನುಗ್ರಹಿಸು. ನಮ್ಮ ಭೇಟಿಯು ಪುನಃ ಆಗಬಹುದು. ಇಲ್ಲಾ ಆಗದೆಯೂ ಹೋಗಬಹುದು ! (ನಮಸ್ಕರಿಸುವನು).

## ಶಬ್ದಗಳ ಅರ್ಥ

ರಾಧೇಯ – ಕುಂತಿಯ ಮಗ ; ಪರಿವೆಮಾಡು – ಲಕ್ಷಿಸು; ಅಭಾಗೀ – ದುರದೃಷ್ಟೆ; ದರ್ಶನಾಕಾಂಕ್ಷಿ – ನೋಡುವ ಇಚ್ಛೆಯುಳ್ಳವ ; ಭೈರವ ಪರಾಕ್ರಮ – ಮಹಾಪರಾಕ್ರಮ ; ಕಕ್ಷೆ- ವಲಯ ; ಧಕ್ಕೆ – ಅಪಾಯ.

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಜಾಗೃತ .................. ; ಸದೆಬಡಿ ...................... ; ಪ್ರಹಾರ ........................ ;

ದಾಂಡಿಗ ................... ; ದ್ವಂದ್ವ ...................... ; ಗತ್ಯಂತರ ........................

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಕರ್ಣನ ನಿಜ ತಾಯಿಯ ಹೆಸರೇನು ?

ಉತ್ತರ ..........................................................................................

ಆ) ಕರ್ಣನು ಪಾಂಡವರ ಶಿಬಿರಕ್ಕೆ ಏಕೆ ಬಂದಿದ್ದನು ?

ಉತ್ತರ ..........................................................................................

ಇ) ಯಾರ ಕೀರ್ತಿ ಕುರುವಂಶಕ್ಕೆ ಮುಕುಟ ಪ್ರಾಯವಾಗಿತ್ತು ?

ಉತ್ತರ ..........................................................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತು ಬರೆಯಿರಿ.**

ಅ) ..........................................................................................

ಉತ್ತರ ..........................................................................................

ಆ) ..........................................................................................

ಉತ್ತರ ..........................................................................................

**ಪ್ರಶ್ನೆ 3) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ತನ್ನ ತಪ್ಪನ್ನು ಕ್ಷಮಿಸಲು ಕೌಂತೇಯ ಹೇಳಿದ ಮಾತುಗಳ ಯಾವವು ?

ಉತ್ತರ ..........................................................................................
..........................................................................................

ಆ) ಅರ್ಜುನನನ್ನು ರಕ್ಷಿಸಲು ಕರ್ಣನೇಕೆ ಒಪ್ಪಲಿಲ್ಲ ?

ಉತ್ತರ ..........................................................................................
..........................................................................................

**ಪ್ರಶ್ನೆ 4) ಯೋಚಿಸಿ ಈ ಕೆಳಗಿನ ವಿಧಾನಗಳನ್ನು ಪೂರ್ಣಗೊಳಿಸಿರಿ.**

(ಅ) ಕರ್ಣನು ಕುಂತಿಯ ಮಗ. ಹಾಗಾದರೆ ಇನ್ನುಳಿದ ಪಂಚ ಪಾಂಡವರು .................. , .................. , .................. , ...................... , ......................

ಆ) ಪಾಂಡವ ಮತ್ತು ಕೌರವರ ಗುರುಗಳು ದ್ರೋಣಾಚಾರ್ಯರು. ಹಾಗಾದರೆ ಕರ್ಣನ ಗುರುಗಳು ...................... .

ಇ) ಅರ್ಜುನ ಬಿಲ್ಲುಗಾರಿಕೆಯಲ್ಲಿ ಹೆಸರಾದರೆ, ದುರ್ಯೋಧನನು ...................... ಪರಿಣಿತ.

ಈ) ಭೀಮಾರ್ಜುನರು ಕುಂತಿಯ ಮಕ್ಕಳು. ಹಾಗಾದರೆ ಮಾದ್ರಿಯ ಮಕ್ಕಳು ................ , .................... .

ಉ) ಯುಧಿಷ್ಠರನು ಧರ್ಮಾತ್ಮನು. ಹಾಗಾದರೆ ಕರ್ಣನು ................

**ಪ್ರಶ್ನೆ 5) ''ಅ'' ಗುಂಪಿನಲ್ಲಿರುವ ಹೆಸರುಗಳಿಗೆ ಸರಿ ಹೊಂದುವ ಪದವನ್ನು ಕೆಳಗಿನ ಚೌಕಟ್ಟಿನಲ್ಲಿಯ ಶಬ್ದ ಆಯ್ದು ''ಬ'' ಗುಂಪಿನಲ್ಲಿ ಬರೆಯಿರಿ.**

**(ಭೀಮ, ನಕುಲ -ಸಹದೇವ, ಅರ್ಜುನ, ಧರ್ಮರಾಜ, ಕರ್ಣ)**

| 'ಅ' ಗುಂಪು | 'ಬ' ಗುಂಪು |
|---|---|
| ಅಶ್ವಿನಿ ಕುಮಾರರು | |
| ವಾಯುಪುತ್ರ | |
| ಮಧ್ಯಮ ಪಾಂಡವ | |
| ಯುಧಿಷ್ಠರ | |

**ಪ್ರಶ್ನೆ 6) ಕೆಳಗಿನ ಪದಗಳನ್ನು ಉಪಯೋಗಿಸಿ ಅರ್ಥಪೂರ್ಣ ವಾಕ್ಯ ರಚಿಸಿರಿ.**

ಆಶೀರ್ವಾದ - ............... ;

ಅಂತಃಕರಣ - ............... ;

ದರ್ಶನ - ............... ;

**ಉಪಕ್ರಮ :** ಚದುರಂಗ ಬಲ ಸೈನ್ಯದ ಅರ್ಥವನ್ನು ಬರೆಯಿರಿ.

**ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ.**

- **ಯೋಚಿಸಿ ಉತ್ತರಿಸಿರಿ.**

ಅ) 'ಬೆಳಕು' ಈ ಶಬ್ದದ ವಿರುದ್ಧಾರ್ಥಕ ಶಬ್ದ ಯಾವುದು ?

1) ಸುಖ 2) ಕಹಿ 3) ಕತ್ತಲೆ 4) ಜ್ಞಾನ

ಆ) ಪೂಜ್ಯ ............. ಅನೇಕ ನಮಸ್ಕಾರಗಳು.

ಪತ್ರ ಬರೆಯುವಾಗ ಈ ಸಂಬೋಧನೆಯನ್ನು ಯಾರಿಗಾಗಿ ಬಳಸುತ್ತಾರೆ ?


1) ಅಕ್ಕನಿಗೆ 2) ತಮ್ಮನಿಗೆ 3) ನಾದಿನಿಗೆ 4) ಗುರುಗಳಿಗೆ

8DR21B



# 12. ನರಿಯುಂ ಬಿಲನುಂ

**ಲೇಖಕರ ಪರಿಚಯ :** ವಸುಭಾಗಭಟ್ಟನೆಂಬ ವಿದ್ವಾಂಸನು ಅವಿನೀತರೂ, ಸ್ವೇಚ್ಛಾಚಾರಿಗಳೂ ಆದ ರಾಜಕುಮಾರರನ್ನು ಮಾರ್ಗಕ್ಕೆ ತರಲು ಪಂಚತಂತ್ರ ಎಂದರೆ – ಭೇದ (ಒಡೆಯುವುದು), ಪರೀಕ್ಷೆ (ಪರೀಕ್ಷಿಸುವಿಕೆ), ವಿಶ್ವಾಸ, ವಂಚನೆ, ಮಿತ್ರತ್ವ ಗಳಿಸುವುದು – ಇವೇ ಮೊದಲಾದವುಗಳ ಬಗೆಗೆ, ಪಶುಪಕ್ಷಿ ಮನುಷ್ಯರನ್ನೊಳಗೊಂಡ ರಮ್ಯವಾದ ಕಥೆಗಳನ್ನು ಸಂಸ್ಕೃತದಲ್ಲಿ ಬರೆದನು. ಆ ಸಂಸ್ಕೃತ ಗ್ರಂಥದಲ್ಲಿರುವ ವಿಷಯವನ್ನೇ ಕನ್ನಡ ಕವಿಯಾದ ದುರ್ಗಸಿಂಹನು ಹಳೆಗನ್ನಡ ಚಂಪೂಕಾವ್ಯ ಶೈಲಿಯಲ್ಲಿ ಬರೆದನು.



ಕಪಟಪ್ರಪಂಚಪರಿಣಿತ
ನುಪಾಯನಿಪುಣಾಭಿಧಾನಜಂಬುಕನುದ್ಯ
ದ್ವಿಪುಳತರಮಪ್ಪ ಗಿರಿವರ
ದುಪಕಂಠದ ಬಿಲದೊಳಿರ್ಪುದತಿಮುದದಿಂದಂ

★ವ ॥ ಮತ್ತಮಾವನದೊಳು ಪುಂಡರೀಕಮೆಂಬ ಪುಲಿ ಇರುವುದು. ಅ ಪುಲಿಯುಂ ಬೇಂಟೆಗೆ ಪೋಗಿ ಮಾಂಸಮಂ ತಂದು ತನ್ನ ಗುಹೆಯೊಳಗೆ ಮಡಗಿ ತಾನು ಮರು ದಿವಸಂ ಮುನ್ನ ತಂದ ಮಾಂಸಮಂ ಸಂಚಿತಾರ್ಥಂ ಎಂದು ಮಡಗಿ ಮತ್ತಂ ಬೇಟೆಗೆ ಪೋಪುದುಂ ; ಆ ಪುಲಿಯ ಗುಹೆಯಂ ಉಪಾಯನಿಪುಣನೆಂಬ ಜಂಬುಕಂ ಕಂಡು ಒಳಗಂ ಪೊಕ್ಕು ಅಲ್ಲಿದ್ದ ಮಾಂಸಮಂ ತಿಂದು ಪೋಪುದುಂ ಪುಲಿ ಬಂದು ತನ್ನ ಪೊಸ ಮಾಂಸಮಂ ಮಡಗಿ ಮುನ್ನ ತಂದ ಮಾಂಸಮಂ ಕಾಣದೆ ಬೆರಗಾಗಿ ಮರುದಿವಸ ಬೇಂಟೆಗೆ ಪೋಪುದುಂ; ಮತ್ತಾ ನರಿ ಬಂದು ಅಲ್ಲಿರ್ದ ಮಾಂಸಮೆಲ್ಲಮಂ ತಿಂದು ಪೋಪುದುಂ ಈ ಪ್ರಕಾರದೊಳು ನಿಚ್ಚನಿಚ್ಚ ಬಂದು ತುಡುವಂ ತಿಂದು

ಬೇಸರಿಸುತ್ತಿರೆ ಪುಲಿ ಬಂದು ಎನ್ನ ಮನೆಯಂ ನಿಚ್ಚಂ ಪೊಕ್ಕು ತುಡುವಂ ತಿಂಬ ಕಳ್ಳನ ಸಿಕ್ಕಿಸುವೆನೆಂದು ತನ್ನ ಗುಹೆಯ ಪೊರೆಗೆ ಅಡಗಿಪ್ಪುದುಂ ಆ ನರಿ ಬಂದು ಮನೆಯಂ ಪೊಕ್ಕು ಅಲ್ಲಿರ್ದ ಮಾಂಸಮಂ ತಿನ್ನುತ್ತಿರೆ ಪುಲಿ ಕಂಡು ಇದನಿಲ್ಲಿಯೇ ಕೊಲಲ್ಕೆ ಅಳವಲ್ಲದೆ ಆ ನರಿ ಪೋಪಾಗ ಅದರ ಕೂಡ ಪೋಗಿ ಅದರ ಮನೆಯ ಕಂಡು ಮರುದಿವಸಂ ನರಿ ತನ್ನ ಮನೆ ಬಪ್ಪುದುಂ ತಾನು ಆ ನರಿಯ ಬಿಲವ ಪೊಗುವಾಗ ಹೆಜ್ಜೆಯಲ್ಲಡಸಿ ಹಿಂದು ಮುಂದಾಗೆ ಬಂದು ಪೊಕ್ಕಿರ್ಪುದುಂ

ಕಿಱಿದಾನುಂ ಬೇಗದೊಳಾ ನರಿ ಬಂದು ಬಾಗಿಲೊಳ್ ನಿಂದು ಪುಲಿಯ ಪಜ್ಜೆಯುಮಂ ಸೊಪ್ಪಾದ ಬಿಲನುಮಂ ಕಂಡು – ಇದೆತ್ತಾನುಮೊಂದಪಾಯಮಾಗದೆ ಪೋಗದೆಂದು ಶಂಕಿಸಿ, ಕಿಱಿದೆಡಿಯಂ ಪೆಱಮೆಟ್ಟಿಬಂದು ನಿಂದು, ಈ ಚೋದ್ಯಮನಗ ಪಾಯದೊಳೇ ನೋಡುವೆನೆಂದು; ಬಿಲನಂ ಪೆಸರ್ಗೊಂಡು ಪಲವುಂ ಸೂಳ್ ಕರೆಯಲ್ ಆ ಬಿಲನಂ ನುಡಿಯದಿರ್ಪುದುಂ---. ಬಿಲನೆ ನೀನಿನಿತುಕಾಲಂ ನಾಂ ಬರ್ಪಾಗಳಿದಿರ್ವಂದು, ಸೇವೆಯಂ ಮಾಡುತಿರ್ದೆ ; ಈಗಳದಿಗೆಟ್ಟು ಕರೆದೊಡಂ ಮೊದಲಾಗಿ ಸರಂದೋರುದಪೆಯಿಲ್ಲ; ಪೆರನೊರ್ವಂಗೆ ಕೂರ್ತೆಯಕ್ಕುಂ, ಮೇಣ್ ಬಲ್ಲಿದನಿರ್ದನಕ್ಕುಮಲ್ಲದೊಡೀಗಳೇಕುಸಿರದಿರ್ದಪೆ? ಆದೊಡಮೇಂ? ನಿನ್ನ ಗುಣಕ್ಕಿನ್ನೊರ್ಮೆ ಕರೆವಂ, ಇನ್ನುಮುಸಿರದಿರ್ದೊಡೆ ಪೆರತೊಂದು ಬಿಲನನರಸಿಕೊಳ್ವೆಂ, ಸರಂದೋರಿದೆಯಪ್ಪೊಡೆ ನಿನ್ನಲ್ಲಿಗೆ ಬರ್ಪನೆಂದು, ಮತ್ತಂ ಬಿಲನಂ ಕರೆವುದುಂ; ಪುಲಿ ಇದೆಲ್ಲಮಂ ಕೇಳ್ದು --- ಬಿಲನೆನಗೆ ಭಯಸ್ಥನಾಗಿ ಸರಂದೋರಲಣ್ಮದಿರ್ದುದಾಗಲ್ವೇ ಟ್ಟುಮಿನ್ನಾನಾದೊಡಂ ಸರಂದೋಱಿ ನರಿಯಂ ಬರಿಸಿ ತಿಂಬೆನೆಂಬ. ವಗೆಯಂ ಬೇಡರಂತೆ ಬಗೆದು ಹೂಂಕಾರಂಗೆಯ್ವುದುಂ ; ಆ ಧ್ವನಿಯಂ ನರಿ ಕೇಳ್ದು ತನ್ನ ಬುದ್ಧಿಗೆ ತಾನೇ ಮೆಚ್ಚಿ, ಎಂದಿಂತು ಪಲಕಾಲಮೀವನದೊಳಿರ್ದುಂ ಈ ವನದುಳಾಡಿಯುಂ ಬಲ್ಲೆಂ, ಬಿಲಂ ನುಡಿವುದಂ ಗಿಡಗಳ್ ನಡೆವುದಂ ನಾನೆಂದುಂ ಕಂಡುಂ ಕೇಳ್ದುಮಱಿಯೆನೆಂದು ಆ ನರಿ ಬಗೆಯೊಳ್ ಪಿರಿಯನಪ್ಪದಱಿಂ ತನ್ನ ಬುದ್ದಿಗೆ ತಾನೇ ಮೆಚ್ಚಿ ಆಯೆಡೆಯಂ ಬಿಟ್ಟೋಡಿ ಬರ್ದುಂಕಿತು.

– ದುರ್ಗಸಿಂಹ

## ಶಬ್ದಗಳ ಅರ್ಥ

ಜಂಬುಕ – ನರಿ ; ಮುದ – ಪ್ರೀತಿ ; ಪಜ್ಜೆ – ಹೆಜ್ಜೆ ; ಚೋದ್ಯ – ಆಶ್ಚರ್ಯ ; ಉಸಿರದಿರ್ದಪೆ – ಮಾತನಾಡುತ್ತಿಲ್ಲ; ಪೆರಮೆಪ್ಪಿ – ಹಿಂದೆಸರಿದ ; ಪೆರಂ– ಬೇರೆ ; ಇದಿರ್ವಂದು – ಎದುರು ಗೊಂಡು ; ಅಱಿವಗೆ – ಕೆಟ್ಟ ಮನಸ್ಸು ; ಬರ್ದುಂಕು – ಬದುಕು.

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಅಭಿದಾನ .................. ; ಬಿಲ ................. ; ಶಂಕಿಸಿ ....................... ;
ಅಱಿಸು .................. ; ಅಣ್ಮದೆ ..................... ; ಪೆಸರ್ಗೊಂಡು .................. .

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಜಂಬುಕನೆಂಬ ನರಿಯು ಯಾರ ಗುಹೆಗೆ ಹೋಗಿ ಆಹಾರ ಸೇವಿಸುತ್ತಿತ್ತು ?

ಉತ್ತರ ...........................................................................................

ಆ) ಬಿಲವನ್ನು ಕಂಡು ನರಿಗೆ ಏಕೆ ಸಂಶಯವಾಯಿತು ?

ಉತ್ತರ ...........................................................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತು ಬರೆಯಿರಿ.**

ಅ) ..........................................................................................

ಉತ್ತರ ..........................................................................................

ಆ) ..........................................................................................

ಉತ್ತರ ..........................................................................................

**ಪ್ರಶ್ನೆ 3) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ನರಿಯು ಬಿಲದೊಡನೆ ಯಾವ ಮಾತುಗಳನ್ನು ಆಡಿತು ?

ಉತ್ತರ ..........................................................................................

..........................................................................................

..........................................................................................

ಆ) ಹುಲಿಯು ನರಿಗೆ ಏನೆಂದು ಉತ್ತರ ಕೊಟ್ಟಿತು ?

ಉತ್ತರ ..........................................................................................

..........................................................................................

..........................................................................................

**ಪ್ರಶ್ನೆ 4) ಬಿಟ್ಟ ಸ್ಥಳಗಳನ್ನು ಯೋಗ್ಯ ಪದಗಳಿಂದ ತುಂಬಿರಿ.**

ಅ) ಒಳಗಂ ಪೊಕ್ಕು ಅಲ್ಲಿದ್ದ ................... ತಿಂದು ಪೋಪುದುಂ.

ಆ) ಈ .................... ಪಾಯದೊಳೇ ನೋಡುವೆನೆಂದು.

ಇ) ನಿನ್ನ ಗುಣಕ್ಕಿನ್ನೊರ್ಮೆ ................ .

ಈ) ಆ ಧ್ವನಿಯಂ ನರಿ ಕೇಳ್ದು ತನ್ನ ............... ತಾನೇ ಮೆಚ್ಚಿ.

**ಪ್ರಶ್ನೆ 5) ನರಿಯುಂ ಬಿಲನುಂ – ಈ ಗದ್ಯಭಾಗವನ್ನು ಹೊಸಗನ್ನಡದಲ್ಲಿ ಬರೆಯಿರಿ.**

BDZX2Y

## ಉಪಾಯಬಲ್ಲವನಿಗೆ ಅಪಾಯವಿಲ್ಲ

- **ಯೋಚಿಸಿ ಉತ್ತರಿಸಿರಿ.**

ಬಿಟ್ಟ ಸ್ಥಳಗಳಲ್ಲಿ ಯೋಗ್ಯವಾದ ವಿಭಕ್ತಿ ಪ್ರತ್ಯಯಗಳನ್ನು ತುಂಬಿ ಕೆಳಗಿನಪರಿಚ್ಛೇದವನ್ನು ಪೂರ್ಣಗೊಳಿಸಿರಿ.

ರಾಜ □ ದರ್ಬಾರಕ್ಕೆ ಬಂದನು. ರಾಜ □□ ಎಲ್ಲ ಸಭೀಕರು ಸ್ವಾಗತಿಸಿದರು. ರಾಜ □ □ ಅಂದಿನ ಸಭೆಯ ಶೋಭಿಸತೊಡಗಿತು. ರಾಜ □ □ ಅಂದಿನ ಸಭೆ ಕಂಡು ಸಂತೋಷವಾಯಿತು. ರಾಜ □ □ ರಾಜ್ಯದ ಸಮೃದ್ಧಿಯ ಕುರಿತಾದ ಹಿತನುಡಿಗಳು ಕೇಳಿ ಬಂದವು. ರಾಜ □ ಈ ಮಾತುಗಳನ್ನು ಕೇಳಿ ಎಲ್ಲರೂ ಸಂತೋಷ ಪಟ್ಟರು. ಇದರಿಂದ ರಾಜ □ □ ಪ್ರಜೆಗಳ ಪ್ರೀತಿ, ವಿಶ್ವಾಸಗಳು ಮತ್ತಷ್ಟು ಹೆಚ್ಚಾದವು. ಅವರು ರಾಜ □ ತಮ್ಮ ದೈವವೆಂದು ಕೊಂಡಾಡಿದರು.

# 1. ನೇಗಿಲಯೋಗಿ

**ಕವಿ ಪರಿಚಯ :** ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪನವರ ಕಾವ್ಯನಾಮ ಕುವೆಂಪು. ರಾಷ್ಟ್ರಕವಿಗಳೆನಿಸಿದ ಇವರು ಕಥೆ, ಕವಿತೆ, ಕಾದಂಬರಿ, ನಾಟಕ, ಮಕ್ಕಳ ಸಾಹಿತ್ಯ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಭಾರತೀಯ ಜ್ಞಾನಪೀಠ ಹಾಗೂ ಕರ್ನಾಟಕ ಸರಕಾರದ ಪಂಪ ಪ್ರಶಸ್ತಿ ವಿಜೇತರು. ಪದ್ಮವಿಭೂಷಣ, ಕರ್ನಾಟಕ ರತ್ನ ಬಿರುದಾಂಕಿತರು. ಶ್ರೀ ರಾಮಾಯಣ ದರ್ಶನಂ (ಮಹಾಕಾವ್ಯ), ಕಾನೂರು ಸುಬ್ಬಮ್ಮ ಹೆಗ್ಗಡತಿ (ಕಾದಂಬರಿ), ನೆನಪಿನ ದೋಣಿಯಲ್ಲಿ (ಆತ್ಮಚರಿತ್ರೆ) ಮುಂತಾದವು ಇವರ ಪ್ರಮುಖ ಕೃತಿಗಳು.

ನೇಗಿಲ ಹಿಡಿದಾ ಹೊಲದೊಳು ಹಾಡುತ
ಉಳುವಾ ಯೋಗಿಯ ನೋಡಲ್ಲಿ
ಫಲವನು ಬಯಸದ ಸೇವೆಯೆ ಪೂಜೆಯು
ಕರ್ಮವೆ ಇಹಪರ ಸಾಧನವು
ಕಷ್ಟದೊಳನ್ನವ ದುಡಿವನೆ ತ್ಯಾಗಿ
ಸೃಷ್ಟಿಯ ನಿಯಮದೊಳವನೇ ಭೋಗಿ ॥ 1 ॥



ಬಾಳಿತು ನಮ್ಮೀ ನಾಗರಿಕತೆ ಸಿರಿ
ಮಣ್ಣುಣಿ ನೇಗಿಲಿನಾಶ್ರಯದಿ
ನೇಗಿಲ ಹಿಡಿದ ಕೈಯಾಧಾರದಿ
ದೊರೆಗಳು ದರ್ಪದೊಳಾಳಿದರು
ನೇಗಿಲ ಬಲದೊಳು ವೀರರು ಮೆರೆದರು
ಶಿಲ್ಪಿಗಳೆಸೆದರು, ಕವಿಗಳು ಬರೆದರು ॥ 2 ॥

ಯಾರು ಅರಿಯದ ನೇಗಿಲಯೋಗಿಯೆ
ಲೋಕಕೆ ಅನ್ನವನೀಯುವನು
ಹೆಸರನು ಬಯಸದೆ ಅತಿ ಸುಖಕೆಳಸದೆ
ದುಡಿವನು ಗೌರವಕಾಶಿಸದೆ
ನೇಗಿಲ ಕುಳದೊಳಗಡಗಿದೆ ಕರ್ಮ
ನೇಗಿಲ ಮೇಲೆಯೇ ನಿಂತಿದೆ ಧರ್ಮ ॥ 3 ॥

– ಕುವೆಂಪು

## ಶಬ್ದಗಳ ಅರ್ಥ

ನೇಗಿಲು – ಉಳುವ ಸಾಧನ ; ಹೊಲ – ಗದ್ದೆ, ಜಮೀನು ; ಫಲ – ಲಾಭ, ಪ್ರಯೋಜನ ;
ಇಹಪರ – ಭೂಮಿ, ಸ್ವರ್ಗ ; ಕುಳ – ಕುಡ, ನೇಗಿಲದ ಕಬ್ಬಿಣದ ತುದಿ

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಯೋಗಿ – ........... ; ಭೋಗಿ – ............. ; ತ್ಯಾಗಿ – .............

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಇಹ–ಪರದ ಸಾಧನ ಯಾವುದು ?

ಉತ್ತರ ..........................................................................................

ಆ) ನಮ್ಮ ನಾಗರಿಕತೆಯ ಸಿರಿ ಹೇಗೆ ಬಾಳಿತು ?

ಉತ್ತರ ..........................................................................................

ಇ) ನೇಗಿಲ ಬಲದಲ್ಲಿ ಯಾರು ಮೆರೆದರು ?

ಉತ್ತರ ......................................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿಉತ್ತರ ಬರೆಯಿರಿ.**

ಅ) ..................................................................

ಉತ್ತರ ..................................................................

ಆ) ..................................................................

ಉತ್ತರ ..................................................................

**ಪ್ರಶ್ನೆ 3) ಬಿಟ್ಟ ಸ್ಥಳ ತುಂಬಿ ವಾಕ್ಯ ಪೂರ್ಣಗೊಳಿಸಿರಿ.**

ಅ) ಕಷ್ಟದೊಳನ್ನವ .................... ತ್ಯಾಗಿ.

ಆ) ನೇಗಿಲ ಹಿಡಿದ .................. ದೊರೆಗಳು ದರ್ಪದೊಳಾಳಿದರು.

ಇ) ನೇಗಿಲ .................. ಕರ್ಮ.

ಈ) ದುಡಿವನು ....................

**ಪ್ರಶ್ನೆ 3) 'ಅ' ಗುಂಪು ಮತ್ತು 'ಬ' ಗುಂಪುಗಳನ್ನು ಹೊಂದಿಸಿ ಬರೆಯಿರಿ.**

| 'ಅ' ಗುಂಪು | 'ಬ' ಗುಂಪು | |
|---|---|---|
| 1) ದೊರೆಗಳು | 1) ಎಸೆದರು | .................. |
| 2) ವೀರರು | 2) ಬರೆದರು | .................. |
| 3) ಶಿಲ್ಪಿಗಳು | 3) ದರ್ಪದೊಳಾಳಿದರು | .................. |
| 4) ಕವಿಗಳು | 4) ಮೆರೆದರು | .................. |

**ಪ್ರಶ್ನೆ 4) ಈ ಕವಿತೆಯಲ್ಲಿ ರೈತನ ಗುಣಗಳನ್ನು ಹೇಳುವ ಪದಗಳನ್ನು ಚೌಕಟ್ಟಿನಲ್ಲಿ ಬರೆಯಿರಿ.**

**ಪ್ರಶ್ನೆ 5) ಉದಾಹರಣೆಯಲ್ಲಿ ತೋರಿಸಿದಂತೆ ಅಂತ್ಯಾಕ್ಷರವನ್ನು ಬಳಸಿ ಹೊಸ ಶಬ್ದಗಳನ್ನ ರಚಿಸಿರಿ.**

**ಉದಾ :** ಅಕ್ಷರ – ರವಿ – ವಿಜ್ಞಾನ – ನದಿ – ದಿನಾಂಕ – ಕಮಲ

ಅ) ಅರಸ –

ಆ) ಕನಸು –

ಇ) ವಿನಯ –

**ಉಪಕ್ರಮ :** ಏಕದಳ ಹಾಗೂ ದ್ವಿದಳ ಧಾನ್ಯಗಳನ್ನು ಸಂಗ್ರಹಿಸಿ ಅಲ್ಬಂ ತಯಾರಿಸಿರಿ.

BEST4L

**ಯೋಚಿಸಿ ಉತ್ತರಿಸಿರಿ.**

★ ಗುಂಪಿಗೆ ಸೇರದ ಪದವನ್ನು ಗುರುತಿಸಿರಿ.


1) ನರಿ 2) ತೋಳ 3) ಜಿಂಕೆ 4) ಚಿರತೆ

1) ಜನೇವರಿ 2) ಮೇ 3) ನವ್ಹೆಂಬರ 4) ಜುಲೈ

# 2. ಜಯವೆನ್ನಿ ಭಾರತಾಂಬೆಗೆ

**ಕವಿ ಪರಿಚಯ :** ಮುಂಬಯಿ ಕನ್ನಡಿಗರ ಹಿರಿಯಕ್ಕ ಎಂದೇ ಪರಿಚಿತರಾಗಿರುವ ಡಾ. ಸುನೀತಾ ಎಂ. ಶೆಟ್ಟಿಯವರು ಮಹಾರಾಷ್ಟ್ರದ ಕನ್ನಡ ಮತ್ತು ತುಳು ಸಾಹಿತ್ಯ, ಸಾಂಸ್ಕೃತಿಕ ಲೋಕಕ್ಕೆಲ್ಲಾ ಚಿರಪರಿಚಿತರಾಗಿದ್ದಾರೆ. ನಿನಾದ, ಅಂತರ್ಗಂಗೆ, ಪಯಣ, ಅಕ್ಷಯ ಸಂಪದ ಮುಂತಾದವು ಇವರ ಕನ್ನಡ ಕೃತಿಗಳು. ಪಿಂಗಾರ, ಸಂಕ್ರಾಂತಿ, ನಾಗಸಂಪಿಗೆ ತುಳು ಗ್ರಂಥಗಳು. ಅನೇಕ ಪ್ರಶಸ್ತಿ ಪುರಸ್ಕಾರ, ಗೌರವಗಳಿಗೆ ಭಾಜನರಾಗಿರುವ ಇವರು ಕರ್ನಾಟಕ ಸರಕಾರದ ಪ್ರತಿಷ್ಠಿತ ಅತ್ತಿಮಬ್ಬೆ ಪುರಸ್ಕಾರವನ್ನೂ, ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಮಾತೋಶ್ರೀ ರತ್ನಮ್ಮ ಹೆಗ್ಗಡೆ ಪ್ರಶಸ್ತಿ ಪಡೆದಿದ್ದಾರೆ.

ಪ್ರಸ್ತುತ ಕವಿತೆಯನ್ನು ಅವರ **ಮೌನದ ಕಿಟಕಿಯೊಳಗೆ** ಎಂಬ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.



ಜಯವೆನ್ನಿ, ಜಯವೆನ್ನಿ ಭಾರತಾಂಬೆಗೆ
ಜಯವೆನ್ನಿ ಜಯವೆನ್ನಿ ವಿಶ್ವಖ್ಯಾತಿಗೆ ॥

ಉತ್ತರದ ಕಾಶ್ಮೀರ ದಕ್ಷಿಣದ ಸಾಗರವು
ಉತ್ತುಂಗ ಶಿಖರವೇ ಪುಣ್ಯನದಿಗಾಶ್ರಯವು
ಎತ್ತ ನೋಡಿದರತ್ತ ಸಸ್ಯ ಸ್ಯಾಮಲೆಯು
ಮತ್ತೆ ಕಾಲ್ತೊಳೆಯುವಳು ಕನ್ಯಾಕುಮಾರಿಯು ॥ 1 ॥

ಹಲವು ಮತ ಪಂಥಗಳು, ಜಾತಿ-ವಿಜಾತಿಗಳು
ಕಲಹಕೆಳಸದ ಒಂದೆ ತಾಯ್ ಮಕ್ಕಳು ।
ಕೆಲವೊಮ್ಮೆ ಒಂದಿನಿತು ಹುಬ್ಬನೇರಿಸಿದರೂ
ಬಳಿಗೆ ಬಂದರೆ ಸಾಕು ತಕ್ಕೈಸುವವರು ॥ 2 ॥

ಕಣಿವೆಯಿಂದಿಳಿದರೂ ಗಟ್ಟ ಮೆಟ್ಟಿದರೂ
ಘನ ಕಡಲ ಅಲೆಯಲ್ಲಿ ತೇಲುತ್ತ ಬಂದರೂ ।
ಧನದಾಶೆ ಅಧಿಕಾರ ಗದ್ದುಗೆಯ ಬಯಸಿದರೂ
ಮನದುಂಬಿ ಆಸರೆಯ ನೀಡಿದೆವು ನಾವು ॥ 3 ॥

ಪರಕೀಯ ಇಲಿಯು ತಾ ಹುಲಿಯಾಗಿ ಮೆರೆಯುತ್ತ
ಪಾರತಂತ್ರ್ಯದ ಉರುಳ ಬಿಗಿಯುವಂತಾಯ್ತು ।
ಚರಕಾ ತಿರುತಿರುಗಿ ಪಂಜು ತಾ ಉರಿಯಾಗಿ
ಮರ ಮರಳಿ ಸ್ವಾತಂತ್ರ್ಯ ಕಹಳೆ ಮೊಳಗಿತ್ತು ॥ 4 ॥

ತಾಯಿ ಭಾರತೀಯ ಮಡಿಲ ಮಕ್ಕಳು ನಾವು
ಆಯ ತಪ್ಪದ ಬದುಕ ಹರಕೆ ಹೊತ್ತವರು ।
ಕಾಯವಳಿದರು ಕೀರ್ತಿ ಉಳಿಸುವ ಹಂಬಲದಿ
ನ್ಯಾಯ, ಸೌಹಾರ್ದಗಳ ನೋಂಪಿ ನೋಂತವರು ॥ 5 ॥

ದೇಶವಿದು ಸನಾತನ, ನಿಷ್ಠೆಯೇ ಆರಾಧನಾ
ಕುಶಲವು ಸರ್ವರಿಗೆ ಇರಲಿ ಬಕುತಿ ಭಾವನಾ ।
ನಿಷೆ ಹರಿದು ಉಷೆ ಬೆಳಗಿ ತೊಳಗುವಂತೆ
ಜಸದ ಕಂಪು ಪಸರಿ ತಾ ಮೆರೆಯುವಂತೆ ॥ 6 ॥

- ಸುನೀತಾ ಎಂ. ಶೆಟ್ಟಿ

## ಶಬ್ದಗಳ ಅರ್ಥ

ವಿಶ್ವವಿಖ್ಯಾತಿ - ಜಗತ್ಪ್ರಸಿದ್ಧ ; ಉತ್ತುಂಗ - ಎತ್ತರದ , ಶ್ರೇಷ್ಠ ; ಶ್ಯಾಮಲೆ - ಕಪ್ಪು ವರ್ಣದವಳು ; ಪಾರತಂತ್ರ್ಯ - ಪರಾಧೀನ

★ ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಕಣಿವೆ ............... ; ಕೀರ್ತಿ ............... ; ಸೌಹಾರ್ದ ................

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿ ಏನಿವೆ ?

ಉತ್ತರ .............................................................

ಆ) ಪಾರತಂತ್ರ್ಯದ ಉರುಳು ಬಿಗಿಯಾಗಲು ಕಾರಣವೇನು ?

ಉತ್ತರ .............................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತು ಬರೆಯಿರಿ.**

ಅ) .............................................................

ಉತ್ತರ .............................................................

ಆ) .............................................................

ಉತ್ತರ .............................................................

**ಪ್ರಶ್ನೆ 3) ಕೆಳಗಿನ ಪದ್ಯದ ಸರಳಾನುವಾದ ಬರೆಯಿರಿ.**

ತಾಯಿ ಭಾರತೀಯ ಮಡಿಲ ಮಕ್ಕಳು ನಾವು<br>
ಆಯ ತಪ್ಪದ ಬದುಕ ಹರಕೆ ಹೊತ್ತವರು ।<br>
ಕಾಯವಳಿದರು ಕೀರ್ತಿ ಉಳಿಸುವ ಹಂಬಲದಿ<br>
ನ್ಯಾಯ, ಸೌಹಾರ್ದಗಳ ನೋಂಪಿ ನೋಂತವರು ॥

...........................................................................

...........................................................................

...........................................................................

...........................................................................

**ಪ್ರಶ್ನೆ 4) ಬಿಟ್ಟ ಸ್ಥಳಗಳನ್ನು ಯೋಗ್ಯ ಶಬ್ದಗಳಿಂದ ತುಂಬಿರಿ.**

ಅ) ಕಲಹಕೆಳಸದ ಒಂದೆ ತಾಯ್ ...................

ಆ) ಪಾರತಂತ್ರ್ಯದ ................. ಬಿಗಿಯುವಂತಾಯ್ತು.

ಇ) ............... ಭಾರತೀಯ ಮಡಿಲ ಮಕ್ಕಳು ನಾವು.

**ಪ್ರಶ್ನೆ 5) ಕೆಳಗಿನ ಶಬ್ದಗಳಿಗೆ ಸರಿಹೊಂದುವಂತೆ ಉದಾಹರಣೆಯಲ್ಲಿ ತೋರಿಸಿದಂತೆ ಇತರ ಶಬ್ದಗಳನ್ನು ಬರೆಯಿರಿ.**

**ಉದಾ :** ಶಾಲೆ – ಪುಸ್ತಕ, ಮಕ್ಕಳು, ಘಂಟೆ, ಬೋರ್ಡು, ಚೆಂಡು, ಲಗೋರಿ, ಬೆಂಚು

ಹೊಲ ............ ............ ............. ........... ..........

ಅರಣ್ಯ ............ ............ ............. ........... ..........

ಅಂಗಡಿ ............ ............ ............. ........... ..........

**ಪ್ರಶ್ನೆ 6) ಸ್ವಾತಂತ್ರ್ಯ ದಿನಾಚರಣೆ ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.**

.............................................................................................

.............................................................................................

.............................................................................................

.............................................................................................

.............................................................................................

.............................................................................................

**ಉಪಕ್ರಮ :** ನಮ್ಮ ದೇಶ – ಘಟಕ ರಾಜ್ಯಗಳು – ಕೇಂದ್ರಾಡಳಿತ ಪ್ರದೇಶಗಳು – ರಾಷ್ಟ್ರೀಯ ಭಾವೈಕ್ಯತೆ ಈ ಮುಖ್ಯಾಂಶಗಳ ಆಧಾರದ ಮೇಲೆ ನಿಬಂಧ ರಚಿಸಿರಿ.

**ಸ್ವಾತಂತ್ರ್ಯವೇ ಸ್ವರ್ಗ, ಪಾರತಂತ್ರ್ಯವೇ ನರಕ**

★ **ಯೋಚಿಸಿ ಉತ್ತರಿಸಿರಿ :**

ಅ) **ನಾರಾಯಣನು ಯಾವಾಗಲೂ ಆಟವಾಡುತ್ತಿರುತ್ತಾನೆ.** ಈ ವಾಕ್ಯದಲ್ಲಿ 'ಆ' ಗುಣಿತಾಕ್ಷರ ಎಷ್ಟು ಸಲ ಬಂದಿದೆ ?

1) 5 2) 6 3) 7 4) 8

ಆ) ರಾಮನು ಚಿನ್ನದ ಜಿಂಕೆಯನ್ನು ಬೆನ್ನಟ್ಟಿಕೊಂಡು ಹೋದನು.

ಈ ವಾಕ್ಯದ ಕಾಲ ಗುರುತಿಸಿರಿ.

BEIP69

1) ವರ್ತಮಾನಕಾಲ 2) ಭೂತಕಾಲ 3) ಭವಿಷ್ಯತ್ ಕಾಲ 4) ಅಕಾಲ

# 3. ನೇತ್ರದಾನ

**ಕವಿ ಪರಿಚಯ :** ಬೈಲಹೊಂಗಲದಲ್ಲಿ ಸಾರ್ಥಕವಾದ ಶಿಕ್ಷಕವೃತ್ತಿಯನ್ನು ಮಾಡುವದರ ಜೊತೆಗೆ ಮಹಿಳಾ ಸಾಹಿತ್ಯಲೋಕದಲ್ಲಿ ತಮ್ಮನ್ನು ಗುರುತಿಸಿಕೊಂಡಿರುವ ಶ್ರೀಮತಿ ಗೌರಾ ಶಿ. ತಾಳಿಕೋಟಿಮಠ ಅವರು ಉತ್ತಮ ಬರಹಗಾರ್ತಿಯಾಗಿದ್ದಾರೆ. ಚಂದಿರನ ಮನೆ ಅವರ ಮಕ್ಕಳ ಕವಿತಾ ಸಂಕಲನ. ನೇರ ನಿರೂಪಣೆ, ಸರಳ ಭಾಷೆ ಅವರ ಕವಿತೆಗಳ ವೈಶಿಷ್ಟ್ಯ. ಅವರ ಕವಿತೆಗಳು ಮಕ್ಕಳು ಆಡಿ, ಹಾಡಿ ನಲಿಯುವಂತೆ ಇವೆ.



ಅನ್ನದಾನ ಹೊನ್ನದಾನ
ಮತ್ತೆ ವಸ್ತ್ರದಾನವು
ಎಲ್ಲ ದಾನಕ್ಕಿಂತ ಮಿಗಿಲು
ನಮ್ಮ ನೇತ್ರ ದಾನವು

ಸತ್ತ ಮೇಲೆ ದೇಹದಲ್ಲಿ
ನೇತ್ರವಿದ್ದರೇನದು ?
ಸಾವ ಮುನ್ನ ನೇತ್ರವನ್ನು
ದಾನ ಮಾಡಿ ಲೇಸದು

ನೇತ್ರ ವಿಲ್ಲದವರಿಗೆ
ಅದನು ಕಸಿ ಮಾಡುವರು
ಅಂಧರಿಗೆ ಕಣ್ಣು ಕೊಟ್ಟ
ಪುಣ್ಯ ನಮಗೆ ಬರುವದು

ದೇಹವಳಿದು ನೇತ್ರ ಉಳಿದು
ಜಗವನೆಲ್ಲ ನೋಳ್ಪವು
ಅಂಧಕಾರದಲ್ಲಿದ್ದ ಮನುಜಗೆ
ಬೆಳಕು ನೀಡಿದ ಭಾಗ್ಯವು

ನೇತ್ರದಾನ ಮಾಡಿದವರ
ಬದುಕು ಪುಣ್ಯ ಪಾವನ
ಸತ್ತ ಮೇಲೂ ದೃಷ್ಟಿಕೊಟ್ಟ
ಹೊಸತು ಅದುವೆ ಜೀವನ.

– **ಶ್ರೀಮತಿ ಗೌರಾ ಶಿ. ತಾಳಿಕೋಟಿಮಠ**

## ಶಬ್ದಗಳ ಅರ್ಥ

ನೇತ್ರ – ಕಣ್ಣು ; ಹೊನ್ನ – ಬಂಗಾರ ; ವಸ್ತ್ರ – ಬಟ್ಟೆ ; ಲೇಸು – ಒಳ್ಳೆಯದು ;

ಅಂಧ – ಕುರುಡ ; ಅಂಧಕಾರ – ಕತ್ತಲೆ ; ಮನುಜ – ಮನುಷ್ಯ

★ ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಅಳಿ – ............... ; ಕಸಿ – ...............

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಈ ಕವಿತೆಯಲ್ಲಿ ಮೂಡಿಬಂದ ದಾನದ ಪ್ರಕಾರಗಳು ಯಾವವು ?

ಉತ್ತರ ...............................................................

ಆ) ಅಂಧರಿಗೆ ದೃಷ್ಟಿ ಬರಲು ಏನು ಮಾಡುತ್ತಾರೆ ?

ಉತ್ತರ ...............................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತು ಬರೆಯಿರಿ.**

ಅ) ..............................................................

ಉತ್ತರ ..............................................................

ಆ) ..............................................................

ಉತ್ತರ ..............................................................

**ಪ್ರಶ್ನೆ 3) ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣಮಾಡಿರಿ.**

ನೇತ್ರದಾನ ................................

...........................................

...........................................

............................ ಅದುವೆ ಜೀವನ.

**ಪ್ರಶ್ನೆ 4) ದೇಹದಾನದ ಮಹತ್ವವನ್ನು ಕುರಿತು ಬರೆಯಿರಿ.**

..............................................................................

..............................................................................

..............................................................................

..............................................................................

**ಪ್ರಶ್ನೆ 5) ಕೆಳಗಿನ ವಾಕ್ಯಗಳನ್ನು ಕ್ರಮವಾಗಿ ಬರೆಯಿರಿ.**

ರೋಗಿಯನ್ನು ಗುಣಪಡಿಸಿದರು.
ರಕ್ತ ಹರಿಯುತ್ತಿತ್ತು.
ರಕ್ತದ ಅವಶ್ಯಕತೆ ಇತ್ತು.
ಸುತ್ತಲಿನ ಜನರು ಸಹಾಯಕ್ಕೆ ಬಂದರು.
ಬ್ಲಡ್‌ಬ್ಯಾಂಕಿನಿಂದ ರಕ್ತ ತಂದರು.
ರಸ್ತೆಯಲ್ಲಿ ಅಪಘಾತವಾಯಿತು.
ದವಾಖಾನೆಗೆ ಸೇರಿಸಿದರು.
ಪ್ರಥಮೋಪಚಾರ ಮಾಡಿದರು.

..............................................................................

..............................................................................

..............................................................................

..............................................................................

..............................................................................

..............................................................................

..............................................................................

..............................................................................

**ಉಪಕ್ರಮ :** ಬ್ಲಡ್‌ಬ್ಯಾಂಕ ಕುರಿತು ಶಿಕ್ಷಕರ / ಪಾಲಕರಿಂದ ಇನ್ನಷ್ಟು ಮಾಹಿತಿ ಸಂಗ್ರಹಿಸಿರಿ.

## ಸಿರಿಬಂದ ಕಾಲಕ್ಕೆ ಕರೆದು ದಾನವ ಮಾಡು

**ಯೋಚಿಸಿ ಉತ್ತರಿಸಿರಿ.**

★ ಬಸವಣ್ಣನವರ ಕಾಲದಲ್ಲಿ ಸಾಗರೋಪಾದಿಯಲ್ಲಿ ಹರಿದು ಬಂದ ಸಾಹಿತ್ಯ.

1) ವಚನ 2) ತ್ರಿಪದಿ 3) ರಗಳೆ 4) ಷಟ್ಪದಿ

★ ಶಂಕರನು ಕನ್ನಡ ಪುಸ್ತಕವನ್ನು ಓದಿದನು. ಈ ವಾಕ್ಯದಲ್ಲಿಯಕರ್ಮಪದ ಗುರುತಿಸಿರಿ.

1) ಶಂಕರ 2) ಪುಸ್ತಕವನ್ನು 3) ಓದಿದನು 4) ಕನ್ನಡ

# 4. ಕುಹೂ ಕುಹು

**ಕವಿ ಪರಿಚಯ :** ಎಚ್ಚೆಸ್ವಿ ಎಂದು ಪ್ರಖ್ಯಾತರಾಗಿರುವ ಎಚ್.ಎಸ್. ವೆಂಕಟೇಶಮೂರ್ತಿಯವರು ಕನ್ನಡನಾಡಿನ ಪ್ರಸಿದ್ಧ ಕವಿ ಮತ್ತು ನಾಟಕಕಾರರು. ಎಚ್ಚೆಸ್ವಿ ಸಮಗ್ರ ಮಕ್ಕಳ ಸಾಹಿತ್ಯ ಇತ್ತೀಚೆಗೆ ಪ್ರಕಟಗೊಂಡ ಅವರ ಮಹತ್ವದ ಕೃತಿಯಾಗಿದ್ದು ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರವನ್ನು ಪಡೆದಿದೆ. ಕುಮಾರವ್ಯಾಸ ಕಥಾಂತರ, ಚಿನ್ನಾರಿಮುತ್ತ, ಶಂಖದೊಳಗಿನ ಮೌನ, ಬಾರೋ ಬಾರೋ ಮಳೆರಾಯ, ಆಯ್ದ ಹನ್ನೊಂದು ನಾಟಕಗಳ ಸಂಪುಟ ಮುಂತಾದವು ಅವರ ಮಹತ್ವದ ಕೃತಿಗಳು.



ಎಲ್ಲ ಮರಿಗಳು ಕಾ ಕಾ ಎಂದರೆ
ಇದೊಂದು ಮಾತ್ರ ಕುಹೂ ಕುಹು !
ನಿಬ್ಬೆರಗಾದಳು ಹಸಿ ಬಾಣಂತಿ
ಈ ಮರಿಯೊಂದಕ್ಕೇನಾಯ್ತು ?

ಹಕೀಮಕಾಕಾ ಬಂದನು ರಾತ್ರಿ !
ಕೂಸಿಗೆ ತಿನಿಸಿದ ಹುಣಿಸೇ ಹೂ !
ಎಲ್ಲಾ ಮರಿಗಳು ಕಾ ಕಾ ಎಂದವು !
ಇದೊಂದು ಮಾತ್ರ ಕುಹೂ ಕುಹು !

ಕಾಗಕ್ಕನ ಗಂಡನಿಗೂ ಕಸಿವಿಸಿ
ನೆರೆಮನೆಯವರೇನೆಂದಾರು !
ಕಾಗೆಯ ಮರಿಯಿದು ಕಾ ಕಾ ಎನ್ನದೆ
ಕೂಗುತ್ತಿದ್ದರೆ ಕುಹೂ ಕುಹು !

ಮರುದಿನ ದೂರದ ಊರಿನ ಕೋಗಿಲೆ
ಬೇಡಿತು ಕಾಕಾಂಬಿಕೆಯನ್ನು !
ಮರಿಯೇ ಇಲ್ಲದ ಮಡಲಿಗೆ ನೀಡಿರಿ
ಕುಹೂ ಎನ್ನುವ ಕೂಸನ್ನು !

ಕಂಬನಿಯೊರೆಸುತ ಕೊಟ್ಟಳು ಕೂಸನು
ರಕ್ಷಣೆ ಪಡೆಯಲಿ ಎಂದು !
ಮಾತೆಯರಿಬ್ಬರ ಪ್ರೀತಿಯ ಕಂದ
ಕೂಗಿತು ಮೆಲ್ಲಗೆ ಕುಹೂ ಕುಹು !

– ಎಚ್. ಎಸ್. ವೆಂಕಟೇಶಮೂರ್ತಿ

## ಶಬ್ದಗಳ ಅರ್ಥ

ನಿಬ್ಬೆರಗಾಗು – ಆಶ್ಚರ್ಯಪಡು ; ಕಸಿವಿಸಿ – ನೋವು

★ ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಕಂಬನಿ – ............... ; ಒರೆಸು – ............... ; ಮಾತೆ – ...............

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಕಾಗಕ್ಕನ ಗಂಡನಿಗೆ ಏಕೆ ಕಸಿವಿಸಿಯಾಯಿತು ?

ಉತ್ತರ ............................................................

ಆ) ಕೋಗಿಲೆ ಯಾರನ್ನು ಬೇಡಿತು ?

ಉತ್ತರ ............................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಮೂರು ಪ್ರಶ್ನೆಗಳನ್ನು ರಚಿಸಿ ಉತ್ತು ಬರೆಯಿರಿ.**

ಅ) ............................................................

ಉತ್ತರ ............................................................

ಆ) ............................................................

ಉತ್ತರ ............................................................

ಇ) ............................................................

ಉತ್ತರ ............................................................

**ಪ್ರಶ್ನೆ 3) ಬಿಟ್ಟ ಸ್ಥಳಗಳನ್ನು ಯೋಗ್ಯ ಶಬ್ದಗಳಿಂದ ತುಂಬಿರಿ.**

ಅ) ನಿಬ್ಬೆರಗಾದಳು .........................

ಆ) ಎಲ್ಲಾ ಮರಿಗಳು ...................... ಎಂದವು.

ಇ) ಮರಿಯೇ ಇಲ್ಲದ ............... ನೀಡಿರಿ.

ಈ) ಮಾತೆಯರಿಬ್ಬರ ಪ್ರೀತಿಯ ................

**ಪ್ರಶ್ನೆ 4) ಕೆಳಗಿನ ಪಕ್ಷಿ, ಪ್ರಾಣಿಗಳು ಕೂಗುವ ರೀತಿಯನ್ನು ಬರೆಯಿರಿ.**

| | | | |
|---|---|---|---|
| ಕಾಗೆ | .................... | ಗುಬ್ಬಿ | .................... |
| ಕೋಗಿಲೆ | .................... | ನಾಯಿ | .................... |
| ಬೆಕ್ಕು | .................... | | |

**ಉಪಕ್ರಮ :** ವಸಂತಕಾಲದ ವರ್ಣನೆ ಇರುವ ಒಂದು ಕವಿತೆಯನ್ನು ಬರೆಯಿರಿ.

.................................. ........................................

.................................. ........................................

................................. ........................................

.................................. ........................................

................................. ........................................

**ಕೋಗಿಲೆಯ ಗಾನ ಇಂಪು, ನೀಡುವುದು ಮನಕೆ ತಂಪು**

**ಯೋಚಿಸಿ ಉತ್ತರಿಸಿರಿ.**

★ **ಎಲ್ಲ ವಿದ್ಯಾರ್ಥಿಗಳು ಪ್ರವಾಸಕ್ಕೆ ಬರಲೇಬೇಕು.** ಈ ವಾಕ್ಯದ ವಾಕ್ಯಪ್ರಕಾರ ಗುರುತಿಸಿರಿ.

1) ಪ್ರಶ್ನಾರ್ಥಕ 2) ಉದ್ಗಾರವಾಚಕ 3) ಆಜ್ಞಾರ್ಥಕ 4) ಸರಳಾರ್ಥಕ

★ ಚುರುಕುತನಕ್ಕೆ ಅತ್ಯಂತ ಪ್ರಸಿದ್ಧವಾದ ಪ್ರಾಣಿ.

1) ತೋಳ 2) ಹುಲಿ 3) ಆನೆ 4) ನರಿ

# 5. ಎಳೆಯ ಕಂದನ ಕೂಗು


**ಕವಿ ಪರಿಚಯ :** ಜಯದೇವಿತಾಯಿ ಲಿಗಾಡೆಯವರು ಕರ್ನಾಟಕ ಮತ್ತು ಮಹಾರಾಷ್ಟ್ರ ಎರಡು ರಾಜ್ಯಗಳಲ್ಲಿ ಹೆಸರು ಪಡೆದಿರುವ ಒಬ್ಬ ಧೀಮಂತ ಮಹಿಳೆ. ಅವರು ನಾಡುನುಡಿಗಳಿಗೆ, ಸಮಾಜಕ್ಕೆ ಸಲ್ಲಿಸಿದ ತ್ಯಾಗ ಮತ್ತು ಪರಿಶ್ರಮ ಅನುಪಮವಾದುದು. ಸೊಲ್ಲಾಪುರದಲ್ಲಿ ಜನಿಸಿದ ಅವರ ತಂದೆಯ ಹೆಸರು ಚೆನ್ನಬಸಪ್ಪ. ತಾಯಿಯ ಹೆಸರು ಸಂಗಮ್ಮಾ. ಕನ್ನಡ ಮತ್ತು ಮರಾಠಿ ಭಾಷೆಗಳ ನಡುವೆ ಸುಮಧುರ ಬಾಂಧವ್ಯವಿರಬೇಕೆಂಬುದು ಇವರ ಸದಿಚ್ಛೆಯಾಗಿತ್ತು. ಇವರು ಸಿದ್ಧರಾಮ ಪುರಾಣ, ಜಯಗೀತೆ. ತಾಯಿಯ ಪದಗಳು, ತಾರಕ್ಕ ತಂಬೂರಿ, ಮಹಾವೀರರಾಣಿ ಮುಂತಾದ ಗ್ರಂಥಗಳನ್ನು ಬರೆದಿದ್ದಾರೆ.

ಎಂಟು ವರುಷದ ಬಾಲ । ಒಂಟೀಗ ನಡೆದನು ।
ಗಂಟಲ ನರ ಹರೆಯುವಂತೆ – ಕರೆಯೂತ
ಕುಂಟೂತ ಬೀಳೂತ ಮುಂದೆ ಮುಂದೆ ॥ ॥ 1 ॥

ಮಲ್ಲಯ್ಯನ ಕಾಣಲು । ಎಲ್ಲವು ತೊರೆದಿಹನು ।
ಕಲ್ಲು ಮುಳ್ಳೆನ್ನದೆ ಹೊರಟನು – ಸುಕುಮಾರ
ಮಲ್ಲಯ್ಯ ಮಲ್ಲಯ್ಯ ನೆನೆಯೂತ ॥ ॥ 2 ॥

ಮೆತ್ತನ ಕಾಲೀನ । ನೆತ್ತರ ಸುರಿದರೂ ।
ಎತ್ತಿಕೊಳ್ಳಲು ಯಾರಿಲ್ಲ – ಮುಖವೆಲ್ಲ
ಬತ್ತಿ ಬಾಡಿದೆ ಸಿದ್ಧೇಶನ ॥ ॥ 3 ॥

ಬುತ್ತೆಲ್ಲೋ ಬಿದ್ದೋಯಿತು । ಚಿತ್ತ ಚೆನ್ನನ ಮೇಲೆ ।
ಅತ್ತಿತ್ತ ಅಲೆದಾಡಿ ಮೈಯೆಲ್ಲ – ಧೂಳಾಗಿ
ಮೆತ್ತನ ಮನಕೆ ಗಾಯಾಗಿ ॥ ॥ 4 ॥



ವನವನ ತಿರುಗೂತ ।    ವನ ಪಕ್ಷಿಗಳಿಗೆಲ್ಲ ।
ಚೆನ್ನಮಲ್ಲನ ಕಂಡಿದಿರಾ – ಕಂಡಿದರೆ
ಎನಗೊಮ್ಮೆ ಅವನ ತೋರಿರೊ ॥    ॥ 5 ॥

ಗಿಳಿಯ ಹಿಂಡವ ಕಂಡು ।  ಎಳೆಯ ಮಗು ಶಿವಸಿದ್ಧ ।
ಕಳವಳಿಸಿ ಕೇಳಿದನು ಗಿಳಿಗಳಿರ – ಮಲ್ಲಯ್ಯ
ಸುಳಿದ್ಹೋದ ದಾರಿಯ ತೋರಿರೆ ॥    ॥ 6 ॥

ಮಿಡುಕೂತ ಕೇಳಿದನು ।  ಗಿಡಕೆಲ್ಲ ಶಿವಸಿದ್ಧ ।
ತಡೆಯಾಕೆ ಹೇಳಿರೆ ಮಲ್ಲಯ್ಯ – ಹೋಗುವಾಗ
ಅಡಿಮೂಡಿದವೇನು ಬನದಾಗ ॥    ॥ 7 ॥

ತನ್ನದೆಲ್ಲವ ಮರೆತು ।  ಚೆನ್ನಿಗನ ಹುಡುಕೂತ ।
ಬೆನ್ನಹತ್ತಿ ಹೊರಟನು ಪರಸಿಯ – ಜನಗೂಡೆ
ಚೆನ್ನಮಲ್ಲೇಶನಿಗೆ ತೋರಿರೊ ॥    ॥ 8 ॥

ಬಿಕ್ಕಿ ಬಿಕ್ಕಿ ಅಳುವ ।  ಚಿಕ್ಕ ಸಿದ್ಧನ ಕಂಡು ।
ಕಕ್ಕುಲಾತೀಲಿ ಕರೆದು ಕೇಳಿದರು – ತಾಯಿ ತಂದೆ
ಸಿಕ್ಕಿಲ್ಲವೇನು ಹುಡುಕಿದರು ॥    ॥ 9 ॥

**– ಜಯದೇವಿತಾಯಿ ಲಿಗಾಡೆ**

## ಶಬ್ದಗಳ ಅರ್ಥ

ತೊರೆ – ಬಿಡು ;   ನೆತ್ತರ – ರಕ್ತ ;   ಬತ್ತು – ಬಾಡು ;   ಚಿತ್ತ – ಮನಸ್ಸು ;

★ ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ವನ – ............... ;   ಅಡಿ – ............... ;   ಕಕ್ಕುಲಾತಿ – ................

**ವಿಶೇಷ ವಿಚಾರ :**

ಪರಸಿ – ಜಾತ್ರೆ, ಉತ್ಸವದ ಕಾಲದಲ್ಲಿ ಕೂಡಿದ ಜನ ಸಮೂಹ.

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಶಿವಸಿದ್ಧನು ಮಲ್ಲಯ್ಯನನ್ನು ಹೇಗೆ ಕರೆಯುತ್ತ ನಡೆದನು ?

ಉತ್ತರ .................................................................

ಆ) ಎಂತಹ ಮನಸ್ಸಿಗೆ ಗಾಯವಾಯಿತು ?

ಉತ್ತರ .................................................................

ಇ) ತಂದೆ-ತಾಯಿಗಳು ಹೇಗೆ ಕರೆದು ಕೇಳಿದರು ?

ಉತ್ತರ ...........................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಮೂರು ಪ್ರಶ್ನೆಗಳನ್ನು ರಚಿಸಿ ಉತ್ತು ಬರೆಯಿರಿ.**

ಅ) ...........................................................

ಉತ್ತರ ...........................................................

ಆ) ...........................................................

ಉತ್ತರ ...........................................................

ಇ) ...........................................................

ಉತ್ತರ ...........................................................

**ಪ್ರಶ್ನೆ 3) ಕೆಳಗಿನ ಕವಿತೆಯನ್ನು ಪೂರ್ಣ ಮಾಡಿರಿ.**

ತನ್ನದೆಲ್ಲವ ಮರೆತು ...........................

...............................................

...................................... ತೋರಿರೊ.

**ಪ್ರಶ್ನೆ 4) ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಉಪಯೋಗಿಸಿರಿ.**

ಅ) ಕಲ್ಲು ಮುಳ್ಳು - ..................................................

ಆ) ಬತ್ತಿ ಬಾಡು - ..................................................

ಇ) ಕಳವಳ - ..................................................

ಈ) ಕಕ್ಕುಲಾತಿ - ..................................................

**ಪ್ರಶ್ನೆ 5) ಕೆಳಗೆ ಕೊಟ್ಟ ಉದಾಹರಣೆಯಂತೆ ಸಮಾನಾರ್ಥಕ ಪದಗಳನ್ನು ಹೇಳಿರಿ.**

**ಉದಾ :** ನಯನ - ಕಣ್ಣು , ನೇತ್ರ

1) ಕರಿ - 2) ಬಾಲ -

3) ವನ - 4) ರವಿ -

**ಪ್ರಶ್ನೆ 6) ಕೆಳಗಿನ ಪದ್ಯದ ಸರಳಾನುವಾದ ಬರೆಯಿರಿ.**

ಮಾತಿನಿಂ ನಗೆ ನುಡಿಯು । ಮಾತಿನಿಂ ಹಗೆ ಕೊಲೆಯು ।
ಮಾತಿನಿಂ ಸರ್ವ ಸಂಪದವು । ಲೋಕಕ್ಕೆ
ಮಾತೇ ಮಾಣಿಕ್ಯ ಸರ್ವಜ್ಞ. ॥

...................................................................

...................................................................

...................................................................

...................................................................

**ಉಪಕ್ರಮ :** ಅಕ್ಕಮಹಾದೇವಿಯ ಎರಡು ವಚನಗಳನ್ನು ಸಂಗ್ರಹಿಸಿರಿ.

## ಮಕ್ಕಳ ಆಟ ಚೆಂದ, ಹಬ್ಬದ ಊಟ ಚೆಂದ

**ಯೋಚಿಸಿ ಉತ್ತರಿಸಿರಿ.**

★ **ಹುತಾತ್ಮಯೋಧನ ಪಾರ್ಥಿವ ಶರೀರ ಸ್ವಗ್ರಾಮಕ್ಕೆ ಬಂದಿತು.ಆಗ ಗ್ರಾಮಸ್ಥರಲ್ಲಿ ಉಂಟಾದ ಭಾವನೆ.**

1) ಸಿಟ್ಟು 2) ದು:ಖ 3) ಭಯ 4) ಆತಂಕ

★ ಗುರು ಇಲ್ಲದೇ ವಿದ್ಯೆ ಕಲಿತವನು.

1) ಕರ್ಣ 2) ಅರ್ಜುನ 3) ಏಕಲವ್ಯ 4) ಭೀಮ










# 6. ಕೆಲಸ ಮಾಡು

**ಕವಿ ಪರಿಚಯ :** 'ಮಾದೇವ ಮಿತ್ರ' ಎಂಬ ಕಾವ್ಯನಾಮದಿಂದ ಚಿರಪರಿಚಿತರಾಗಿರುವ ಬಾ.ಇ. ಕುಮತೆಯವರು ವಿಜಯಪುರ ಜಿಲ್ಲೆಯ ಸಾರವಾಡದವರು. ಉತ್ತಮ ಮಕ್ಕಳ ಕವಿಗಳು. ಪ್ರಸ್ತುತ ಕವಿತೆಯನ್ನು ಅವರ 'ಹೆಜ್ಜೇನು' ಎಂಬ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

ನೀನೆಂದಿಗೂ ಖಾಲಿ ಅಲೆಯದಿರು
ಏನಾದರೂ ಕಾಯಕ ಮಾಡುತಿರು || ಪ ||

ಬರಿಗೈಯಿಂದಲಿ ಮಗು ತೊನೆಯದಿರು
ಪೋಲಿಯಾಗಿ ವೇಳೆಯ ನೂಕದಿರು
ಅಂತಹ ಬಾಳಿಗೆ ಬೆಲೆಯಿಲ್ಲ ಮಗು
ಬಾರದು ಎಂದಿಗು ಸುಖ ಶಾಂತಿ ನಗು || 1 ||

ಎಂದೆಂದಿಗೂ ಆಲಸಿಯಾಗದಿರು
ಕುಂಠಿತ ದಾರಿಗೆ ಹೋಗದಿರು
ಕಾಯಕ ಕೈಲಾಸ ಎಂಬುದನರಿತು
ಕಾಯಕದಲ್ಲೆ ತನು-ಮನ ಬೆರೆತು !|| 2 ||



ಯತ್ನವ ಮಾಡುವ ಸಾಹಸಿ ಜೀವಕೆ
ಸೋಲದು ಸೋಂಕದು ಅನುಮಾನೇಕೆ ?
ಇರುವೆಯು ಚಿಕ್ಕದು ಇಹುದಲ್ಲೇನು
ಹಿರಿಹಿರಿ ಕಾಳನು ಹೊರುತಲಿ ತಾನು ॥ 3 ॥

ಗೋಡೆಯನೇರುವ ಕಾಯಕವಿಡಿದು
ಹಲಸಲ ಕೆಳಗಡೆ ಜಾರಲುಬಹುದು
ಬಿದ್ದರು ಏಳುತ ಮುನ್ನಡೆಯುವದು
ಸೋಲಿನ ಭಾವನೆ ತೊರೆದೋಡುವುದು ॥ 4 ॥

ತನ್ನಯ ಗುರಿಯನು ಸಲೆ ಮುಟ್ಟುವುದು
ಸಾಹಸ ಬಾಳಿನ ಬೆಲೆ ತೋರುವುದು
ನೀನೆಂದಿಗು ಖಾಲಿ ತಿರುಗದಿರು
ಏನಾದರು ಕೆಲಸವ ಮಾಡುತಿರು ॥ 5 ॥

**- ಬಾ. ಇ. ಕುಮಠೆ**

## ಶಬ್ದಗಳ ಅರ್ಥ

ಖಾಲಿ – ಕೆಲಸವಿಲ್ಲದೆ, ಸುಮ್ಮನೆ ; ಅಲೆಯದಿರು – ತಿರುಗದಿರು ; ಕಾಯಕ – ಕೆಲಸ ;
ಕುಂಠಿತ – ಕೆಟ್ಟ ; ಸಲೆ – ಸರಿಯಾಗಿ ; ತೊನೆ – ತಿರುಗು

★ ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಸೋಂಕು – ............... ; ತೋರು – ............... ; ಬಾಳು – ...............

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಮಗುವಿಗೆ ಹೇಗೆ ತೊನೆಯದಿರೆಂದು ಕವಿ ಹೇಳುತ್ತಾನೆ ?

ಉತ್ತರ ............................................................

ಆ) ಯಾವುದರಲ್ಲಿ ತನು-ಮನ ಬೆರೆಯಬೇಕು?

ಉತ್ತರ ............................................................

ಇ) ಇರುವೆಯು ಎಂತಹ ಕಾಳನ್ನು ಹೊರುತ್ತದೆ ?

ಉತ್ತರ ............................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

ಅ) ..................................................................

ಉತ್ತರ ..................................................................

ಆ) ..................................................................

ಉತ್ತರ ..................................................................

**ಪ್ರಶ್ನೆ 3) ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣ ಮಾಡಿರಿ.**

ಬರಿಗೈಯಿಂದಲಿ ..............................

................................................

................................................

.............................. ಸುಖ ಶಾಂತಿ ನಗು

**ಪ್ರಶ್ನೆ 4) ಕೆಳಗಿನ ಶಬ್ದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಉಪಯೋಗಿಸಿರಿ**

ಅ) ಕಾಯಕ – ..........................................................

ಆ) ಬರಿಗೈ – ..........................................................

ಇ) ಯತ್ನ – ..........................................................

ಈ) ಸೋಲು – ..........................................................

**ಪ್ರಶ್ನೆ 5) ಕೆಳಗಿನ ಗಾದೆಮಾತುಗಳ ಅರ್ಥ ಹೇಳಿ ಸ್ವಲ್ಪದರಲ್ಲಿ ವಿವರಿಸಿರಿ.**

1) ಹಾಸಿಗೆ ಇದ್ದಷ್ಟು ಕಾಲುಚಾಚು –

..................................................................................

..................................................................................

2) ತನ್ನ ಬೆನ್ನು ತನಗೆ ಕಾಣಿಸದು –

..................................................................................

..................................................................................

3) ನೀರಿನಲ್ಲಿ ಹೋಮ ಮಾಡು –

..................................................................................

..................................................................................

**ಉಪಕ್ರಮ :** 'ನಗು' ಈ ಪದವನ್ನು ಬಳಸಿಕೊಂಡು ಶಬ್ದಗೋಪುರ ತಯಾರಿಸಿರಿ.

## ಶ್ರಮವೇ ಜೀವನ ಶ್ರಮಿಕ ಜೀವನ ಪಾವನ

**ಯೋಚಿಸಿ ಉತ್ತರಿಸಿರಿ.**

★ **ಗೋಪಾಲನು ಬೇಡಿದವರಿಗೆ ಬೇಡಿದ್ದನ್ನು ಕೊಡುವ ಗುಣಹೊಂದಿದ್ದನು.**

**ಅವನಿಗೆ ಹೋಲಿಕೆಯಾಗುವ ವ್ಯಕ್ತಿ.**

1) ಅರ್ಜುನ 2) ಭೀಮ 3) ಧರ್ಮರಾಜ 4) ಕರ್ಣ

★ **ಕಾಯಕವೇ ಕೈಲಾಸ ಎಂದು ಸಾರಿದವರು.**

1) ಕಬೀರದಾಸ 2) ಬಸವಣ್ಣ 3) ಸರ್ವಜ್ಞ 4) ಕುವೆಂಪು






# 7. ನೇಸರು ನಗುತಾನೆ

**ಕವಿ ಪರಿಚಯ :** ದೊಡ್ಡ ರಂಗೇಗೌಡ ಅವರು ಕನ್ನಡದ ಜನಪ್ರಿಯ ಹಾಗೂ ಹಿರಿಯ ಸಾಹಿತಿಗಳು. ಗೇಯತೆ ಹಾಗೂ ಆಡುಮಾತಿನ ಬಳಕೆ ಇವರ ಕವಿತೆಯಲ್ಲಿ ಎದ್ದು ಕಾಣುವ ಗುಣಗಳು. ಜಗಲಿಹತ್ತಿ ಇಳಿದು, ಕಣ್ಣುನಾಲಗೆ, ಕಡಲು, ನಾಡಾಡಿ - ಇವು ಅವರ ಕಾವ್ಯಕೃತಿಗಳು. 'ನೇಸರು ನಗುತಾನೆ' ಕವನವನ್ನು ಅವರ 'ಮೌನಸ್ಪಂದನ' ಕವನಸಂಗ್ರಹದಿಂದ ಆಯ್ದುಕೊಳ್ಳಲಾಗಿದೆ. ಮುಂಜಾವಿನ ಸೊಗಸು ಸಿಂಗಾರಗಳ ವರ್ಣನೆಯ ಜೊತೆಗೆ ಸಮತೆಯ ಸಂದೇಶವೂ ಈ ಕವನದಲ್ಲಿ ಮೂಡಿದೆ.

ತೇರ ಏರಿ ಅಂಬರದಾಗೆ ನೇಸರು ನಗುತಾನೆ
ಮರಗಿಡ ತೂಗ್ಯಾವೆ - ಹಕ್ಕೀ ಹಾಡ್ಯಾವೆ, || ಪ ||

ಬೀರ್‍ಯಾವೇ-ಚೆಲುವ-ಬೀರ್‍ಯಾವೇ
ಬಾ ನೋಡಿ ನಲಿಯೋಣ ತಮ್ಮಾ
ನಾವು ಹಾಡಿ ಕುಣಿಯೋಣ ತಮ್ಮಾ || ಅ.ಪ. ||

ಬೇಲಿ ಮ್ಯಾಗೆ ಬಣ್ಣ ಬಣ್ಣದ ಹೂವು ಅರಳ್ಯಾವೆ
ಆ ಹೂವಿನ ತುಂಬ ಸಣ್ಣ ಚಿಟ್ಟೆ ಕುಂತಾವೆ
ಬಾಗಿ ಬೀಗಿ ಅತ್ತ ಇತ್ತ ಬಾಳೆ ಬಳುಕ್ಯಾವೆ
ಆ ಬಾಳೆ ವನವೇ ನಕ್ಕು ಹಣ್ಣು ತಂದಾವೆ



ಕುಂತರೆ ಸೆಳೆವಾ
ಸಂತಸ ತರುವಾ

ಹೊಂಗೆ ಟೊಂಗೆ ತೂಗಿ ಬಾಗಿ-ಗಾಳಿ ಬೀಸ್ಯಾವೆ ॥ 1 ॥

ಭೂಮಿ ಮ್ಯಾಗೆ ಹಚ್ಚ ಹಚ್ಚಗೆ ಹಾದಿ ತೆರೆದಾವೆ
ಆ ಹಾದಿ ಅಕ್ಕ ಪಕ್ಕ ಬಳ್ಳಿ ಬೆಳೆದಾವೆ
ಸಾಲು ಸಾಲು ಬೆಟ್ಟ ಗುಡ್ಡ ಮೌನ ತಳೆದಾವೆ
ಆ ಮೌನದ ಗಾನ ಎಲ್ಲರ ಮನಸ ಸೆಳೆದಾವೆ

ಭಾವ ಬರಿದು
ಹತ್ತಿರ ಕರೆದು

ಮಾವು ಬೇವು ತಾಳೆ ತೆಂಗು-ಲಾಲಿ ಹಾಡ್ಯಾವೆ ॥2 ॥

ಭೇದ ಭಾವ ಮುಚ್ಚುಮರೆ ಒಂದೂ ಮಾಡೇದ್ನೆ
ಆ ಸೂರ್ಯ ಒಂದೇ ಬೆಳಕ ನಮಗ ನೀಡ್ಯಾನೆ
ಗಾಳಿ ನೀರು ಎಲ್ಲ ಕೊಟ್ಟು ಜಗವ ನಡೆಸ್ಯಾನೆ
ಆ ಸಿರಿಯ ಹಂಚಿಕೊಂಡರೆ ಬಾಳು ಸವಿಜೇನೆ

ಪ್ರೀತಿ ಬೆಳೆದು
ಸ್ನೇಹ ಬೆಳೆದು

ನಗ್ತಾ ನಗ್ತಾ ನಾವು ನೀವು-ಸವಿಯುವ ಸುಖವನ್ನೇ ॥ 3 ॥

**- ದೊಡ್ಡ ರಂಗೇಗೌಡ**

## ಶಬ್ದಗಳ ಅರ್ಥ

ಅಂಬರ - ಆಕಾಶ ; ನೇಸರು - ಸೂರ್ಯ ; ಚಿಟ್ಟೆ - ಪಾತರಗಿತ್ತಿ ; ಬಳುಕು - ಅಲುಗಾಡು

★ ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಭಾವ - .............. ; ಲಾಲಿ - ..................

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ನೇಸರನು ಎಲ್ಲಿ ನಗುತ್ತಾನೆ ?

ಉತ್ತರ .............................................................

ಆ) ಬಣ್ಣ ಬಣ್ಣದ ಹೂವು ಎಲ್ಲಿ ಅರಳಿವೆ ?

ಉತ್ತರ .............................................................

ಇ) ಯಾವವು ಮೌನ ತಳೆದಿವೆ ?

ಉತ್ತರ .............................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತು ಬರೆಯಿರಿ.**

ಅ) ..............................................................

ಉತ್ತರ ..............................................................

ಆ) ..............................................................

ಉತ್ತರ ..............................................................

**ಪ್ರಶ್ನೆ 3) ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣ ಮಾಡಿರಿ.**

ಭೂಮಿ ಮ್ಯಾಗೆ ..............................

.............................................

.............................................

.............................. ಲಾಲಿ ಹಾಡ್ಯಾವೆ.

**ಪ್ರಶ್ನೆ 4) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ನೇಸರು ಬರುವುದನ್ನು ನೋಡಿ ಯಾರು ಯಾರಿಗೆ ಆನಂದವಾಗುತ್ತದೆ ?

ಉತ್ತರ .......................................................................

.......................................................................

ಆ) ನೇಸರು ಬಂದಾಗ ಭೂಮಿಯ ಮೇಲೆ ಏನೇನು ಆಗುತ್ತದೆ ?

ಉತ್ತರ .......................................................................

.......................................................................

ಇ) ನೇಸರು ನಮಗೇನು ನೀಡುತ್ತಾನೆ ?

ಉತ್ತರ ......................................................................

......................................................................

**ಪ್ರಶ್ನೆ 5) ಈ ಕವಿತೆಯಲ್ಲಿ ಬಳಕೆಯಾದ ಹತ್ತು ಗ್ರಾಮ್ಯ ಶಬ್ದಗಳನ್ನು ಆಯ್ದು ಅವುಗಳಿಗೆ ಗ್ರಾಂಥಿಕರೂಪ ನೀಡಿರಿ.**

1) 2) 3) 4)

5) 6) 7) 8)

9) 10)

**ಉಪಕ್ರಮ :** ಕೆಳಗಿನ ವಾಕ್ಯಗಳನ್ನು ಸೂರ್ಯೋದಯದ ಸಂದರ್ಭಕ್ಕೆ ತಕ್ಕಂತೆ ಅನುಕ್ರಮವಾಗಿ ಬರೆಯಿರಿ.

1) ಜನರ ಬೆಳಗಿನ ಕೆಲಸಗಳು ಪ್ರಾರಂಭವಾದವು.

2) ಹಕ್ಕಿಗಳ ಚಿಲಿಪಿಲಿ ಗಾನ ಪ್ರಾರಂಭವಾಯಿತು.

3) ಸೂರ್ಯನು ಉದಯಿಸಿದನು.

4) ಬೆಳಕು ಹರಿಯಿತು.

5) ಮೂಡಣದಲ್ಲಿ ಕೆಂಪು ಬಣ್ಣ ಕಂಡಿತು.

8FU4EH

**ಬಾನಿಗೆ ಸೂರ್ಯ ಚಂದ ಭೂಮಿಗೆ ಹಸಿರು ಅಂದ**

**ಯೋಚಿಸಿ ಉತ್ತರಿಸಿರಿ.**

★ ಮಾವಿನ ಮರದಿಂದ ಹಣ್ಣು ಉದುರಿತು. ಈ ವಾಕ್ಯದಲ್ಲಿ ಗೆರೆಹೊಡೆದ ಪದದ ವಿಭಕ್ತಿ ಗುರುತಿಸಿರಿ.

1) ಪ್ರಥಮಾ 2) ತೃತೀಯಾ 3) ಚತುರ್ಥೀ 4) ಪಂಚಮಿ


★ **ವಿಜಯನಗರದ ಸಿಂಹಾಸನ ರತ್ನಖಚಿತವಾಗಿತ್ತು.** ಈ ವಾಕ್ಯದಲ್ಲಿ ಸಂಧಿ ಪದವನ್ನು ಗುರುತಿಸಿರಿ.

1) ವಿಜಯ 2) ನಗರ 3) ರತ್ನಖಚಿತ 4) ಸಿಂಹಾಸನ



# 8. ಮಹಾರಾಷ್ಟ್ರ ಗೀತೆ

**ಕವಿ ಪರಿಚಯ :** ‘ಅಬಾಚಿ’ ಎಂದು ಪ್ರಸಿದ್ಧರಾಗಿರುವ ಅ. ಬಾ. ಚಿಕ್ಕಮಣೂರರು ಶಿಕ್ಷಕ ಸಾಹಿತಿಗಳು. ಇವರು ಅನೇಕ ಬಿಡಿಗವನಗಳನ್ನು ಬರೆದಿದ್ದಾರೆ. ‘ಕರುಳಿನ ಕರೆ’ ಎಂಬುದು ಅವರ ಒಂದು ಕವನ ಸಂಕಲನ.



ವಂದಿಪೆನು ನಿನಗೆ ಮಹಾರಾಷ್ಟ್ರ ಮಾತೆ
ಹಾಡುವೆನು ನಾ ನಿನ್ನ ವೈಭವದ ಗೀತೆ ॥ ಪ ॥

ಸಹ್ಯಾದ್ರಿಯಗಿರಿ ಶಿಖರಗಳಂದ
ಕೊಂಕಣ ವನಸಿರಿ ವೃಂದ
ಬಾಳೆ ಮಾವುಗಳು ತೆಂಗು ತೇಗುಗಳು
ಚೆಲುವಿನ ಸುಮಲತೆ ಸಿರಿಗಂಧ ॥ 1 ॥

ಯಾದವ ಭೋಸ್ಲೆ ಶೂರ ಶಿವಾಜಿ
ಪೇಶ್ವೆಯರಾಳಿದ ಸಿರಿ ಬೀಡು
ಜ್ಞಾನದೇವ, ತುಕಾ, ನಾಮದೇವರ
ಅಭಂಗ ವೇದಿಕೆ ಈ ನಾಡು ॥ 2 ॥

ಹಿಂದೂ ಮುಸ್ಲಿಂ ಕ್ರೈಸ್ತ ಸಿಖ್ಖರು
ಜೈನ ಬೌದ್ಧ ಯಹೂದಿ ಪಾರಸಿ
ಭೇದ ಭಾವವನು ಮರೆತು ಬಾಳುತಿಹ
ಶಾಂತಿಯ ಮಂದಿರ ಈ ಬೀಡು ॥ 3 ॥

ಕೃಷ್ಣೆ ಗೋದೆ ಕೊಯನಾ ನದಿಗಳ
ಉಗಮದಿ ಪಾವನ ಈ ಬೀಡು
ವೇರೂಳ ಎಲಿಫಂಟಾ ಅಜಂತಾ
ರಸಿಕರ ಮನ ಸೆಳೆಯುವ ಗೂಡು ॥ 4 ॥

ವೀರ ವಿನಾಯಕ ವಿನೋಬ ತಿಲಕ
ಫುಲೆ ಚಾಫೇಕರ ರಾಜಗುರು
ಘಟನಾ ಶಿಲ್ಪಿಯು ಅಂಬೇಡಕರ
ಅಮರ ಹುತಾತ್ಮರ ತವರೂರು ॥ 5 ॥

ಕಬ್ಬಿಗ ಕೇಶವಸುತ ಖಾಂಡೇಕರ
ಕುಸುಮಾಗ್ರಜ ಜನಿಸಿದ ನಾಡು
ಬಾಲಗಂಧರ್ವ ನಟ ಸಮ್ರಾಟರ
ಪೊವಾಡ ಲಾವಣಿಗಳ ಬೀಡು ॥ 6 ॥

ಜಯ ಜಯ ವಿಠ್ಠಲ ರುಕ್ಮಿಣಿ ನಾಡೇ
ಜಯಹೇ ಮರ್ದ ಮರಾಠರ ಬೀಡೇ ॥

**- ಅ. ಬಾ. ಚಿಕ್ಕಮಣೂರ**

## ಶಬ್ದಗಳ ಅರ್ಥ

ವೃಂದ – ಸಮೂಹ ; ಗಿರಿ – ಪರ್ವತ ; ಕಬ್ಬಿಗ – ಕವಿ ; ಮರ್ದ – ಶೂರ ಪುರುಷ ;

★ ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಬೀಡು – ................ ; ವೈಭವ – .................. ; ಸಿರಿಗಂಧ – ..............

**ವಿಶೇಷ ವಿಚಾರ :**

1) ವೀರ ವಿನಾಯಕ – ಅಂದರೆ ವೀರ ಸಾವರಕರರು. ಅವರು ಕ್ರಾಂತಿವೀರರಾಗಿದ್ದರು.

2) ಕೇಶವಸುತ – ಇದು ಕೃಷ್ಣಾಜಿ ಕೇಶವ ದಾಮಲೆ ಅವರ ಕಾವ್ಯನಾಮ.

3) ಕುಸುಮಾಗ್ರಜ – ಇದು ಮರಾಠಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ವಿಷ್ಣು ವಾಮನ ಶಿರವಾಡಕರ ಅವರ ಕಾವ್ಯನಾಮ.

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಕವಿ ಯಾರಿಗೆ ವಂದಿಪೆನು ಎಂದು ಹೇಳುತ್ತಾನೆ ?

ಉತ್ತರ ..............................................................

ಆ) ಈ ನಾಡು ಯಾರ ಯಾರ ಅಭಂಗದ ವೇದಿಕೆಯಾಗಿದೆ ?

ಉತ್ತರ ..............................................................

ಇ) ರಸಿಕರ ಮನ ಸೂರೆಗೊಳ್ಳುವ ಗೂಡುಗಳಾವವು ?

ಉತ್ತರ ..............................................................

**ಪ್ರಶ್ನೆ 2) ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣ ಮಾಡಿರಿ.**

ವೀರ ವಿನಾಯಕ ....................................

....................................................

....................................................

................................ ಹುತಾತ್ಮರ ತವರೂರು

**ಪ್ರಶ್ನೆ 3) ನಿಮಗೆ ಗೊತ್ತಿರುವ ನಮ್ಮ ರಾಜ್ಯದ ಯಾವುದಾದರೂ ಒಂದು ಐತಿಹಾಸಿಕ ಸ್ಥಳವನ್ನು ಕುರಿತು ಬರೆಯಿರಿ.**

................................................................................

................................................................................

................................................................................

................................................................................

................................................................................

**ಪ್ರಶ್ನೆ 4) 'ಅ' ಗುಂಪು ಮತ್ತು 'ಬ' ಗುಂಪುಗಳನ್ನು ಹೊಂದಿಸಿ ಬರೆಯಿರಿ.**

| 'ಅ' ಗುಂಪು | | | 'ಬ' ಗುಂಪು |
|---|---|---|---|
| 1) ಜೈನಧರ್ಮ | ☐ | ಅ) | ನಟಸಾಮ್ರಾಟ |
| 2) ಅಜಂತಾ | ☐ | ಬ) | ಸಂವಿಧಾನ ಶಿಲ್ಪಿ |
| 3) ಅಂಬೇಡಕರ | ☐ | ಕ) | ಮಹಾವೀರ |
| 4) ತುಕಾರಾಮ | ☐ | ಡ) | ಗುಹೆಗಳು |
| 5) ಬಾಲಗಂಧರ್ವ | ☐ | ಇ) | ಅಭಂಗ |

**ಉಪಕ್ರಮ :** ಕೆಳಗಿನ ವ್ಯಕ್ತಿ ಚಿತ್ರಗಳನ್ನು ಗಮನಿಸಿರಿ. ಅವರ ಕುರಿತು ಎರಡು ಸಾಲುವ್ಯಕ್ತಿ ಪರಿಚಯ ಬರೆಯಿರಿ.



..........................................................

..........................................................



..........................................................

..........................................................



..........................................................

..........................................................



..........................................................

..........................................................

## ಜನನಿ, ಜನ್ಮಭೂಮಿ ಸ್ವರ್ಗಕ್ಕೆ ಸಮಾನ

**ನಿಮಗಿದು ತಿಳಿದಿರಲಿ -**

ನಮ್ಮ ರಾಜ್ಯದ ಜ್ಞಾನಪೀಠ ಪ್ರಶಸ್ತಿ ವಿಜೇತರು.



ಹೆಸರು : ವಿಷ್ಣು ಸಖಾರಾಮ ಖಾಂಡೇಕರ

ಕೃತಿ : ಯಯಾತಿ

ವರ್ಷ : 1974



ಹೆಸರು : ವಿಷ್ಣು ವಾಮನ ಶಿರವಾಡಕರ

ಕೃತಿ : ನಟಸಾಮ್ರಾಟ

ವರ್ಷ : 1987



ಹೆಸರು : ವಿಂದಾ ಕರಂದಿಕರ

ಕೃತಿ : ಅಷ್ಟದರ್ಶನ ಕಾವ್ಯ

ವರ್ಷ : 2003



ಹೆಸರು : ಭಾಲಚಂದ್ರ ನೇಮಾಡೆ

ಕೃತಿ : ಕೋಸಲ (ಕೊಕೂನ)

ವರ್ಷ : 2014

**ಯೋಚಿಸಿ ಉತ್ತರಿಸಿರಿ.**

★ ಗುಂಪಿಗೆ ಸೇರದ ಪದವನ್ನು ಗುರುತಿಸಿರಿ.

1) ಕಣ್ಣು 2) ಕಾಲು 3) ಕಿವಿ 4) ಬಾಯಿ

1) ಟೇಲರ 2) ಬಡಗಿ 3) ವ್ಯಾಪಾರಿ 4) ಕಮ್ಮಾರ್ರ

8G3ZG5

# 9. ಸರ್ವೋದಯ ಗೀತೆ

ನಾವೆಲ್ಲ ಭಾರತೀಯರೆಂಬ ಭಾವ ಮೂಡಲಿ
ನಮ್ಮಲ್ಲಿ ಭೇದ ಭಾವ ಪ್ರಭು ದೂರ ಮಾಡಲಿ ॥ ಪ ॥

ಒಂದು ತೋಟದಲ್ಲಿ ಹಲವು ಬಣ್ಣ ಬಣ್ಣ ಹೂಗಳು
ಅದರಂತೆ ನಮ್ಮ ದೇಶದಲ್ಲಿ ಹಲವು ಮತಗಳು
ಹೂಗಳಂತೆ ಮತಗಳು ಮಕರಂದ ಬೀರಲಿ ॥ 1 ॥

ನಾವು ಮನೆಯ ಕಟ್ಟುವಾಗ ಭೂಮಿ ಜಾತಿ ಕೇಳಿತೆ
ನಾವು ಶ್ವಾಸ ಎಳೆಯುವಾಗ ಗಾಳಿ ಕುಲವ ಕೇಳಿತೆ
ಈ ಸೃಷ್ಠಿಯಲ್ಲಿ ಸರ್ವರು ಸಮನಾಗಿ ಬಾಳಲಿ ॥ 2 ॥

ಮಣ್ಣಿನಿಂದ ಆದ ಮಡಕೆ ಮಣ್ಣಿಗನ್ಯವೆ
ಚಿನ್ನದಿಂದ ಆದ ಒಡವೆ ಚಿನ್ನಕನ್ಯವೆ
ನಿನ್ನಿಂದ ಆದ ಜೀವರು ನಿನ್ನಂತೆ ಆಗಲಿ ॥ 3 ॥

ಆ ಸೂರ್ಯನಂತೆ ಸಂತರು ಜಗ ಬೆಳಗಿ ಹೋದರು
ವರುಣನಂತೆ ಜ್ಞಾನಸುಧೆಯ ಧರೆಗೆ ಸುರಿದರು
ಗುರುದೇವ ನಿಮ್ಮ ಜ್ಞಾನ ಬೋಧೆ ಮನದಿ ನಿಲ್ಲಲಿ ॥ 4 ॥



## ಶಬ್ದಗಳ ಅರ್ಥ

ಮಕರಂದ – ಹೂವುಗಳರಸ, ಮಧು ; ಶ್ವಾಸ – ಉಸಿರು ; ಮಡಕೆ – ಪಾತ್ರೆ.

★ ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಭೇದಭಾವ – .............. ; ಅನ್ಯ – ................

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ನಮ್ಮಲ್ಲಿ ಯಾವ ಭಾವನೆ ಮೂಡಬೇಕು ?

ಉತ್ತರ ..................................................................

ಆ) ಹೂವುಗಳು ಏನನ್ನು ಬೀರುತ್ತವೆ ?

ಉತ್ತರ ..................................................................

ಇ) ಸಂತರು ಏನು ಮಾಡಿದರು ?

ಉತ್ತರ ..................................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತು ಬರೆಯಿರಿ.**

ಅ) ..........................................................................

ಉತ್ತರ ..........................................................................

ಆ) ..........................................................................

ಉತ್ತರ ..........................................................................

**ಪ್ರಶ್ನೆ 3) ಕೆಳಗಿನ ಕವಿತೆಯ ಪರಿಚ್ಛೇದದ ಅರ್ಥ ಬರೆಯಿರಿ.**

ನಾವು ಮನೆಯ ಕಟ್ಟುವಾಗ ಭೂಮಿ ಜಾತಿ ಕೇಳಿತೆ
ನಾವು ಶ್ವಾಸ ಎಳೆಯುವಾಗ ಗಾಳಿ ಕುಲವ ಕೇಳಿತೆ
ಈ ಸೃಷ್ಟಿಯಲ್ಲಿ ಸರ್ವರು ಸಮನಾಗಿ ಬಾಳಲಿ

.........................................................................................

.........................................................................................

.........................................................................................

.........................................................................................

**ಪ್ರಶ್ನೆ 4) ಉದಾಹರಣೆಯಲ್ಲಿ ತೋರಿಸಿದಂತೆ ಶಬ್ದ ಗೋಪುರ ತಯಾರಿಸಿರಿ.**

**ಉದಾ :** ಜಾಣ
ಜಾಣ ರಾಮ
ಜಾಣ ರಾಮ ಹೋದನು
ಜಾಣ ರಾಮ ಶಾಲೆಗೆ ಹೋದನು
ಜಾಣ ರಾಮ ಗೆಳೆಯರೊಡನೆ ಶಾಲೆಗೆ ಹೋದನು

ಗೆಳೆಯ
.............
..................
.......................
..............................
..................................

**ಪ್ರಶ್ನೆ 5) ವಿವಿಧತೆಯಲ್ಲಿ ಏಕತೆ** - ಎಂಬ ವಿಷಯವನ್ನು ಕುರಿತು ವಿಸ್ತರಿಸಿ ಬರೆಯಿರಿ.

..................................................................................


..................................................................................

..................................................................................

..................................................................................

## ಐಕ್ಯಮತ ಲೋಕಹಿತ

**ಉಪಕ್ರಮ : ಈ ಚಿತ್ರಗಳನ್ನು ನಿರೀಕ್ಷಿಸಿರಿ. ಇವು ನಮಗೆ ಯಾವ ನೈತಿಕ ಬೋಧನೆ ಮಾಡತ್ತವೆ ಎಂಬುದನ್ನು ಬರೆಯಿರಿ.**



# ವ್ಯಾಕರಣ ವಿಭಾಗ

## ವಾಕ್ಯ ಪ್ರಕಾರಗಳು

ನಾವು ಮಾತಿನಿಂದ ಅನೇಕ ಕೆಲಸಗಳನ್ನುಮಾಡುತ್ತೇವೆ. ನಮ್ಮ ವಿಚಾರಗಳನ್ನು ಇತರರಿಗೆ ತಿಳಿಸುತ್ತೇವೆ. ನಾವು ಕಂಡದ್ದನ್ನು, ಕಲ್ಪಿಸಿದ್ದನ್ನು ಬಣ್ಣಿಸುತ್ತೇವೆ. ನಮ್ಮ ಭಾವನೆಗಳನ್ನು ವ್ಯಕ್ತಪಡಿಸುವೆವು. ಪ್ರಶ್ನೆಗಳನ್ನೂ ಕೇಳುವೆವು. ಅಪ್ಪಣೆ ಕೊಡುವೆವು. ಬಿನ್ನಹ ಮಾಡುವೆವು.

ಈ ಬೇರೆ ಬೇರೆ ಬಗೆಯ ಕೆಲಸಗಳನ್ನು ಮಾಡಲು ನಾವು ಬೇರೆ ಬೇರೆ ಬಗೆಯ ಮಾತುಗಳನ್ನು ಅಥವಾ ವಾಕ್ಯಗಳನ್ನು ಬಳಸುವೆವು.

**ಉದಾ :-** ನಕ್ಷತ್ರಗಳು ಮಿನುಗುತ್ತವೆ. ಬೆಕ್ಕು ಹಾಲು ಕುಡಿಯಿತು.
ಆಹಾ ! ಈ ಚಿತ್ರ ಎಷ್ಟು ಚೆನ್ನಾಗಿದೆ !
ಅಯ್ಯೋ ! ಎಷ್ಟು ನರಳುತ್ತಿದೆ ಈ ಮೂಕ ಪ್ರಾಣಿ !
ನೀವು ಪರೀಕ್ಷೆಗೆ ಸಿದ್ಧರಾಗಿದ್ದೀರಾ ?
ಮಳೆ ಹೇಗೆ ಬರುವದು ?
ಸ್ವಾಮಿ, ಬಡವರ ಮೇಲೆ ದಯೆ ತೋರಿಸಿರಿ.
ಹೀಗೆ ವಾಕ್ಯಗಳು ಬೇರೆ ಬೇರೆ ಬಗೆಯಾಗಿವೆ. ಮುಖ್ಯವಾಗಿ ವಾಕ್ಯಗಳಲ್ಲಿ ಐದ ಪ್ರಕಾರಗಳು.

(1) ಸಂಭಾವಾರ್ಥಕ (ನಿಶ್ಚಿತಾರ್ಥಕ) (2) ಪ್ರಶ್ನಾರ್ಥಕ (3) ಭಾವವಾಚಕ (ಉದ್ಗಾರವಾಚಕ)
(4) ಆಜ್ಞಾರ್ಥಕ ಅಥವಾ ವಿಧ್ಯರ್ಥಕ (5) ಸಂಭಾವನಾರ್ಥಕ

**(1) ಸಂಭವಾರ್ಥಕ (ನಿಶ್ಚಿತಾರ್ಥಕ) ವಾಕ್ಯ :** ಈ ವಾಕ್ಯಗಳನ್ನು ಓದಿರಿ.
ಸಿ.ವ್ಹಿ. ರಾಮನ್ನರು ಅನೇಕ ಶೋಧಗಳನ್ನು ಮಾಡಿದ್ದಾರೆ.
ಅವರು ನಿನಗೆ ಭವ್ಯ ಸ್ವಾಗತ ನೀಡುವರು.
ಹಾಲು ಪೌಷ್ಟಿಕ ಆಹಾರವಾಗಿದೆ.
ಪೃಥ್ವಿಯು ಸೂರ್ಯನ ಸುತ್ತಲು ತಿರುಗುತ್ತದೆ.

1ನೆಯ ವಾಕ್ಯವು ನಡೆದು ಹೋದ ಕ್ರಿಯೆಯನ್ನು ಹೇಳುವದು. 2ನೆಯ ವಾಕ್ಯವು ಭವಿಷ್ಯತ್ತಿನಲ್ಲಿ ಆಗುವ ಕೆಲಸವನ್ನು ಸೂಚಿಸುವದು. ''ಹಾಲು ಪೌಷ್ಟಿಕ ಆಹಾರವಾಗಿದೆ,'' ''ಪೃಥ್ವಿಯು ಸೂರ್ಯನ ಸುತ್ತಲು ತಿರುಗುವದು'' ಎಂಬ ವಾಕ್ಯಗಳು ಸದಾ ಸತ್ಯವಾದ ಸಂಗತಿಗಳನ್ನು ಹೇಳುವವು.

ಹೀಗೆ ವರ್ತಮಾನ (ನಡೆಯುತ್ತಿರುವ), ಭೂತ (ನಡೆದುಹೋದ), ಭವಿಷ್ಯತ್ (ನಡೆಯಲಿರುವ) ಕ್ರಿಯೆಗಳನ್ನು, ಸ್ಥಿತಿಗತಿಗಳನ್ನು ಸೂಚಿಸುವ ಮತ್ತು ನಿತ್ಯ ಸತ್ಯವಾದ ಸಂಗತಿಗಳನ್ನು ಖಚಿತವಾಗಿ ಹೇಳುವ ವಾಕ್ಯಗಳು ಸಂಭಾವಾರ್ಥಕ ಇಲ್ಲವೆ ನಿಶ್ಚಿತಾರ್ಥಕ ವಾಕ್ಯಗಳು.

**(2) ಪ್ರಶ್ನಾರ್ಥಕ ವಾಕ್ಯ :-** ಈ ವಾಕ್ಯಗಳನ್ನು ಓದಿರಿ.

ಪಾಂಡವರ ತಂದೆ ಯಾರು ?

ನಿನಗೆ ಸಂಗೀತದಲ್ಲಿ ಅಭಿರುಚಿ ಇದೆಯೆ ?

ಮೀನುಗಳು ಹೇಗೆ ಉಸಿರಾಡಿಸುವವು ?

ಮಾಮರುಗಳು ಯಾವಾಗ ಚಿಗುರುವವು ?

ಈ ನಾಲ್ಕು ವಾಕ್ಯಗಳು ಯಾವದೊಂದು ಮಾತನ್ನು ಹೇಳುವದಿಲ್ಲ , ಆದರೆ ಇವು ಪ್ರಶ್ನೆಯನ್ನು ಕೇಳುವುವು. ಇಂತಹ ವಾಕ್ಯಗಳು ಪ್ರಶ್ನಾರ್ಥಕ ವಾಕ್ಯಗಳು.

**(3) ಭಾವವಾಚಕ (ಉದ್ಗಾರವಾಚಕ) ವಾಕ್ಯ : -** ಕೆಳಗಿನ ವಾಕ್ಯಗಳನ್ನು ಓದಿರಿ.

ಅಬ್ಬಾ ! ಭೀಮನು ಎಂಥ ಪರಾಕ್ರಮಿ !

ಆಹಾ ! ಎಂಥ ಬೆಡಗಿನ ನಾಡಿದು !

ಪಾಪ ! ಆ ಕುರುಡನ ಅವಸ್ಥೆ ನೋಡಲಾಗದು !

ಇಲ್ಲಿಯ ಪ್ರತಿಯೊಂದು ವಾಕ್ಯವು ನಮ್ಮ ಮನಸ್ಸಿನಲ್ಲಿ ಉಂಟಾಗುವ ಭಾವನೆಯನ್ನು ಸೂಚಿಸುವದು.

1ನೆಯ ವಾಕ್ಯವು ಆಶ್ಚರ್ಯ ಹಾಗೂ ಅದ್ಭುತ ಭಾವನೆಯನ್ನು ಸೂಚಿಸುವದು. ಹಾಗೆಯೆ 2 ಮತ್ತು 3 ನೆಯ ವಾಕ್ಯಗಳಲ್ಲಿಆನಂದ ಮತ್ತು ಕರುಣೆಯ ಭಾವನೆಗಳು ವ್ಯಕ್ತವಾಗಿವೆ. ಹೀಗೆ ಭಾವನೆಗಳನ್ನು ವ್ಯಕ್ತಪಡಿಸುವ ವಾಕ್ಯಗಳು ಭಾವವಾಚಕ ವಾಕ್ಯಗಳು.

ಮನಸ್ಸಿನಲ್ಲಿ ಉಂಟಾದ ಭಾವನೆಗಳು ಶಬ್ದಗಳ ಮೂಲಕ ಹೊರಹೊಮ್ಮುವದಕ್ಕೆ ಉದ್ಗಾರ ಎಂದು ಹೇಳುವರು. ಆದುದರಿಂದ ಇವಕ್ಕೆ ಉದ್ಗಾರವಾಚಕ ವಾಕ್ಯಗಳೆಂದೂ ಹೇಳುವರು. ಉದ್ಗಾರಗಳು ಸಂತೋಷ, ಭಯ, ಕರುಣೆ, ಬೀಭತ್ಸ, ಮುಂತಾದ ಭಾವನೆಗಳನ್ನು ವ್ಯಕ್ತಪಡಿಸುವು.

**(4) ಆಜ್ಞಾರ್ಥಕ (ವಿಧ್ಯರ್ಥಕ) ವಾಕ್ಯ :**

ಪಂದ್ಯಾಟ ಪ್ರಾರಂಭವಾಗಲಿ,

ಇಲ್ಲಿಂದ ಹೊರಗೆ ಹೋಗು.

ಜನರಿಗೆ ಕಲ್ಯಾಣವಾಗಲಿ.

ದಯಮಾಡಿ ನನ್ನ ಶಿಕ್ಷಣಕ್ಕೆ ನೆರವು ನೀಡಿರಿ.

ಮೇಲಿನ ವಾಕ್ಯಗಳಲ್ಲಿ :

1 ಮತ್ತು

2ನೆಯ ವಾಕ್ಯಗಳು ಅಪ್ಪಣೆಯನ್ನು ಸೂಚಿಸುವವು.

3ನೆಯ ವಾಕ್ಯವು ಇಚ್ಛೆಯನ್ನು (ಆಶೀರ್ವದಿಸುವ) ಸೂಚಿಸುವದು.

4ನೇ ವಾಕ್ಯದಲ್ಲಿ ಬೇಡಿಕೆ ಇದೆ.

ಹೀಗೆ ಅಪ್ಪಣೆ ಕೊಡುವದು, ಆಶೀರ್ವದಿಸುವದು, ಬೇಡಿಕೊಳ್ಳುವದು ಮುಂತಾದ ಕ್ರಿಯೆಗಳನ್ನು ಹೇಳುವ ವಾಕ್ಯಗಳು (ವಿಧ್ಯರ್ಥಕ) ಆಜ್ಞಾರ್ಥಕ ವಾಕ್ಯಗಳು.

### (5) ಸಂಭಾವನಾರ್ಥಕ ವಾಕ್ಯ

(1) ಪಂಜರದ ಬಾಗಿಲನ್ನು ತೆರೆದಿಟ್ಟರೆ ಹಕ್ಕಿ ಹಾರಿ ಹೋದೀತು.

(2) ಅಧಿಕಾರಿಗಳು ಎರಡು ದಿನಗಳಲ್ಲಿ ಬಂದಾರು.

(3) ಅವನು ಪ್ರಥಮ ವರ್ಗದಲ್ಲಿ ತೇರ್ಗಡೆ ಆದಾನು.

ಇಂಥ ವಾಕ್ಯಗಳು ಅನಿಶ್ಚಿತತೆ, ಸಂಶಯ ಇಲ್ಲವೆ ತರ್ಕ ಇವುಗಳನ್ನು ಸೂಚಿಸುವವು. ಕ್ರಿಯೆ ಆಗಬಹುದೆಂಬ ಅನುಮಾನ ಅಥವಾ ಆಗುವದೋ ಇಲ್ಲವೋ ಎಂಬ ಬಗ್ಗೆ ಅನಿಶ್ಚಿತತೆಯನ್ನು ತೋರಿಸು ಇಂಥ ವಾಕ್ಯಗಳು ಸಂಭಾವನಾರ್ಥಕ ವಾಕ್ಯಗಳು.

ವಾಕ್ಯ ಪ್ರಕಾರಗಳು (ಮುಂದುವರಿದುದು)

ಕೆಳಗೆ ಎರಡೆರಡು ವಾಕ್ಯಗಳ ಒಂದೊಂದು ಜೊತೆ ಇದೆ. ಅವನ್ನು ಓದಿರಿ :

1) ಚಂದ್ರನು ಪೃಥ್ವಿಯ ಸುತ್ತಲು ತಿರುಗುವನು ; ಪೃಥ್ವಿಯು ಚಂದ್ರನ ಸುತ್ತಲು ತಿರುಗುವುದಿಲ್ಲ.
2) ರೋಗಿಯು ಔಷಧದಿಂದ ಗುಣ ಹೊಂದಿದನು. ರೋಗಿಯು ಔಷಧದಿಂದ ಗುಣ ಹೊಂದಲಿಲ್ಲ.
3) ಮುಂದಿನ ವಾರದಲ್ಲಿ ನಮ್ಮ ಪರೀಕ್ಷೆ ಇದೆ. ಮುಂದಿನ ವಾರದಲ್ಲಿ ನಮ್ಮ ಪರೀಕ್ಷೆ ಇಲ್ಲ.
4) ಕಳ್ಳನು ಸಿಕ್ಕನೇ ? ಕಳ್ಳನು ಸಿಗಲಿಲ್ಲವೇ ?
5) ಈ ಕಥೆಯನ್ನು ನೀವು ಓದುವಿರಾ ? ಈ ಕಥೆಯನ್ನು ನೀವು ಓದುವದಿಲ್ಲವೇ ?
6) ನಾಳೆ ಮಳೆ ಬಂದೀತು. ನಾಳೆ ಮಳೆ ಬರಲಿಕ್ಕಿಲ್ಲ.
7) ಅವನು ಪಂಥವನ್ನು ಗೆದ್ದಾನು. ಅವನು ಪಂಥವನ್ನು ಗೆಲ್ಲಲಿಕ್ಕಿಲ್ಲ.
8) ಇತರರಿಗೆ ಸಹಾಯ ಮಾಡಿರಿ. ಕಂಡ ಕಂಡವರಿಗೆ ಸಹಾಯ ಮಾಡಬೇಡಿರಿ.
9) ಪಾಠವನ್ನು ಚೆನ್ನಾಗಿ ಕಲಿ. ಕೆಟ್ಟತನವನ್ನು ಕಲಿಯಬೇಡ.

ಒಂದನೆಯ ಜೊತೆಯಲ್ಲಿಯ ಎರಡು ವಾಕ್ಯಗಳನ್ನು ನೋಡಿರಿ :-

ಚಂದ್ರನು ಪೃಥ್ವಿಯ ಸುತ್ತಲು ತಿರುಗುವನು ಎಂಬುದು ಸಂಭವಾರ್ಥಕ ವಾಕ್ಯವಾಗಿದೆ. ಅದರ ಜೊತೆಗೆ ಇರುವ ವಾಕ್ಯವು ಸಂಭವಾರ್ಥಕ ವಾಕ್ಯವಿದ್ದರೂ ಇಲ್ಲ ಎಂಬ ನಿಷೇಧಾರ್ಥವನ್ನು ಸೂಚಿಸುವದು.

ಎರಡನೆಯ ಜೊತೆಯಲ್ಲಿಯೂ ಹೀಗೆಯೇ ಒಂದು ಸಂಭವಾರ್ಥಕ ವಾಕ್ಯ ಮತ್ತು ಅದರ ನಿಷೇಧಾರ್ಥಕ ರೂಪದ ವಾಕ್ಯ ಹೀಗೆ ಎರಡು ವಾಕ್ಯಗಳಿವೆ.

ನಾಲ್ಕು ಮತ್ತು ಐದನೆಯ ಜೊತೆಗಳಲ್ಲಿ ಪ್ರಶ್ನೆಗಳಿವೆ. ಎರಡೂ ಜೊತೆಗಳಲ್ಲಿ ಮೊದಲಿರುವ ವಾಕ್ಯಗಳು ಪ್ರಶ್ನಾರ್ಥಕ ವಾಕ್ಯಗಳು. ಅವುಗಳ ನಿಷೇಧಾರ್ಥಕ ರೂಪಗಳನ್ನು ಅವುಗಳ ಜೊತೆಗೆ ಕೊಡಲಾಗಿದೆ.

ಹೀಗೆಯೇ ಉಳಿದ ಜೊತೆಗಳಲ್ಲಿ ಸಂಭಾವನಾರ್ಥಕ ಹಾಗೂ ಆಜ್ಞಾರ್ಥಕ ವಾಕ್ಯಗಳನ್ನೂ ಅವುಗಳ ಜೊತೆಗೆ ಅವುಗಳ ನಿಷೇಧಾರ್ಥಕ ರೂಪಗಳನ್ನು ಕೊಟ್ಟಿದೆ. ಅವುಗಳನ್ನು ಚೆನ್ನಾಗಿ ಗಮನಿಸಿರಿ.

ಉದ್ಗಾರವಾಚಕ ವಾಕ್ಯಗಳನ್ನು ಬಿಟ್ಟು ಉಳಿದೆಲ್ಲ ಪ್ರಕಾರದ ವಾಕ್ಯಗಳಿಗೆ ನಿಷೇಧಾರ್ಥಕ ರೂಪಗಳನ್ನು ಕೊಡಬಹುದು.

## ಅಭ್ಯಾಸ

**1) ಕೆಳಗಿನ ವಾಕ್ಯಗಳಲ್ಲಿ ಪ್ರತಿಯೊಂದು ಯಾವ ಪ್ರಕಾರದ ವಾಕ್ಯವೆಂಬುದನ್ನುಹೇಳಿರಿ :-**

1) ಗಡಿಗೆಗಳನ್ನು ಯಾರು ತಯಾರಿಸುವರು ?

ಉತ್ತರ ..........................................................

2) ನೀವು ಇಲ್ಲಿಂದ ತೊಲಗಿರಿ.

ಉತ್ತರ ..........................................................

3) ಸೂರ್ಯಗ್ರಹಣವನ್ನು ಬರಿ ಕಣ್ಣಿನಿಂದ ನೋಡಬಾರದು.

ಉತ್ತರ ..........................................................

4) ಅಯ್ಯೋ ! ಅವನೆಷ್ಟು ಸಂಕಟ ಪಡುತ್ತಾನೆ !

ಉತ್ತರ ..........................................................

5) ವಾಲ್ಮೀಕಿಯು ರಾಮಾಯಣವನ್ನು ರಚಿಸಿದನು.

ಉತ್ತರ ..........................................................

6) ಈ ಸಲ ಆ ಜಟ್ಟಿಯು ಗೆದ್ದಾನು.

ಉತ್ತರ ..........................................................

**2) ಕೆಳಗಿನ ವಾಕ್ಯಗಳನ್ನು ನಿಷೇಧಾರ್ಥಕ ವಾಕ್ಯಗಳನ್ನಾಗಿ ಮಾಡಿರಿ:**

1) ಅವನಿಗೆ ಪಾರಿತೋಷಕ ದೊರಕಿತೇ ?

ಉತ್ತರ ..........................................................

2) ಮನುಷ್ಯನು ಕಲ್ಲಿನಂತಿರಬೇಕು.

ಉತ್ತರ ..........................................................

3) ಈ ಹಣ್ಣು ಬಹಳ ರುಚಿ ಇದೆ.

ಉತ್ತರ ..........................................................

4) ದುಡಿಮೆಯಿಂದ ಏನು ಫಲ ?

ಉತ್ತರ ..........................................................

5) ಕರು ಓಡಿ ಹೋದಿತು.

ಉತ್ತರ ..........................................................

# ಸಂಧಿ

## ಸಂಸ್ಕೃತ ಸಂಧಿ

ಸಂಸ್ಕೃತ ಹಾಗೂ ಸಂಸ್ಕೃತ ಪದಗಳು ಸೇರಿ ಆಗುವ ಸಂಧಿಗಳಿಗೆ ಸಂಸ್ಕೃತ ಸಂಧಿ ಎನ್ನುವರು.
ಕನ್ನಡ ಸಂಧಿಗಳಲ್ಲಿಯ ಹಾಗೆಯೇ ಸಂಸ್ಕೃತ ಸಂಧಿಗಳಲ್ಲಿಯೂ ಎರಡ ಭಾಗಗಳನ್ನು ಮಾಡಬಹುದು.

1) ಸ್ವರ ಸಂಧಿ
2) ವ್ಯಂಜನ ಸಂಧಿ

**ಸ್ವರ ಸಂಧಿ :** ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವುದಕ್ಕೆ **ಸ್ವರ ಸಂಧಿ** ಎನ್ನುವರು. ಅಂದರೆ ಮೊದಲನೆಯ ಪದದ ಕೊನೆಯ ಅಕ್ಷರ ಸ್ವರವಿದ್ದು ಎರಡನೆಯ ಪದದ ಮೊದಲನೆಯ ಅಕ್ಷರವು ಸ್ವರವಾಗಿರುತ್ತದೆ.

**ಉದಾ : - ಗುರು + ಉಪದೇಶ** = ಗುರೂಪದೇಶ

ಸಂಸ್ಕೃತ ಸ್ವರ ಸಂಧಿಗಳಲ್ಲಿ ನಾಲ್ಕು ಪ್ರಕಾರಗಳಿವೆ.

1) ಸವರ್ಣದೀರ್ಘಸಂಧಿ
2) ಗುಣಸಂಧಿ
3) ವೃದ್ಧಿ ಸಂಧಿ
4) ಯಣ್ ಸಂಧಿ

### 1) ಸವರ್ಣದೀರ್ಘ ಸಂಧಿ :

ಸವರ್ಣ ಸ್ವರಗಳು ಒಂದರ ಮುಂದೆ ಒಂದು ಬಂದು ಅವೆರಡೂ ಸೇರಿ ಸಂಧಿಯಾದಾಗ ಅವೆರಡರ ಸ್ಥಾನದಲ್ಲಿ ಅದೇ ಜಾತಿಯ ದೀರ್ಘಸ್ವರವು ಆದೇಶವಾಗಿ ಬರುವುದಕ್ಕೆ **ಸವರ್ಣದೀರ್ಘ** ಎಂದು ಹೆಸರು.

[ಅ + ಆ = ಆ, ಅ + ಅ = ಆ, ಆ + ಅ = ಆ. ಇ + ಈ = ಈ, ಇ + ಇ = ಈ, ಈ+ ಇ = ಈ ಹೀಗೆ]

**ಉದಾ -** ಸುರ + ಅಸುರ = ಸುರಾಸುರ
ಮಹಾ + ಆತ್ಮ = ಮಹಾತ್ಮ
ಗಿರಿ + ಈಶ = ಗಿರೀಶ
ಮುನಿ + ಇಂದ್ರ = ಮುನೀಂದ್ರ
ಊರು + ಊರು = ಊರೂರು

**2) ಗುಣಸಂಧಿ :**

ಅಆ ಕಾರಗಳಿಗೆ ಇಈ ಕಾರಗಳು ಪರವಾದರೆ 'ಏ' ಕಾರವೂ
ಅಆ ಕಾರಗಳಿಗೆ ಉಊ ಕಾರಗಳು ಪರವಾದರೆ 'ಓ' ಕಾರವೂ
ಅಆ ಕಾರಗಳಿಗೆ ಋ ಕಾರ ಪರವಾದರೆ 'ಅರ್' ಕಾರವೂ
ಆದೇಶವಾಗಿ ಬರುವುದಕ್ಕೆ **ಗುಣಸಂಧಿ** ಎನ್ನುವರು.

**ಉದಾ -** ಗಣ + ಈಶ = ಗಣೇಶ
ದೇವ + ಇಂದ್ರ = ದೇವೇಂದ್ರ
ಲಂಬ + ಉದರ = ಲಂಬೋಧರ
ಪರ + ಉಪಕಾರ = ಪರೋಪಕಾರ
ದೇವ + ಋಷಿ = ದೇವರ್ಷಿ
ಮಹಾ + ಋಷಿ = ಮಹರ್ಷಿ

**3) ವೃದ್ಧಿ ಸಂಧಿ :**

ಅಆ ಕಾರಗಳ ಮುಂದೆ 'ಏಐ' ಕಾರಗಳು ಪರವಾದರೆ 'ಐ' ಕಾರವೂ, ಅಆ ಕಾರಗಳ ಮುಂದೆ ಓ ಔ ಕಾರಗಳು ಪರವಾದರೆ 'ಔ' ಕಾರವೂ ಆದೇಶವಾಗಿ ಬರುವುದಕ್ಕೆ **ವೃದ್ಧಿ ಸಂಧಿ** ಎನ್ನುವರು.

**ಉದಾ -** ಏಕ + ಏಕ = ಏಕೈಕ
ಲೋಕ + ಏಕ = ಲೋಕೈಕ
ವನ + ಔಷಧಿ = ವನೌಷಧಿ
ಘನ + ಔದಾರ್ಯ = ಘನೌದಾರ್ಯ

**4) ಯಣ್ ಸಂಧಿ :**

ಇ ಈ ಕಾರಗಳ ಮುಂದೆ ಸವರ್ಣವಲ್ಲದ ಸ್ವರ ಬಂದರೆ ಇಈ ಕಾರಗಳಿಗೆ 'ಯ' ಕಾರವೂ, ಉಊ ಕಾರಗಳ ಮುಂದೆ ಸವರ್ಣವಲ್ಲದ ಸ್ವರ ಬಂದರೆ ಉಊ ಕಾರಗಳಿಗೆ 'ವ' ಕಾರವೂ, ಋ ಕಾರಕ್ಕೆ 'ರ' ಕಾರಾದೇಶವಾಗಿ ಬರುವುದಕ್ಕೆ **ಯಣ್ ಸಂಧಿ** ಎನ್ನುವರು.

**ಉದಾ -** ಅತಿ + ಅಂತ = ಅತ್ಯಂತ
ಅತಿ + ಉತ್ತಮ = ಅತ್ಯುತ್ತಮ
ಗುರು + ಆಜ್ಞೆ = ಗುರ್ವಾಜ್ಞೆ
ಮನು + ಅಂತರ = ಮನ್ವಂತರ
ಪಿತೃ +ಅರ್ಜಿತ = ಪಿತ್ರಾರ್ಜಿತ
ಮಾತೃ + ಅಂಶ = ಮಾತ್ರಾಂಶ

## ಸಮಾಸ

ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳ ಅರ್ಥ ಕೆಡದಂತೆ ಮಧ್ಯದೊಳಗಿನ ವಿಭಕ್ತಿ ಪ್ರತ್ಯಯವು ಲೋಪವಾಗಿ ಒಂದೇ ಪದವಾಗುವದಕ್ಕೆ **ಸಮಾಸ** ಎನ್ನುವರು. ಸಾಮಾನ್ಯವಾಗಿ ಎರಡೆರಡು ಪದಗಳ ಸಮಾಸಗಳು ಉಂಟಾಗುತ್ತವೆ. ಇಂಥ ಸಮಾಸದ ಮೊದಲಿನ ಪದಕ್ಕೆ **ಪೂರ್ವಪದ,** ಎರಡನೆಯ ಪದಕ್ಕೆ **ಉತ್ತರಪದ** ಎಂದು ಹೇಳುವರು.

**ಉದಾ :** ಬಿಳಿದು + ತಾವರೆ = ಬೆಳ್ದಾವರೆ

ಹುಲ್ಲಿನ + ಹಾಸಿಗೆ = ಹುಲ್ಲುಹಾಸಿಗೆ

ತತ್ಪುರುಷ ಸಮಾಸ :

ಎರಡು ನಾಮಪದಗಳು ಸಮಸ್ತ ಪದವಾಗುವಾಗ ಉತ್ತರ ಪದದಲ್ಲಿರುವ ಅರ್ಥವೇ ಪ್ರಧಾನವಾಗಿರುವ ಸಮಾಸಕ್ಕೆ **ತತ್ಪುರುಷ ಸಮಾಸ** ಎನ್ನುವರು.

ಈ ಸಮಾಸದಲ್ಲಿ ತೃತೀಯಾ, ಚತುರ್ಥಿ, ಪಂಚಮಿ, ಷಷ್ಠಿ ಹಾಗೂ ಸಪ್ತಮಿ ಪ್ರತ್ಯಯಗಳು ಲೋಪವಾಗುತ್ತವೆ.

**ಉದಾ :** ಧನದ + ಲೋಭ = ಧನಲೋಭ

ಮಾವಿನ + ಮರ = ಮಾಮರ

**ಕರ್ಮಧಾರಯ ಸಮಾಸ :**

ಪೂರ್ವ ಮತ್ತು ಉತ್ತರ ಪದಗಳು ಲಿಂಗ, ವಚನ, ವಿಭಕ್ತಿಗಳಿಂದ ಸಮಾನವಾಗಿದ್ದು ವಿಶೇಷಣ ವಿಶೇಷ್ಯ ಸಂಬಂಧದಿಂದ ಕೂಡಿ ಆಗುವ ಸಮಾಸಕ್ಕೆ **ಕರ್ಮಧಾರಯ ಸಮಾಸ** ಎನ್ನುವರು.

**ಉದಾ :** ಕಿರಿದಾದ + ಕೊರಲು = ಕಿರಿಗೊರಲು

ಕೆಂಪಾದ + ಮಣ್ಣು = ಕೆಮ್ಮಣ್ಣು

**ದ್ವಂದ್ವ ಸಮಾಸ :**

ಎರಡು ಅಥವಾ ಎರಡಕ್ಕಿಂತ ಹೆಚ್ಚು ನಾಮಪದಗಳು ಸೇರಿ ಎಲ್ಲ ಪದಗಳ ಅರ್ಥಗಳೂ ಪ್ರಧಾನವಾಗಿರುವ ಸಮಾಸಕ್ಕೆ **ದ್ವಂದ್ವ ಸಮಾಸ** ಎನ್ನುವರು.

**ಉದಾ :** ತಾಯಿಯೂ + ತಂದೆಯೂ = ತಾಯಿತಂದೆ

ಗಿಡಗಳಲ್ಲಿ + ಬಳ್ಳಿಗಳಲ್ಲಿ = ಗಿಡಬಳ್ಳಿಗಳಲ್ಲಿ

ರಾಮನೂ + ಲಕ್ಷ್ಮಣನೂ = ರಾಮಲಕ್ಷ್ಮಣರು

## ಅಭ್ಯಾಸ

**1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

1) ಸಮಾಸ ಎಂದರೇನು ?

..............................................................................................

..............................................................................................

2) ಎರಡು ಅಥವಾ ಹೆಚ್ಚು ಪದಗಳು ಸೇರಿದಾಗ ಆಗುವ ಸಮಾಸ ಯಾವುದು ?

..............................................................................................

..............................................................................................

3) ಕೆಳಗಿನ ಶಬ್ದಗಳನ್ನು ವಿಗ್ರಹಿಸಿ ಸಮಾಸದ ಹೆಸರು ಬರೆಯಿರಿ.

ಕಗ್ಗತ್ತಲೆ .........................

ಭೀಮಾರ್ಜುನ .........................

ಹುಲ್ಲುಹಾಸಿಗೆ .........................

## ಕ್ರಿಯಾಪದ

**ಕೆಳಗಿನ ವಾಕ್ಯಗಳನ್ನು ಓದಿರಿ :**

1. ನಾಯಿ ಓಡುತ್ತದೆ.
2. ಗಿಳಿ ಹಣ್ಣನ್ನು ತಿಂದಿತು.
3. ನಾವು ಹಾಡುಗಳನ್ನು ಕೇಳುವೆವು.

ಈ ವಾಕ್ಯಗಳಲ್ಲಿ ಓಡುತ್ತದೆ, ತಿಂದಿತು, ಕೇಳುವೆವು ಎಂಬವು ಕ್ರಿಯಾಪದಗಳು, **ಓಡು, ತಿನ್ನು, ಕೇಳು** ಎಂಬ ಮೂಲ ಶಬ್ದಗಳಿಂದ ಉಂಟಾಗಿವೆ. ಈ ಮೂಲ ಶಬ್ದಗಳಿಗೆ ಧಾತುಗಳು ಎನ್ನುವರು. ಧಾತುಗಳಿಗೆ **ಆಖ್ಯಾತ ಪ್ರತ್ಯಯಗಳು** ಸೇರಿದಾಗ ಕ್ರಿಯಾಪದಗಳಾಗುವವು. ಈ ಆಖ್ಯಾತ ಪ್ರತ್ಯಯಗಳಿಗೆ ಕ್ರಿಯಾವಿಭಕ್ತಿ ಪ್ರತ್ಯಗಳೆಂದೂ ಹೇಳುವದುಂಟು.

## ಕ್ರಿಯಾಪದಗಳ ಪ್ರಕಾರಗಳು

**ಕಾಲಾರ್ಥಕ (ಸಂಭಾವಾರ್ಥಕ) ಕ್ರಿಯಾಪದಗಳು :**

1. ನದಿಯು ವೇಗವಾಗಿ ಹರಿಯುತ್ತದೆ.
2. ಟಿಳಕರು ಗೀತಾರಹಸ್ಯ ಎಂಬ ಪುಸ್ತಕವನ್ನು ಬರೆದರು.
3. ನನ್ನ ಮಾವ ನಾಳೆ ದಿಲ್ಲಿಗೆ ಹೋಗುವನು.

**ಹರಿಯುತ್ತದೆ, ಬರೆದರು, ಹೋಗುವನು** ಎಂಬ ಕ್ರಿಯಾಪದಗಳು, ಕ್ರಿಯೆ ಈಗ ನಡೆಯುತ್ತದೆ, ಇಲ್ಲವೆ ಹಿಂದೆ ನಡೆದು ಹೋಗಿದೆ, ಇಲ್ಲವೆ ಮುಂದೆ ನಡೆಯುವದು ಎಂಬುದನ್ನು ಸೂಚಿಸುತ್ತವೆ.

ಈಗ ನಡೆಯುವ ಕ್ರಿಯೆಯನ್ನು ಸೂಚಿಸುವ ಕ್ರಿಯಾಪದಗಳು**ವರ್ತಮಾನ ಕಾಲದ** ಕ್ರಿಯಾಪದಗಳು.

ನಡೆದು ಹೋದ ಕ್ರಿಯೆಯನ್ನು ಸೂಚಿಸುವ ಕ್ರಿಯಾಪದಗಳು**ಭೂತಕಾಲದ** ಕ್ರಿಯಾಪದಗಳು

ಕ್ರಿಯೆ ಮುಂದೆ ನಡೆಯಲಿದೆ ಎಂದು ಹೇಳುವ ಕ್ರಿಯಾಪದಗಳು**ಭವಿಷ್ಯತ್ ಕಾಲದ** ಕ್ರಿಯಾಪದಗಳು.

ಹೀಗೆ ಕ್ರಿಯೆಯು ನಡೆಯುತ್ತಿರುವ, ನಡೆದ, ನಡೆಯಲಿರುವ ಅಥವಾ ಸಂಭವಿಸುವ ಕಾಲವನ್ನು ತಿಳಿಸುವ ಕ್ರಿಯಾಪದಗಳಿಗೆ ಕಾಲಾರ್ಥಕ ಅಥವಾ ಸಂಭಾವಾರ್ಥಕ ಕ್ರಿಯಾಪದಗಳು ಎನ್ನುವರು.

ಕಾಲಾರ್ಥಕ ಕ್ರಿಯಾಪದಗಳಿಗೆ ಸೇರುವ ಆಖ್ಯಾತ ಪ್ರತ್ಯಯಗಳನ್ನು ಕೆಳಗೆ ಕೊಡಲಾಗಿದೆ. ಅವನ್ನು ಗಮನದಲ್ಲಿಡಿರಿ.

## ವರ್ತಮಾನಕಾಲ : ಆಖ್ಯಾತ ಪ್ರತ್ಯಯಗಳು

| ಪುರುಷ | | ಏಕವಚನ | ಬಹುವಚನ |
|---|---|---|---|
| ಉತ್ತಮ | | ಏನೆ | ಏವೆ |
| ಮಧ್ಯಮ | | ಈ, ಈಯೆ | ಈರಿ |
| ಪ್ರಥಮ | ಪುಲ್ಲಿಂಗ | ಆನೆ | ಆರೆ |
| | ಸ್ತ್ರೀಲಿಂಗ | ಆಳೆ | ಆರೆ |
| | ನಪುಂಸಕಲಿಂಗ | ಅದೆ, ಇದೆ | ಅವೆ, ಇವೆ |

''ಮಾಡು'' ಧಾತುವಿನ ವರ್ತಮಾನ ಕಾಲದ ರೂಪಗಳು ಕೆಳಗಿನಂತಿವೆ :

| | | ಏಕವಚನ | ಬಹುವಚನ |
|---|---|---|---|
| ಉ. ಪು | | ಮಾಡುತ್ತೇನೆ | ಮಾಡುತ್ತೇವೆ |
| ಮ. ಪು | | ಮಾಡುತ್ತೀ | ಮಾಡುತ್ತೀರಿ |
| | | ಮಾಡುತ್ತೀಯೆ | |
| ಪ್ರ . ಪು | ಪು. | ಮಾಡುತ್ತಾನೆ | ಮಾಡುತ್ತಾರೆ |
| | ಸ್ತ್ರೀ | ಮಾಡುತ್ತಾಳೆ | ಮಾಡುತ್ತಾರೆ |
| | ನ. | ಮಾಡುತ್ತದೆ, | ಮಾಡುತ್ತವೆ, |
| | | ಮಾಡುತ್ತಿದೆ | ಮಾಡುತ್ತಿವೆ |

ವರ್ತಮಾನಕಾಲದಲ್ಲಿ ಧಾತುವಿಗೂ ಆಖ್ಯಾತ ಪ್ರತ್ಯಯಕ್ಕೂ ನಡುವೆ 'ಉತ್ತ'' ಎಂಬುದು ಆಗಮವಾಗಿ ಬರುತ್ತದೆ. ಮಾಡು + ಉತ್ತ + ಆನೆ = ಮಾಡುತ್ತಾನೆ.

## ಭೂತಕಾಲ : ಆಖ್ಯಾತ ಪ್ರತ್ಯಗಳು

| | | | |
|---|---|---|---|
| ಉ. ಪು. | | ಎನು | ಎವು |
| ಮ. ಪು | | ಎ | ಇರಿ |
| ಪ್ರ. ಪು. | ಪು. | ಅನು | ಅರು |
| | ಸ್ತ್ರೀ | ಅಳು | ಅರು |
| | ನ. | ಇತು | ಅವು, ಉವು |

ಭೂತಕಾಲದಲ್ಲಿ ಧಾತುವಿಗೂ ಆಖ್ಯಾತ ಪ್ರತ್ಯಯಕ್ಕೂ ನಡುವೆ 'ದ' ಎಂಬ ಅಕ್ಷರ ಬರುವದು. (ಆಗಮವಾಗುವುದು), - ನಡೆ + ದ + ಎನು = ನಡೆದೆನು. ನಡೆ + ದ + ಅನು = ನಡೆದನು.

ಹೀಗೆ 'ದ' ಅಕ್ಷರ ಬರುವಾಗ ಧಾತುಗಳು ಕೆಲವು ಬದಲಾವಣೆಗಳನ್ನು ಹೊಂದುವವು. ಕೆಲವನ್ನು ಇಲ್ಲಿ ಕೊಟ್ಟಿದೆ.

**ಗಮನಿಸಿರಿ :-**

ಮಾಡು -- ಮಾಡಿದ. ಇದರಂತೆ ನೋಡು, ಓಡು, ಬೇಡು ಇತ್ಯಾದಿ. ನಗು - ನಕ್ಕ. ಇದರಂತೆ ಹೋಗು, ಮಿಗು ಇತ್ಯಾದಿ.

ಕೊಡು -- ಕೊಟ್ಟ, ಇದರಂತೆ ಬಿಡು, ಪಡು, ಇಡು, ನೆಡು ಇತ್ಯಾದಿ.

''ಮಾಡು'' ಧಾತುವಿನ ಭೂತಕಾಲದ ರೂಪಗಳು :-

| | | ಏಕವಚನ | ಬಹುವಚನ |
|---|---|---|---|
| ಉ. ಪು | | ಮಾಡಿದೆನು | ಮಾಡಿದೆವು |
| ಮ. ಪು | | ಮಾಡಿದೆ | ಮಾಡಿದಿರಿ |
| ಪ್ರ . ಪು | ಪು. | ಮಾಡಿದನು | ಮಾಡಿದರು |
| | ಸ್ತ್ರೀ | ಮಾಡಿದಳು | ಮಾಡಿದರು |
| | ನ. | ಮಾಡಿತು | ಮಾಡಿದವು, ಮಾಡಿದುವು |

**ಭವಿಷ್ಯತ್‌ಕಾಲ : ಆಖ್ಯಾತ ಪ್ರತ್ಯಯಗಳು :**

| | | ಏಕವಚನ | ಬಹುವಚನ |
|---|---|---|---|
| ಉ. ಪು. | | ಎನು | ಎವು |
| ಮ. ಪು | | ಎ. ಇ. | ಇರಿ |
| ಪ್ರ. ಪು. | ಪು. | ಅನು | ಅರು |
| | ಸ್ತ್ರೀ | ಅಳು | ಅರು |
| | ನ. | ಅದು, ಉದು | ಅವು, ಉವು |

''ಮಾಡು'' ಧಾತುವಿನ ಭವಿಷ್ಯತ್‌ಕಾಲದ ರೂಪಗಳು :-

| | | ಏಕವಚನ | ಬಹುವಚನ |
|---|---|---|---|
| ಉ. ಪು. | | ಮಾಡುವೆನು | ಮಾಡುವೆವು |
| ಮ. ಪು | | ಮಾಡುವೆ, ಮಾಡುವಿ | ಮಾಡುವಿರಿ |
| ಪ್ರ. ಪು. | ಪು. | ಮಾಡುವನು | ಮಾಡುವರು |
| | ಸ್ತ್ರೀ | ಮಾಡುವಳು | ಮಾಡುವರು |
| | ನ. | ಮಾಡುವದು, | ಮಾಡುವವು, |

ಭವಿಷ್ಯತ್ ಕಾಲದಲ್ಲಿ 'ಉವ' ಆಗಮವಾಗುವದು.

ನಡೆ + ಉವ + ಅನು = ನಡೆಯುವನು.

ಉತ್ತ, ದ, ಉವ ಈ ಪ್ರತ್ಯಯಗಳಿಗೆ ಕಾಲ ಪ್ರತ್ಯಯಗಳೆನ್ನುವರು.

ಧಾತು + ಕಾಲಪ್ರತ್ಯಯ + ಆಖ್ಯಾತ ಪ್ರತ್ಯಯ = ಕಾಲಾರ್ಥಕ ಕ್ರಿಯಾಪದ

## ಸಂಭಾವನಾರ್ಥಕ ಕ್ರಿಯಾಪದ

1) ಹವೆ ಹೀಗೆ ಇದ್ದರೆ ಇನ್ನೆರಡು ದಿನಗಳಲ್ಲಿ ಮಳೆ ಬಂದೀತು.

2) ನಾಳೆ ನಾನು ಊರಿಗೆ ಹೋದೇನು.

3) ರಾಮನು ಪೆಟ್ಟು ತಿಂದಾನು.

ಇಲ್ಲಿ ಕ್ರಿಯೆಯನ್ನು ಸೂಚಿಸುವ ಶಬ್ದಗಳು ಯಾವವು ?

ಬಂದೀತು, ಹೋದೇನು, ತಿಂದಾನು,

ಇಲ್ಲಿ ಕ್ರಿಯೆ ನಡೆಯುವದರ ಬಗ್ಗೆ ಸಂದೇಹ ಇಲ್ಲವೆ ನಡೆಯಬಹುದೆಂಬ ತರ್ಕವಿದೆ.

ಮೇಲಿನ 1ನೆಯ ವಾಕ್ಯದಲ್ಲಿಮಳೆ ಬಂದೀತು --- ಎಂದರೆ ಮಳೆ ಬರುವದು ನಿಶ್ಚಿತವಿಲ್ಲ. ಮಳೆಯು ಬರಬಹುದೆಂಬ ತರ್ಕ ಅಥವಾ ಊಹೆ, ಇಲ್ಲವೆ ಮಳೆಯು ಬರುವದರ ಬಗ್ಗೆ ಸಂದೇಹವನ್ನು ಈ ಕ್ರಿಯಾಪದವು ಸೂಚಿಸುವದು. ಇಂಥ ಕ್ರಿಯಾಪದಗಳಿಗೆ ಸಂಭಾವನಾರ್ಥಕ ಕ್ರಿಯಾಪದಗಳು ಎನ್ನುವರು.

## ಸಂಭಾವನಾರ್ಥಕ ಪ್ರತ್ಯಯಗಳು

| | | ಏಕವಚನ | ಬಹುವಚನ |
|---|---|---|---|
| ಉ. ಪು. | | ಏನು | ಏವು |
| ಮ. ಪು | | ಈ, ಈಯೆ | ಈರಿ |
| ಪ್ರ. ಪು. | ಪು. | ಆನು | ಆರು |
| | ಸ್ತ್ರೀ | ಆಳು | ಆರು |
| | ನ. | ಈತು | ಆವು |

''ನಿಲ್ಲು'' ಧಾತುವಿನ ಸಂಭಾವನಾರ್ಥಕ ರೂಪಗಳನ್ನು ಕೆಳಗೆ ಕೊಟ್ಟಿದೆ :

| | | ಏಕವಚನ | ಬಹುವಚನ |
|---|---|---|---|
| ಉ. ಪು. | | ನಿಂತೇನು | ನಿಂತೇವು |
| ಮ. ಪು | | ನಿಂತೀ, ನಿಂತೀಯೆ | ನಿಂತೀರಿ |
| ಪ್ರ. ಪು. | ಪು. | ನಿಂತಾನು | |
| | ಸ್ತ್ರೀ. | ನಿಂತಾಳು, | ನಿಂತಾರು |
| | ನ. | ನಿಂತೀತು, | ನಿಂತಾವು |

**ವಿಧ್ಯರ್ಥಕ ಕ್ರಿಯಾಪದ :** ಈ ವಾಕ್ಯಗಳನ್ನು ಓದಿರಿ.

1) ಸೈನ್ಯವು ಯುದ್ಧಕ್ಕೆ ಸಿದ್ಧವಾಗಲಿ.

2) ಜನರು ಸುಖಿಗಳಾಗಲಿ.

3) ನೀನು ಕೂಡಲೆ ಇಲ್ಲಿಂದ ಹೊರಡು

4) ಗಂಡಾಂತರವನ್ನು ಧೈರ್ಯದಿಂದ ಎದುರಿಸೋಣ. (ಎದುರಿಸುವಾ)

ಈ ವಾಕ್ಯಗಳಲ್ಲಿಸಿದ್ಧವಾಗಲಿ, ಹೊರಡು ಎಂಬ ಕ್ರಿಯಾಪದಗಳು ಅಪ್ಪಣೆ ಕೊಡುತ್ತದೆ. (ಸುಖಿಗಳು) – ಆಗಲಿ ಎಂಬ ಕ್ರಿಯಾಪದವು (ಆಶೀರ್ವದಿಸುವ) ಇಚ್ಛೆಯನ್ನು ಸೂಚಿಸುವದು.

ಎದುರಿಸೋಣ ಎಂಬ ಕ್ರಿಯಾಪದವು ನಮ್ಮ ನಿಶ್ಚಯವಾದ ಇಚ್ಛೆಯನ್ನ ವ್ಯಕ್ತಪಡಿಸುವದು.

ಹೀಗೆ ಅಪ್ಪಣೆ, ಆಶೀರ್ವಾದ, ಇಚ್ಛೆ, ಬೇಡಿಕೆ – ಇಂಥ ಕ್ರಿಯೆಗಳನ್ನು ಸೂಚಿಸುವ ಕ್ರಿಯಾಪದಗಳಿಗೆ **ವಿಧ್ಯರ್ಥಕ ಕ್ರಿಯಾಪದ**ಗಳೆನ್ನುವರು.

ವಿಧ್ಯರ್ಥಕ ಆಖ್ಯಾತ ಪ್ರತ್ಯಯಗಳು :

| | ಏಕವಚನ | ಬಹುವಚನ |
|---|---|---|
| ಉ. ಪು. | ಉವೆ, ಅಲಿ | ಓಣ, ಉವ |
| ಮ. ಪು | ಉ | ಇರಿ, ಇ |
| ಪ್ರ. ಪು.(ಪುಂ. ಸ್ತ್ರೀ. ನ.) | ಅಲಿ | ಅಲಿ |

''ಮಾಡು'' ಧಾತುವಿನ ವಿಧ್ಯರ್ಥಕ ರೂಪಗಳು :

| | ಏಕವಚನ | ಬಹುವಚನ |
|---|---|---|
| ಉ. ಪು. | ಮಾಡುವೆ ಮಾಡಲಿ | ಮಾಡೋಣ, ಮಾಡುವ |
| ಮ. ಪು | ಮಾಡು | ಮಾಡಿರಿ, ಮಾಡಿ |
| ಪ್ರ. ಪು.(ಪುಂ. ಸ್ತ್ರೀ. ನ.) | ಮಾಡಲಿ | ಮಾಡಲಿ |

## ಅಭ್ಯಾಸ

**ಕೆಳಗಿನ ವಾಕ್ಯಗಳಲ್ಲಿಯ ಕ್ರಿಯಾಪದಗಳು ಯಾವ ಪ್ರಕಾರದವು ಎಂಬದನ್ನು ಹೇಳಿರಿ.**

(1) ನಮ್ಮ ದೇಶವು ಅನೇಕ ವೀರ ಮಹಿಳೆಯರಿಗೆ ಜನ್ಮಕೊಟ್ಟಿದೆ.

(2) ನಾವೆಲ್ಲರೂ ಒಗ್ಗಟ್ಟಿನಿಂದ ಬಾಳೋಣ.

(3) ಸಿ.ವ್ಹಿ. ರಾಮನ್ನರಿಗೆ ನೊಬೆಲ್ ಬಹುಮಾನ ಸಿಕ್ಕಿತು.

(4) ನೀವು ಮೈಮುರಿದು ದುಡಿಯಿರಿ.

(5) ಹೀಗೆಯೇ ಮಳೆ ಸುರಿದರೆ ಅವರ ಗುಡಿಸಲುಗಳು ಕೊಚ್ಚಿ ಹೋದಾವು.

(6) ಹೊಸ ವರುಷವು ಹೊಸ ಹರುಷವನ್ನು ತರಲಿ.

(7) ವಿದ್ಯಾವಂತನನ್ನು ಎಲ್ಲರು ಗೌರವಿಸುವರು.

(8) ಅವನಿಗೆ ಮಂತ್ರಿಪದವಿ ದೊರಕೀತು.

(9) ಜಿದ್ದುಳ್ಳವನು ಗೆದ್ದಾನು.

10) ರವಿ ಕಾಣದ್ದನ್ನು ಕವಿ ಕಾಣುವನು.

11) ವನಸುಮದಂತೆ ನಮ್ಮ ಜೀವನವು ವಿಕಸಿಸಲಿ.



# इयत्ता १ ली ते ८ वी साठीची पाठ्यपुस्तक मंडळाची वैशिष्ट्यपूर्ण पुस्तके

- मुलांसाठीच्या संस्कार कथा
- बालगीते
- उपयुक्त असा मराठी भाषा शब्दार्थ संग्रह
- सर्वांच्या संग्रही असावी अशी पुस्तके
- स्फूर्तीगीत
- गीतमंजुषा
- निवडक कवी, लेखक यांच्या कथांनी युक्त पुस्तक




















पुस्तक मागणीसाठी www.ebalbharati.in, www.balbharati.in संकेतस्थळावर भेट द्या.

**साहित्य पाठ्यपुस्तक मंडळाच्या विभागीय भांडारांमध्ये विक्रीसाठी उपलब्ध आहे.**

ebalbharati

विभागीय भांडारे संपर्क क्रमांक : पुणे - ☎ २५६५९४६५, कोल्हापूर- ☎ २४६८५७६, मुंबई (गोरेगाव) - ☎ २८७७१८४२, पनवेल - ☎ २७४६२६४६५, नाशिक - ☎ २३९१५११, औरंगाबाद - ☎ २३३२१७१, नागपूर - ☎ २५४७७१६/२५२३०७८, लातूर - ☎ २२०९३०, अमरावती - ☎ २५३०९६५



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ

बालभारती इयत्ता ७ वी (कन्नड)

₹ 46.00